ನಿಯಮ 68ರ ಮೇರೆಗೆ

ವಿಷಯ:- ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ವಿಫಲವಾದ ಪ್ರಯುಕ್ತ ಅವುಗಳನ್ನು ಬದಲಾವಣೆ ಮಾಡದೆ ಇರುವುದರಿಂದ ರೈತರಿಗೆ ಹಾಗೂ ಗ್ರಾಹಕರಿಗೆ ಉಂಟಾಗಿರುವ ತೊಂದರೆ.

† ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ):- ಸನ್ಮಾನ್ಯ ಅಧ್ಯಕ್ಷರೇ ಒಂದು ವಾರದ ಆನಂತರ ಕಡೇ ಪಕ್ಷ ನಮ್ಮನ್ನು ಮಾತಾಡಲಿಕ್ಕೆ ಕರೆದಿರಿ ಅಂತ ಸಮಾಧಾನ ಪಟ್ಟುಕೊಂಡು ತಮಗೆ ಅಭಿನಂದಿಸಿ, ನಾವು ಈ ವಿಧಾನಸಭೆಯ ಸದಸ್ಯರಾಗಿರುವುದು ತಮ್ಮ ಗಮನದಲ್ಲಿದೆಯಲ್ಲ ಎಂದು ಸಂತೋಷಪಟ್ಟು ಒಂದೆರಡು ಮಾತನ್ನು ರೈತರ ಪರವಾಗಿ ಆಡಲಿಕ್ಕೆ ಇಷ್ಟಪಡುತ್ತೇನೆ. ಇದೊಂದು ಭಾರಿ ಮಹತ್ವದ ವಿಷಯ ಏಕೆಂದರೆ ಕರ್ನಾಟಕ ಸರ್ಕಾರ ಪ್ರತಿವರ್ಷ 60 ರಿಂದ 65 ಸಾವಿರ ಹೊಸ ಇರಿಗೇಶನ್ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಒದಗಿಸುವುದು, ಮತ್ತೆ 750 ರಿಂದ 1000 ಹಳ್ಳಿಗೆ ಗ್ರಾಮೀಣ ವಿದ್ಯುತ್ ಪೂರೈಕೆ ಮಾಡುವ ಆಲೋಚನೆ ಹಾಕಿಕೊಂಡು ಅದಕ್ಕೋಸ್ಕರ ಗುರಿಯನ್ನು ನಿಗದಿಮಾಡಿ ಹೊರಟಿರುವ ಸರ್ಕಾರದ ಮುಂದೆ, 100 ದಿವಸದೊಳಗೆ ಅಭಿವೃದ್ಧಿ ಕಾರ್ಯಕ್ರಮವನ್ನು ಎಲ್ಲಾ ಪರಿಶೀಲನೆ ಮಾಡಿ ಪ್ರಗತಿ ತೋರಿಸುತ್ತೇವೆ ಎನ್ನುವ ಮುಖ್ಯಮಂತ್ರಿಗಳ ಮುಂದೆ ನಾವು ಏಕೆ ಪ್ರಸ್ತಾಪ ಮಾಡುತ್ತಿದ್ದೇವೆಂದರೆ ಸ್ವಾಮಿ, ಯಾವುದೇ ಪ್ರಗತಿಗೆ ಇವತ್ತು ವಿದ್ಯುತ್ ಮೂಲಾಧಾರ. ದುರದೃಷ್ಟ, ಇವತ್ತು ನಿಮ್ಮ ಪ್ರಗತಿ ಮುಂದೆ ಹೋಗುವುದು ಬೇಡ ನಾವು ಹಿಂದೆ ಹೋಗುತ್ತಿದ್ದೇವೆ. ನಾನು ಪ್ರಮುಖವಾಗಿ ಟ್ರಾನ್ಸ್‌ಫಾರ್ಮರ್ ವಿಷಯ ಪ್ರಸ್ತಾಪ ಮಾಡಬೇಕೆಂದು ಇಲ್ಲಿ ಏಕೆ ಬಯಸುತ್ತೇನೆ ಎಂದರೆ ನನಗೆ ಈ ರಾಜ್ಯದ ಮಾಹಿತಿ ಇಲ್ಲ ಏಕೆಂದರೆ ಸಂಬಂಧಪಟ್ಟವರು ಪೂರಾ ರಾಜ್ಯದ ಮಾಹಿತಿ ಕೇಳಿ ನಾನು 10 ಸಲ ಫೋನ್ ಮಾಡಿದರೂ ನಮ್ಮ ಚೀಫ್ ಇಂಜಿನಿಯರ್, ಎಂ.ಎಂ.ಪಿ. ಅವರು ಕೊಡಲಿಲ್ಲ. ಅದಕ್ಕೆ ಸರ್ಕಾರ ಏನು ನಿರ್ಧಾರ ತೆಗೆದುಕೊಳ್ಳುತ್ತದೆಯೋ ತೆಗೆದುಕೊಳ್ಳಲಿ ಎಂದು ಹೇಳುತ್ತೇನೆ. ನನಗೆ ದೊರೆತಿರುವ ಡಿವಿಜನ್ ಮಾಹಿತಿಯಿಂದ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ತುಮಕೂರು ಡಿವಿಜನ್‌ನಲ್ಲಿ ಕಳೆದ ವರ್ಷ ಏಪ್ರಿಲ್ 1 ರಿಂದ ಡಿಸೆಂಬರ್‌ರವರೆಗೆ 866 ಟ್ರಾನ್ಸ್‌ಫಾರ್ಮರ್ ಫೇಲ್ ಆಗಿದೆ. ಬೇರೆ ಬೇರೆ ಕೆಪಾಸಿಟಿಯಲ್ಲಿ ಫೇಲಾಗಿದೆ. ಇದನ್ನು ರಿಪ್ಲೇಸ್ ಮಾಡುವುದಕ್ಕೆ ಎರಡು ತಿಂಗಳು, ಎರಡೂವರೆ ತಿಂಗಳು, ಮೂರು ತಿಂಗಳು ಕೆ.ಇ.ಬಿ.ಯವರು ತೆಗೆದುಕೊಂಡಿದ್ದಾರೆ. ಪ್ರತಿ ಸ್ಟಾಂಡಿಂಗ್ ಕ್ರಾಪ್, ನಾವು ಏನು ಬೆಳೆ ಇಟ್ಟಿದ್ದೆವು ಭತ್ತ ಇರಬಹುದು, ಕಡಲೆಕಾಯಿ ಇರಬಹುದು, ತೆಂಗು ಇರಬಹುದು, ಅಷ್ಟು ಎರಡೂವರೆ ತಿಂಗಳು ನಾವು ಸಫರ್ ಆಗಿದ್ದೇವೆ. ಇನ್ನೊಂದು ದೋಷ ಏನು ಮಾಡಿದ್ದಾರೆ ಎಂದರೆ ಪಾರ್ಟ್‌ಲಿ ಫೇಲ್ಡ್ ಕಂಪ್ಲೀಟ್‌ಲಿ ಫೇಲ್ಡ್ ಎಂದು ಹೇಳಿ ಇದನ್ನು ವಿಂಗಡಣೆ ಮಾಡಿದ್ದಾರೆ. ಕಂಪ್ಲೀಟ್ ಫೇಲ್ಡ್ ಟ್ರಾನ್ಸ್‌ಫಾರ್ಮರ್ಸ್ ಎಷ್ಟಿತ್ತು? ಪಾರ್ಟಲಿ ಫೇಲ್ಡ್ ಎಷ್ಟಿತ್ತು ಎಂದು ಹೇಳಿ ಒಂದು ಲೆಕ್ಕದಲ್ಲಿ ಕರೆಂಟ್ ಕೊಟ್ಟು ಊರಿಗೆ ಮಾತ್ರ ವಿದ್ಯುತ್ ಪೂರೈಕೆ ಮಾಡಿ ನೀರಾವರಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ತನ್ನು ಪೂರೈಕೆ ಮಾಡಲಿಲ್ಲ. ಹೀಗಾಗಿ ನಮ್ಮ ಭಾಗದಲ್ಲಿ ಬೆಳೆ ನಷ್ಟವಾಗಿದೆ. ಬಾಳೆ ಇಟ್ಟಿದ್ದವರು, ಗದ್ದೆ ಮಾಡಿದ್ದವರು ಮಳೆಗಾಲದಲ್ಲಿ ಇಷ್ಟೊಂದು ಕಷ್ಟವಾಗುತ್ತದೆ ಎಂದು ಯಾರು ನಂಬಿಕೆ ಕಳೆದುಕೊಂಡಿರಲಿಲ್ಲ. ಅವರೆಲ್ಲರೂ ಇಂದು ಕಂಗಾಲಾಗಿದ್ದಾರೆ. ಕೆ.ಇ.ಬಿ. ಮುಂದೆ ಹೋಗಿ ನಾವು ಬೇಡಿದ್ದೇವೆ, ಗೋಳಾಡಿದ್ದೇವೆ, ಗೋಗರೆದಿದ್ದೇವೆ, ಏನಾದರೂ ಮಾಡಿ ಈ ಟ್ರಾನ್ಸ್‌ಫಾರ್ಮರ್ಸ್‌ನ್ನು ಸರಿಮಾಡಿ ಎಂದು ಹೇಳಿದರೆ ನಿಮ್ಮ ಇಲಾಖೆಯವರಿಗೆ ಇದು ಕನ್‌ಸರ್ನ್ ಇಲ್ಲ. ನಿಮ್ಮ ಎಕ್ಸಿಕ್ಯೂಟಿವ್ ಇಂಜಿನಿಯರ್, ನಿಮ್ಮ ಸೂಪರಿಂಟೆಂಡಿಂಗ್ ಇಂಜಿನಿಯರ್ ಹೇಳುತ್ತಾರೆ. ಎಂಟು-ಹತ್ತು ದಿವಸ ಆಯಿತು, ನಮ್ಮ ಲಾರಿ ಕವಿಕಾ ಮುಂದೆ ಹೋಗಿ ನಿಂತುಕೊಂಡು. ಟ್ರಾನ್ಸ್‌ಫಾರ್ಮರ್ಸ್ ಕೊಡುತ್ತಿಲ್ಲ. ನಾನು ಏನೂ ಮಾಡುವ ಹಾಗೆ ಇಲ್ಲ, ಇದು ರಾಜ್ಯದ ಸಮಸ್ಯೆ. ಇದು ಯಾರದೇ ಸಮಸ್ಯೆ ಅಲ್ಲ ಎಂದು ಹೇಳುತ್ತಾರೆ. ನಾನು ಇದನ್ನು ಒತ್ತಿ ಹೇಳುತ್ತಿದ್ದೇನೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಈ ಸಮಸ್ಯೆ

ಏನಾಗಿತ್ತು ಎಂದರೆ ಯಾರು ಕೇಳುವವರಿಲ್ಲದ ಸಮಸ್ಯೆಯಾಗಿತ್ತು. ಬೇಕಾದಷ್ಟು ಕಡೆ ನಾವು ಕೆ.ಇ.ಬಿ. ಇಲಾಖೆಯನ್ನು ಘೇರಾವ್ ಮಾಡಿದ್ದೇವೆ. ಕಡೆಗೆ ಎಲ್ಲಿಗೆ ಬಂದು ನಿಂತುಕೊಂಡಿತು ಎಂದರೆ 500 ರೂಪಾಯಿ, ಸಾವಿರ ರೂಪಾಯಿ ಕೊಟ್ಟವರಿಗೆ ಟ್ರಾನ್ಸ್‌ಫಾರ್ಮರ್ ಕೊಡುವ ಮಟ್ಟಕ್ಕೆ ಬಂದು ನಿಂತುಕೊಂಡಿತು. ನಮ್ಮ ಸನ್ಮಾನ್ಯ ರುದ್ರಪ್ಪನವರ ಕ್ಷೇತ್ರದಲ್ಲಿ ಅವರು ಆದೇಶ ಕೊಟ್ಟರು ರೈತರಿಗೆ, ನೀವೇ ಹೋಗಿ ಟ್ರಾನ್ಸ್‌ಫಾರ್ಮರ್‌ನ್ನು ರಿಪೇರಿ ಮಾಡಿ ತಂದುಕೊಂಡು ಹಾಕಿಕೊಳ್ಳಿ, ನಾವು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ಆದೇಶವನ್ನು ಕೊಟ್ಟರು. ಎರಡು ಸಾವಿರ ಮೂರು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಟ್ರಾನ್ಸ್‌ಫಾರ್ಮರನ್ನು ರೈತರು ರಿಪೇರಿ ಮಾಡಿ ಹಾಕಿಸಿಕೊಂಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಇದ್ದಂಥ ನಿಮ್ಮ ಎ.ಇ.ಇ. ಅವರು ಲೋಕಾಯುಕ್ತದ ಬಲೆಗೆ ಬಿದ್ದು ಸಸ್ಪೆಂಡ್ ಆದ. ಟ್ರಾನ್ಸ್‌ಫಾರ್ಮರನ್ನು ರಿಪ್ಲೇಸ್ ಮಾಡುವುದಕ್ಕೆ 500 ರೂಪಾಯಿ ತೆಗೆದುಕೊಳ್ಳಬೇಕಾದರೆ ಈ ವಿಷಯಗಳನ್ನೆಲ್ಲಾ ನಾವು ನಿಮ್ಮ ಬೋರ್ಡ್‌ಗೆ, ನಿಮ್ಮ ಚೀಫ್ ಇಂಜಿನಿಯರ್ (ಜನರಲ್)ರವರಿಗೆ, ನಿಮ್ಮ ಚೀಫ್ ಇಂಜಿನಿಯರ್ ಎಂ.ಎಂ.ಪಿ.ಯವರಿಗೆ ತಂದೆವು. ನಿಮ್ಮ ಚೀಫ್ ಇಂಜಿನಿಯರ್ ಎಂ.ಎಂ.ಪಿ.ಯವರ ಹತ್ತಿರ, ನಾನು ಹತ್ತು ಸಲ ಮಾತನಾಡಿರಬಹುದು. ನನಗೆ ಯಾವುದೇ ಟ್ರಾನ್ಸ್‌ಫಾರ್ಮರ್ ಬರಲಿಲ್ಲ. ಏನಾದರೂ ಟ್ರಾನ್ಸ್‌ಫಾರ್ಮರ್ ಬಂತು ಎಂದು ಹೇಳಿದರೆ ನನ್ನ ಪುಣ್ಯಕ್ಕೆ ಇದ್ದವರು ಯಾರೋ ಒಬ್ಬರು ಸಣ್ಣಪುಟ್ಟ ಅಧಿಕಾರಿಗಳು ಅಲ್ಲಿ ಸಣ್ಣಪುಟ್ಟ ರಿಪೇರಿ ಮಾಡಿ ರೈತರಿಗೆ ಸಿಕ್ಕ ಟ್ರಾನ್ಸ್‌ಫಾರ್ಮರನ್ನು ಜೋಡಿಸಿದ್ದಾರೆಯೇ ಹೊರತು ಅಷ್ಟು ಬಿಟ್ಟರೆ ಇಡೀ ವರ್ಷ ಕೆ.ಇ.ಬಿ.ಯಲ್ಲಿ ಟ್ರಾನ್‌ಫಾರ್ಮರನ್ನು ಹಾಕಲಿಲ್ಲ. ಎರಡು, ಎರಡೂವರೆ ತಿಂಗಳು ರಿಪ್ಲೇಸ್ ಮಾಡಲೇ ಇಲ್ಲ. ನಾನು ತಮಗೆ ಈ ಇಲಾಖೆಯ ಬಗ್ಗೆ ವಿಶೇಷವಾಗಿ ಹೇಳಬೇಕೆಂದರೆ ತಮಗೆ ಗೊತ್ತಿರಬೇಕು, ಮಳೆಗಾಲದಲ್ಲಿ ಇವರು ಹೊಸ ಟ್ರಾನ್ಸ್‌ಫಾರ್ಮರನ್ನು ಹಾಕಬೇಕು. ಅಡಿಷನಲ್ ಟ್ರಾನ್ಸ್‌ಫಾರ್ಮರ್ಸ್ ಮತ್ತೆ ಕೆಪಾಸಿಟಿ ಎನ್‌ಹ್ಯಾನ್ಸ್ ಮಾಡಿದ ಟ್ರಾನ್ಸ್‌ಫಾರ್ಮರ್ಸ್‌ನ್ನು ಹಾಕಬೇಕಾಗಿತ್ತು. ಪ್ರತಿ ತಾಲ್ಲೂಕಿನಲ್ಲಿ 300 ರಿಂದ 400 ಹೊಸ ಟ್ರಾನ್ಸ್‌ಫಾರ್ಮರ್ಸ್‌ನ್ನು ಹಾಕಬೇಕಾದ ಪರಿಸ್ಥಿತಿ ಇತ್ತು. ಆರು ತಾಲ್ಲೂಕುಗಳಲ್ಲಿ ಬರುವ ಒಂದು ತುಮಕೂರು ಡಿವಿಜನ್‌ಗೆ ಆರೂವರೆ ಸಾವಿರ ಐಪಿ ಸೆಟ್ ಟಾರ್ಗೆಟ್ ಇತ್ತು. ಹೋದವರ್ಷವೇ ನಮಗೆ ಪವರ್‌ಲೋಡ್ ಇರಲಿಲ್ಲ, ನಮಗೆ ವೋಲ್ಟೋಜ್ ಇರಲಿಲ್ಲ. ಅದರ ಮೇಲೆ ಆರೂವರೆ ಸಾವಿರ ನೀವು ಐಪಿ ಸೆಟ್ ಕೊಟ್ಟಿರಿ, ಸುಮಾರು 600 ರಿಂದ 700 ಹಳ್ಳಿಗಳನ್ನು ಎನರ್ಜೈಸ್ ಮಾಡಿಕೊಟ್ಟಿರಿ, ಒಂದು ಹೊಸ ಟ್ರಾನ್ಸ್‌ಫಾರ್ಮರ್ಸ್‌ನ್ನು ನಿಮ್ಮ ಇಲಾಖೆಯವರು ಹಾಕಲಿಕ್ಕಾಗಲಿಲ್ಲ. ಒಂದೇ ಒಂದು ಟ್ರಾನ್ಸ್‌ಫಾರ್ಮರನ್ನು ಕೆ.ಇ.ಬಿ.ಯವರು ಮಳೆಗಾಲದಲ್ಲಿ ಹಾಕಲಿಲ್ಲ. ಮಳೆಗಾಲದಲ್ಲಿ ಸಿಸ್ಟಂ ಇಂಪ್ರೂವ್‌ಮೆಂಟ್‌ಗೆ ಇವರು ಮಹತ್ವವನ್ನು ಕೊಡಬೇಕಾಗಿತ್ತು. ಏತಕ್ಕೆ? ಬೇಸಿಗೆ ಕಾಲದಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ಸಮಸ್ಯೆಯನ್ನು ಬಗೆಹರಿಸುವುದು ಯಾವುದೇ ಇಲಾಖೆಗೆ ಕಷ್ಟ. ನಿಮ್ಮ ಕೆ.ಇ.ಬಿ.ಗೂ ಕಷ್ಟ. ಡಿವಿಜನ್ ಆಫೀಸ್‌ಗೂ ಕಷ್ಟ. ಮಳೆಗಾಲದಲ್ಲಿ ನೀವು ಫೇಲ್ಯೂರ್ಸ್‌ನ್ನು ಕಂಪ್ಲೀಟ್ ಆಗಿ ರಿಪ್ಲೇಸ್ ಮಾಡಲಿಲ್ಲ. ಒಂದು ಟ್ರಾನ್ಸ್‌ಫಾರ್ಮರ್ ಹಾಕಲಿಲ್ಲ. ಹಾಗಾಗಿ ನನ್ನ ಕ್ಷೇತ್ರವಾದ ಚಿಕ್ಕನಾಯಕನಹಳ್ಳಿಯಲ್ಲಿ 200 ಐಪಿ ಸೆಟ್ ಟಾರ್ಗೆಟ್ ಪ್ರಕಾರ ಆ ತಿಂಗಳಲ್ಲಿ ಹಾಕಬೇಕಾದದ್ದು ಟ್ರಾನ್ಸ್‌ಫಾರ್ಮರ್ ಇಲ್ಲದೇ ನಿಂತುಹೋಗಿದೆ. ಒಂದು ಕಾಗದ ಬರೆಯುತ್ತಾರೆ ನಿಮ್ಮದು ಸರ್ವೀಸ್ ತೆಗೆದುಕೊಳ್ಳಿ ಎಂದು. ಹಿಂದಿನಿಂದ ಇನ್ನೊಂದು ಕಾಗದವನ್ನು ಬರೆಯುತ್ತಾರೆ, ಟ್ರಾನ್ಸ್‌ಫಾರ್ಮರ್‌ನಲ್ಲಿ ಲೋಡ್ ಜಾಸ್ತಿಯಾಗಿದೆ, ಸರ್ವೀಸ್ ಕೊಡಲಿಕ್ಕಾಗುವುದಿಲ್ಲ ಎಂದು. ತಮಗೇನಾದರೂ ಈ ಪ್ರಗತಿಯ ಬಗ್ಗೆ ನಿಜವಾದ ಆಸಕ್ತಿ ಇದ್ದರೆ ಕೆ.ಇ.ಬಿ.ಯ ಒಂದು ಪ್ರಗತಿಯನ್ನು ತಾವು ತರಿಸಿಕೊಂಡು ನೋಡಬೇಕು. ತಾವು ಸಭೆಯನ್ನು ಕರೆದಿದ್ದ ದಿವಸವೇ ಕೇಳಿದೆ, ನಮಗೆ ಏನೂ ಮಾಡಬೇಡಿ, ಸ್ಟೆಬಿಲೈಜ್ಡ್ ಪವರನ್ನು ಎಷ್ಟು ಗಂಟೆ ಕೊಡುತ್ತಿದ್ದೀರಿ, ನೀವು ಅಷ್ಟು ಗಂಟೆ ಕೊಟ್ಟರೆ ನಿಮಗೆ ನಾವು ಋಣಿಗಳಾಗಿರುತ್ತೇವೆ, ಎಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳೇ ಕೇಳಿದ್ದೆ. ನಾನು ಒಳ್ಳೆಯ

ರೈತ ಸಂಸಾರದಿಂದ ಬಂದು ತಮಗೆ ಹೇಳುತ್ತಿದ್ದೇನೆ, ಕಣ್ಣಲ್ಲಿ ನಾವು ನೀರು ಹಾಕಿದ್ದೇವೆ. ಇವತ್ತು ನಮ್ಮ ಗ್ರಾಮದ ಸ್ಥಿತಿಯನ್ನು ತಮಗೆ ಹೇಳುತ್ತೇನೆ. ಆರು ಗಂಟೆ ಪವರ್ ಕಟ್, ರಾತ್ರಿ ಮೂರು ಗಂಟೆ ನಿಮ್ಮದು ಸಿಂಗಲ್ ಫೇಸ್ ಪವರ್ ಕೊಡುತ್ತಿದ್ದೀರಿ. ಏತಕ್ಕೆ ವೋಲ್ಟೇಜ್ ಇಲ್ಲ ಎಂದು ಹೇಳಿ? ಮತ್ತೆ ನನ್ನ ಗ್ರಾಮದಲ್ಲಿ ಪ್ರತಿದಿವಸ ನಿಮ್ಮ ಟ್ರಾನ್ಸ್‌ಫಾರ್ಮರ್ ಫೇಲ್ ಆಗುತ್ತದೆ. ನಾನು ಯಾರನ್ನಾದರೂ ಹುಡುಗರನ್ನು ಕಳುಹಿಸಿ ಹಾಕರಯ್ಯಾ ನಾನು ನೋಡುತ್ತೇನೆ, ಕೆಇಬಿ ಇಂಜಿನಿಯರ್‌ಗೆ ಹೇಳುತ್ತೇನೆ ಎನ್ನುವ ಪರಿಸ್ಥಿತಿ ನಿರ್ಮಾಣ ಆಗಿದೆ. ಚಿಕ್ಕನಾಯಕನಹಳ್ಳಿ, ತುಮಕೂರು ಡಿವಿಜನ್‌ನಲ್ಲಿ ಇವತ್ತು 500 ಟ್ರಾನ್ಸ್‌ಫಾರ್ಮರ್ಸ್ ಬರೀ ಕುಡಿಯುವ ನೀರಿಗಾಗಿ ಹಾಕಬೇಕಾಗಿದೆ. ಡ್ರಿಂಕಿಂಗ್ ವಾಟರ್‌ದು ಇವತ್ತು ಏನಾದರೂ 50% ಪ್ರಗತಿ ನಿಂತಿದೆ ಎಂದು ಹೇಳಿದರೆ ನಿಮ್ಮ ಟ್ರಾನ್ಸ್‌ಫಾರ್ಮರ್‌ನಿಂದ ನಿಂತಿದೆ. ಈ ಸಿಸ್ಟಂ ಇಂಪ್ರೂವ್‌ಮೆಂಟ್ ಕೆಳಗೆ ಸ್ವಲ್ಪ ತಾವು ನೋಡಬೇಕಾಗುತ್ತದೆ. ಸಿಸ್ಟಂ ಇಂಪ್ರೂವ್‌ಮೆಂಟ್ ಬೋರ್ಡ್ ಕೆಳಗೆ ನಿಮ್ಮ ಕೆಇಬಿ ಬೋರ್ಡ್‌ನವರು ಕೆಲಸ ಮಾಡಬೇಕಿತ್ತು. ಕೆಇಬಿ ಗ್ರಾಂಟ್ಸ್‌ನಲ್ಲಿ ಕೆಲಸ ಮಾಡಬೇಕಿತ್ತು. ಇಡೀ ವರ್ಷ ಕೆಇಬಿ ಗ್ರಾಂಟ್ಸ್‌ನ್ನು ಫೇಲ್ ಆಗಿರುವ ಟ್ರಾನ್ಸ್‌ಫಾರ್ಮರ್ ಅನ್ನು ರಿಪ್ಲೇಸ್ ಮಾಡಲಿಕ್ಕೆ ಬಳಸಿರುವುದನ್ನು ಬಿಟ್ಟರೆ ಒಂದೇ ಒಂದು ಹೊಸ ಟ್ರಾನ್ಸ್‌ಫಾರ್ಮರ್ ಅನ್ನು ಕೆಇಬಿ ಬೋರ್ಡಿನಿಂದ ಹಾಕಿಕೊಡುವುದಕ್ಕೆ ಆಗಿಲ್ಲ. ಇನ್ನು ಆರ್.ಇ.ಸಿ ಕೆಳಗಡೆ, ಆರ್.ಇ.ಸಿ. ಕೆಳಗಡೆ ಏನು ಟ್ರಾನ್ಸ್‌ಫಾರ್ಮರ್ ಹಾಕಬೇಕಿತ್ತು ಒಂದೇ ಒಂದು ಆರ್.ಇ.ಸಿ. ಪ್ರೋಗ್ರಾಮ್ ಕೆಳಗಡೆ ನಮಗೆ ಹಾಕಲಿಲ್ಲ. ಇಡೀ ಆರ್.ಇ.ಸಿ ಪ್ರೋಗ್ರಾಮ್ ಏನು ಇತ್ತು, ಅದು ಸ್ಟ್ಯಾಗ್ನಂಟ್ ಆಗಿದೆ. ಯಾವುದೇ ಹೊಸ ಹಳ್ಳಿಗೆ ಕರೆಂಟ್ ಕೊಟ್ಟಿಲ್ಲ. ಸುಮಾರು 50–90 ಐಪಿ ಸೆಟ್‌ಗೆ ತಿಂಗಳಿಗೆ ಪವರ್ ಕೊಡಬೇಕು ಎಂದು ತಾವು ಟಾರ್ಗೆಟ್ ಕೊಟ್ಟಿದ್ದೀರಿ, ಮತ್ತೆ ಬೋರ್ಡ್‌ನವರು, 50 ಐಪಿ ಸೆಟ್‌ಗೆ ಕೂಡ ಪವರ್ ಕೊಡುತ್ತಾ ಇಲ್ಲ. ನಾವು ಯಾರೂ ಇವತ್ತು ಹಳ್ಳಿಯಲ್ಲಿ ಟಿವಿ ನೋಡುತ್ತಾ ಇಲ್ಲ. ಏಕೆ ತಮಗೆ ಹೇಳುತ್ತಿದ್ದೇನೆ. ನಮ್ಮ ಗ್ರಾಮದಲ್ಲಿ 170–180ರಿಂದ ಮಾತ್ರ ವೋಲ್ಟೇಜ್ ಇದೆ. 180 ಬಂದರೆ ದೊಡ್ಡ ವೋಲ್ಟೇಜ್. ಪಂಪುಸೆಟ್ಟುಗಳು ಸುಟ್ಟು ಹೋಗಿವೆ, ಮನೆ ಟಿವಿಗಳು ಸುಟ್ಟು ಹೋಗಿವೆ, ವಿಸಿಆರ್‌ಗಳು ಸುಟ್ಟು ಹೋಗಿದೆ; ಯಾರನ್ನೂ ನಾವು ಸ್ಯೂ ಮಾಡುವ ಹಾಗೆ ಇಲ್ಲ. ನಿಮ್ಮ ಎಲೆಕ್ಟ್ರಿಸಿಟಿ ಆಕ್ಟ್ ತೆಗೆದು ತಾವು ಓದಬೇಕು, ಪ್ಲಸ್ ಆರ್ ಮೈನಸ್ ಫೈವ್ ಆಫ್ ಸ್ಟಾಂಡರ್ಡ್ ವೋಲ್ಟೇಜ್ ಎಂದು ಇದೆ. 415 ಸ್ಟ್ಯಾಂಡರ್ಡ್ ಇರುವುದರಲ್ಲಿ plus or minus 5% ನಲ್ಲಿ ಮೇಂಟೇನ್ ಮಾಡಬೇಕು ಎಂದು ಇದೆ. 360 ರಿಂದ 380 ಮಿನಿಮಮ್ ವೋಲ್ಟೇಜ್ ತಾವು ಕೊಡಬೇಕಾಗಿತ್ತು, ಕೊಡಲೇ ಇಲ್ಲ. ಸ್ಟ್ಯಾಂಡರ್ಡ್ ಇರುವುದು 415. ಅದರಲ್ಲಿ ಪ್ಲಸ್ ಆರ್ ಮೈನಸ್ ಕೊಡಬೇಕು ಎಂದು ಇ.ಸಿ ಆಕ್ಟ್ ಹೇಳುತ್ತದೆ ಇದನ್ನು ಯಾರೂ ತೆಗೆದು ಓದಲಿಲ್ಲ. ಏಕೆ ನಮಗೆ ನಿಮ್ಮ ಅಗ್ರೀಮೆಂಟ್ ಅರ್ಥ ಆಗಿಲ್ಲವೆ? ಇಂಗ್ಲೀಷ್‌ನಲ್ಲಿದೆ, ಯೂನಿಲ್ಯಾಟರಲ್ ಅಗ್ರೀಮೆಂಟ್. ಕೆಇಬಿಯವರಿಗೆ ತೋರಿಸಿದಾಗ ಆರ್ಟಿಕಲ್ ಸಮೇತ ನಾವು ಅದ ಇಟ್ಟು ನಿಮಗೆ ರುಜುವಾತು ಕೊಟ್ಟಿದ್ದೇವೆ. ಈಗ ಏನು ಕೇಳಿದರೂ ಸೈನ್. ನೀವು ಏನು ಕೇಳಿದರೂ ನಾವು ಸೈನ್ ಹಾಕಬೇಕು. ನಮ್ಮ ಸೈನ್ ಇಲ್ಲದೆ ನಿಮ್ಮ ಸರ್ವೀಸ್ ಆಗುವುದಿಲ್ಲ; ಐಪಿ ಸೆಟ್ ಆಗುವ ಹಾಗೆ ಇಲ್ಲ, ನಮ್ಮ ಮನೆಯೂ ಆಗುವ ಹಾಗೆ ಇಲ್ಲ. ಪುಟಗಟ್ಟಲೆ ಸೈನ್ ಹಾಕಬೇಕು. ನಾಲ್ಕು ಕಡೆ ಸೈನ್ ಹಾಕಬೇಕು. ಒಂದು ಕಡೆ ಅಲ್ಲ. ಬ್ಯಾಂಕ್‌ನವರನ್ನು ಟಾಲರೇಟ್ ಮಾಡಬಹುದು. ನಿಮ್ಮ ಕೆಇಬಿ ಅವರನ್ನು ಸೈನ್ ವಿಷಯದಲ್ಲಿ ಟಾಲರೇಟ್ ಮಾಡುವುದಕ್ಕೆ ಆಗುವುದಿಲ್ಲ. ಈ ಕಡೆ ಏನು ಆಗಿದೆ? ತಾವು ಕರೆದು ಕೇಳಬೇಕಾಗುತ್ತದೆ. ಒಂದು ಹೊಸ ಟ್ರಾನ್ಸ್‌ಫಾರ್ಮರ್ ಅನ್ನು ಚಿಕ್ಕನಾಯಕನಹಳ್ಳಿಗೆ ಈ ವರ್ಷ ಹಾಕಬೇಕಾಗಿದೆ. ಒಂದೇ ಒಂದು ಹೊಸ ಟ್ರಾನ್ಸ್‌ಫಾರ್ಮರ್ಸ್‌ನ್ನು ಈ ವರ್ಷ ಹಾಕಿದ್ದರೆ ಸಾಕಾಗಿತ್ತು ಎರಡು ತಿಂಗಳು ಎರಡೂವರೆ ತಿಂಗಳು, ಮೂರು ತಿಂಗಳು ಟ್ರಾನ್ಸ್‌ಫಾರ್ಮರ್ ಅನ್ನು ಪೆಂಡಿಂಗ್ ಇಟ್ಟಿದ್ದಾರೆ. ನೀವು ಇ.ಸಿ. ಆಕ್ಟನ್ನು ಮತ್ತೆ ಓದಬೇಕಾಗುತ್ತದೆ. ಒಂದು ಸಲ ನೀವು ಸಪ್ಲೈ ಕೊಟ್ಟ ಮೇಲೆ You should provide regular power supply. 24 ಅಥವಾ 48 ಗಂಟೆಗಳಲ್ಲಿ

ಹಿಂದೆ ಇದ್ದ ಕೆಇಬಿಯವರು ಟ್ರಾನ್ಸ್‌ಫಾರ್ಮರ್ಸ್‌ನ್ನು ರಿಪ್ಲೇಸ್ ಮಾಡುತ್ತಿದ್ದರು. ಇವತ್ತು ನಾವು ಯಾರಿಗೆ ಹೇಳಬೇಕಾಗಿದೆ. ಕೆಇಬಿ ಮುಂದೆ ಹರತಾಳ ಮಾಡುತ್ತೀರಾ, ಮಾಡಿಕೊಳ್ಳಿ. ಏನು ಮಾಡುತ್ತೀರಾ ಮಾಡಿಕೊಳ್ಳಿ. ಇದರ ಜೊತೆಗೆ ಏನು ಆಗಿದೆ ಎಂದರೆ ಯಾರೂ ನಿಗಾ ವಹಿಸುತ್ತಾ ಇಲ್ಲ. ಒಂದು ವೈರ್ ಡಿಸ್ಕನೆಕ್ಟ್ ಆದರೆ, ಪವರ್ ಪಾಸ್ ಆಗದೇ ಇದ್ದರೆ ನಿಮ್ಮವರು ಟ್ರಾನ್ಸ್‌ಫಾರ್ಮರ್ ಅನ್ನು ಲಾರಿಗೆ ತುಂಬಿ ಇವತ್ತು ಕವಿಕಾ ಮುಂದೆ ಕಳಿಸುತ್ತಾ ಇದ್ದಾರೆ. ಯಾವ ಇಂಜಿನಿಯರ್ ಸಹ ಟ್ರಾನ್ಸ್‌ಫಾರ್ಮರ್ ಏನಾಗಿದೆ ಎಂದು ತೆಗೆದುನೋಡುತ್ತಾ ಇಲ್ಲ. ಟ್ರಾನ್ಸ್‌ಫಾರ್ಮರ್ ನಾನೇ ಇಲ್ಲಿ ರಿಪೇರಿ ಮಾಡಬಹುದೇ ಮಾಡುವುದಕ್ಕೆ ಸಾಧ್ಯವೇ ಇಲ್ಲವೇ ಯಾವುದೂ ಅವರಿಗೆ ಬೇಕೇ ಆಗಿಲ್ಲ. ರೈತರು ಏನಾದರೂ ಹೋದರೆ ನಮ್ಮ ಪ್ರಾಬ್ಲಮ್ ಇಲ್ಲ 8 ದಿವಸ ಆಯಿತು, 10 ದಿವಸ ಆಯಿತು, ನಿಮ್ಮ ಲಾರಿ ಬಂದು ಕವಿಕಾ ಮುಂದೆ ನಿಲ್ಲುತ್ತವೆ. ಇವತ್ತು ತೆಗೆಸಿ ನಿಮ್ಮ ರೆಕಾರ್ಡ್‌ನ್ನು 10–12 ಲಾರಿಗಳು ಕವಿಕಾ ಫ್ಯಾಕ್ಟರಿ ಮುಂದೆ ನಿಂತಿವೆ. ಕವಿಕಾನಲ್ಲಿ ಟ್ರಾನ್ಸ್‌ಫಾರ್ಮರ್ಸ್ ಕೊಂಡಿರಿ, ಪ್ರೈವೇಟ್‌ನಲ್ಲಿ ಟ್ರಾನ್ಸ್‌ಫಾರ್ಮರ್ಸ್ ಕೊಂಡಿರಿ, ಎನ್‌ಜಿಎಫ್‌ನಲ್ಲಿ ಟ್ರಾನ್ಸ್‌ಫಾರ್ಮರ್ಸ್ ಕೊಂಡಿರಿ. ಒಂದೊಂದು ಡಿವಿಜನ್ 900–1000 ಟ್ರಾನ್ಸ್‌ಫಾರ್ಮರ್ಸ್ ರೀಪ್ಲೇಸ್ ಆದು ಮಾಡಿದರೆ ಅಂದಮೇಲೆ 65 ಸಾವಿರ ಐ.ಪಿ. ಸೆಟ್ ಅನ್ನು ತಾವು ಈ ವರ್ಷ ಕೊಟ್ಟಿದ್ದಕ್ಕೆ ಪವರ್ ಎಲ್ಲಿಂದ ಕೊಟ್ಟಿರಿ. ನಿಮ್ಮ ಪ್ರೆಜರ್ ಅನ್ನು ಯಾವ ಫೀಡರ್ ಹೊತ್ತುಕೊಂಡು ಹೋಗುತ್ತದೆ. ಶಿವಮೊಗ್ಗ ಬಿಟ್ಟರೆ ಪೀಣ್ಯದಲ್ಲಿ ರಿಸೀವಿಂಗ್ ಸ್ಟೇಷನ್ ಇದೆ. ಶಿವಮೊಗ್ಗ ಏನಾದರೂ ನೀವು ಔಟ್‌ಲೆಟ್ ಕೊಟ್ಟರೆ ಪೀಣ್ಯದಲ್ಲಿ ನೆಸ್ಟ್ ರಿಸೀವಿಂಗ್ ಸ್ಟೇಷನ್ ಇರುವುದು. 11–12 ತಾಲ್ಲೂಕಿನ ಮೇಲೆ ಒಂದೇ ಫೀಡರ್ ಮೇಲೆ ಪವರ್ ಫೀಡ್ ಮಾಡುತ್ತಿರುವುದು ನಮಗೆ ಬೀರೂರ್‌ನಲ್ಲೂ, ಕಡೂರಿನಲ್ಲೂ, ಭದ್ರಾವತಿಯಲ್ಲಿ ಹತ್ತಿರನೂ ಪವರ್ ಹೋಯಿತು ಅಂದರೆ ಇಲ್ಲಿಂದ ಗುಬ್ಬಿಯವರೆಗೆ ಪವರ್ ಇಲ್ಲ. ತುಮಕೂರು ತಾಲ್ಲೂಕಿಗೆ ಮಾತ್ರ ಸಿಗುತ್ತದೆ. ಪೀಣ್ಯದಿಂದ ವಾಪಸ್ಸು ಕೊಡುತ್ತೀರಿ. ಇಡೀ ಬಿ.ಹೆಚ್.ರೋಡ್ ಅನ್ನು ಒಂದೇ ಒಂದು ಫೀಡರ್ ಮೇಲೆ ಕನೆಕ್ಟ್ ಮಾಡಿದ್ದೀರಿ. ನಾನು 100 ಸಾರಿ ಕೇಳಿದ್ದೇನೆ. The very transformer receiving system is bad. ನೀವು ಅಲ್ಲೇ ಟ್ರಾನ್ಸ್‌ಫಾರ್ಮರ್ಸ್ ಇಟ್ಟಿದ್ದೀರಿ ಅದೇ ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ನಮ್ಮಲ್ಲಿ ಬಂದು ಕೆ.ಇ.ಬಿ. ಸ್ಟೇಷನ್ ಇದೆ, 10 ಎಂ.ವಿ. ಸ್ಟೇಷನ್ ಇವೆ. ನಮಗೆ 8.5, 9 ಎಂ.ವಿ ಪವರ್ ಬರುತ್ತಿರುವುದು. ಅಂದರೆ ಅದು ಬರಬೇಕಾದರೆ 1 ಎಂ.ವಿ. ಪವರ್ ಕಡಿಮೆ ಬರುತ್ತದೆ ಅಂದರೆ 40 ವೋಲ್ಟ್ ಕಡಿಮೆ ಬರುತ್ತದೆಂದು ಕೆ.ಇ.ಬಿ. ಲೆಕ್ಕಾಚಾರ. ಸ್ಟೇಷನಿಗೆ ಬರಬೇಕಾದರೆ 60 ವೋಲ್ಟ್ ಕಡಿಮೆ ಆಯಿತು. ನೀವು ಪವರ್ ಸ್ಟೇಷನ್ನಿನ ಆಚೆಗೆ ಬಿಡಬೇಕಾದರೆ ಎಷ್ಟು ಆಗುತ್ತದೆ? ನಿಮ್ಮ ಟ್ರಾನ್ಸ್‌ಫಾರ್ಮರ್ ಎಷ್ಟೆಷ್ಟು ದೂರದಲ್ಲಿದೆ ಇದರ ಬಗ್ಗೆ ಯಾರಿಗಾದರೂ ಗಮನ ಇದೆಯೇ? ಇದನ್ನು ಅರ್ಥ ಮಾಡಿಕೊಳ್ಳುವಂತಹ ಯೋಗ್ಯತೆ ಯಾರಿಗಾದರೂ ಇದೆಯೇ ಎಂದು ನಾನು ಕೇಳಬೇಕಾಗುತ್ತದೆ. 5 ಕಿ.ಮೀ. 3 ಕಿ.ಮೀ. 4 ಕಿ.ಮೀಗಳಲ್ಲಿ ಒಂದೊಂದು ಟ್ರಾನ್ಸ್‌ಫ್ಮಾರರ್ ಇದೆ. 5–10 ವರ್ಷದ ಹಿಂದೆ ಒಂದು ಬಾವಿ ಎರಡು ಬಾವಿ ಮೂರು ಬಾವಿಯನ್ನು ರೈತ ಏನು ತುಮಕೂರು ಪ್ರಾಂತ್ಯಗಳಲ್ಲಿ, ಕೋಲಾರ ಪ್ರಾಂತ್ಯದಲ್ಲಿ ಕೊಳವೆ ಬಾವಿಯನ್ನು ಮಾಡಿದ್ದರು, ಅದೇ ಟ್ರಾನ್ಸ್‌ಫಾರ್ಮರ್‌ಗಳಿಗೆ ಪವರ್ ಅನ್ನು ತಗಲಾಕಿಕೊಂಡು ಹೋಗುತ್ತಿರುವುದು. ಸರ್ವೀಸ್ ಮ್ಯಾನ್ ಕನೆಕ್ಷನ್ ಕೊಡುತ್ತಾರೆ ಅಂದರೆ ಅವನಿಗೆ ಹಣ ಕೊಟ್ಟುಕೊಂಡು ಹೋಗುತ್ತಿರುವುದು. ಟ್ರಾನ್ಸ್‌ಫಾರ್ಮರ್ ಮೇಲೆ ಲೋಡ್ ಎಷ್ಟು ಬಿತ್ತು ನಿಮಗೆ ಬೇಕಾಗಿಲ್ಲ. ಹಣ ಒಂದು ಕೊಟ್ಟು ಬಿಟ್ಟರೆ ಹಾಕಿರುವ ಒಂದು ಕನೆಕ್ಷನ್ ಕೊಟ್ಟರೆ ನಾವು ಏನಾದರೂ ಕುಳಿತುಕೊಂಡು ರಿವ್ಯೂ ಮಾಡಿದರೆ ಸ್ವಾಮಿ ಅದು ಸರ್ವೀಸ್‌ಮೆನ್, ನಮಗೆ ಬೋರ್ಡ್ ಮೆಟೀರಿಯಲ್ ಖರ್ಚು ಆಗಿಲ್ಲ, ಕನೆಕ್ಟ್ ಮಾಡಿದ್ದೇವೆ ಎಂದು ಹೇಳುತ್ತಾರೆ. ಯಾವುದೇ ಐಪಿ ಸೆಟ್‌ಗೆ ಮಳೆಗಾಲದಲ್ಲಿ ಈ ಸ್ಥಿತಿ ನಿರ್ಮಾಣ ಆದರೆ, ಮುಂಬರುವ ಬೇಸಿಗೆಯಲ್ಲಿ ನಮ್ಮ ಗತಿ ಏನು ಎನ್ನುವ ಒಂದೇ ಒಂದು ಪ್ರಮುಖವಾದ ಆಧಾರದ ಮೇಲೆ ಇದನ್ನು ನಾವು

ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿದ್ದೇವೆ. ತಮಗೆ ಕೇಳಿಕೊಳ್ಳುತ್ತಿರುವುದು ನಿಮ್ಮ ಕೆಇಬಿ ಪ್ರೋಗ್ರಾಮ್ ಏನು? ಬೇಸಿಗೆ ಕಾಲಕ್ಕೆ ನಿಮ್ಮ ಪ್ರೋಗ್ರಾಮ್ ಏನು? ನಮಗೆ ಎಲ್ಲಿಂದ ಪವರನ್ನು ತಂದುಕೊಡುತ್ತೀರಿ? ನಮ್ಮ ಐಪಿ ಸೆಟ್ ಹೇಗೆ ಓಡಿಸುತ್ತೀರಿ? ನಮ್ಮ ಐಪಿ ಸೆಟ್‌ಗಳಿಗೆ ಏನಾದರೂ ಪರಿಹಾರ ಕೊಡುತ್ತೀರಾ? ಮಳೆಗಾಲದಲ್ಲಿ ನಷ್ಟ ಆಗಿರುವ ಬೆಳೆಗೆ ಪರಿಹಾರ ಕೊಡುವುದಕ್ಕೆ ಆಗದೇ ಇರುವಂತಹ ಕೆಟ್ಟ ಜನ ಈ ಬೇಸಿಗೆ ಕಾಲದಲ್ಲಿ ಏನಾದರೂ ನಮ್ಮ ತೋಟಗಾರಿಕೆ ಬೆಳೆಗಳನ್ನು ಉಳಿಸುವುದಕ್ಕೆ, ಸಹಾಯ ಮಾಡುವುದಕ್ಕೆ ನಿಮಗೆ ಯೋಗ್ಯತೆ ಇದೆಯೇ? ಈ ಸರ್ಕಾರಕ್ಕೆ ಏನಾದರೂ ಅರ್ಹತೆ ಇದೆಯೇ? ಈ ಸರ್ಕಾರಕ್ಕೆ ಏನಾದರೂ ಕೂಡ ಮರ್ಯಾದೆ ಇದೆಯೇ? ಇಡೀ ವರ್ಷ ಚಳಿಗಾಲದಲ್ಲಿ ಟ್ರಾನ್ಸ್‌ಫಾರ್ಮರ್ ಹಾಕಿಲ್ಲವೆಂದು ಯಾರೂ ಕೇಳಲಿಲ್ಲ. ಸರ್ಕಾರ ಎಂದು ಕರೆಸಿಕೊಳ್ಳುವಂತಹ ಅರ್ಹತೆ ತಮಗೆ ಇದ್ದರೆ ತಾವು ಉತ್ತರವನ್ನು ಹೇಳಬೇಕಾಗುತ್ತದೆ. ಇವತ್ತು ನಮ್ಮ ತುರುವೇಕೆರೆ ತಾಲ್ಲೂಕಿನಲ್ಲಿ 18 ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡಬೇಕಾಗಿತ್ತು. ಮಾನ್ಯ ರುದ್ರಪ್ಪನವರಿಗೆ ಉತ್ತರ ಕೊಟ್ಟಾಗ ಬರೀ 6 ಎಂದು ಅಸೆಂಬ್ಲಿಯಲ್ಲಿ ಹೇಳಿದ್ದೀರಿ. ನನ್ನ ಕ್ಷೇತ್ರದಲ್ಲಿ ಅವತ್ತು 12 ಇತ್ತು, ವಾಪಸ್ಸು ಹೋಗುವುದರೊಳಗೆ ರಿಪೇರಿ ಮಾಡಲು ಹಾಕಿದ್ದ ಟ್ರಾನ್ಸ್‌ಫಾರ್ಮರ್ಸ್ ಇಲ್ಲ. ಮಳೆಗಾಲದಲ್ಲಿ ಈ ಸ್ಥಿತಿ ಆಗಿದೆ. ಸಿಸ್ಟಂ ಇಂಪ್ರೂಮೆಂಟ್ ಮಾಡಲಿಕ್ಕೆ ಏನೂ ಕೆಲಸ ನಡೆದಿಲ್ಲ. ಯಾವುದೇ ಸಿಸ್ಟಂ ಅನ್ನು ಇಂಪ್ರೂ ಮಾಡುವ ಕೆಲಸವನ್ನು ಕೆ.ಇ.ಬಿ ಬೋರ್ಡ್‌ನವರು ತೆಗೆದುಕೊಂಡಿಲ್ಲ. ಹೋದವರ್ಷ ಏನು ಎಸ್ಟಿಮೇಟ್ ಮಾಡಿಕೊಂಡು ಬಂದು ಇಂತಿಂಥ ಕಡೆ ಟ್ರಾನ್ಸ್‌ಫಾರ್ಮರ್ ಹಾಕಬೇಕೆಂದು ಹೇಳಿದ್ದರೋ ಆ ಟ್ರಾನ್ಸ್‌ಫಾರ್ಮರ್ ಸೆಂಟರ್ಸ್ ಒಂದೂ ಆರಂಭವಾಗಲಿಲ್ಲವೆಂದರೆ ಎಷ್ಟು ಐ.ಪಿ. ಸೆಟ್ಟನ್ನು ಲಿಂಕ್ ಮಾಡುತ್ತೀರೆಂಬುದನ್ನು ನಾನು ಕೇಳುತ್ತೇನೆ. ಪ್ರೋಗ್ರೇಸ್ ನಿಮಗೆ ಬೇಕು. ನಮ್ಮ ಕ್ಷೇತ್ರಗಳಲ್ಲೆಲ್ಲಾ ಇಷ್ಟಿಷ್ಟು ಐ.ಪಿ. ಸೆಟ್ಟು ಬೇಕೆಂದು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರು ಕೊಡಬೇಕು. ಅದೇ ಟ್ರಾನ್ಸ್‌ಫಾರ್ಮರ್ ಮೇಲೆ ಅದೇ ಸ್ಟೇಷನ್ ಮೇಲೆ ಕೊಡಬೇಕು. ನೀವು ಮಾಡಿರುವ ಘನಕಾರ್ಯ ಏನು? ಎಲೆಕ್ಷನ್‌ನಲ್ಲಿ ಬಂದುಬಿಟ್ಟರು, ಮಾಜಿ ಮುಖ್ಯಮಂತ್ರಿಗಳು ರಿಸೀವಿಂಗ್ ಸ್ಟೇಷನ್ನಿಗೆ ಒಂದು ಅಡಿಗಲ್ಲನ್ನು ಹಾಕಿಬಿಟ್ಟರು. ನಾಲ್ಕು ತಿಂಗಳು ಮಾಧುಸ್ವಾಮಿ, ನಾಲ್ಕು ತಿಂಗಳೊಳಗೆ ಇಲ್ಲೊಂದು ಟೆಂಪರರಿ ವ್ಯವಸ್ಥೆ ಮಾಡಿಬಿಡುತ್ತೇವೆ. You will be very happy then ಎಂದು ಹೇಳಿದರು. ಅವತ್ತು ನೀವು ಎಲೆಕ್ಷನ್ ಕಮೀಷನ್‌ಗೆ ಮೋಸ ಮಾಡಿ ಬಂದು ಅಡಿಗಲ್ಲನ್ನು ಹಾಕಿದಿರಿ. ಅದನ್ನು ತಡೆದುಕೊಂಡೆ. ನಾನು ಚಾಲೆಂಜ್ ಮಾಡಲಿಲ್ಲ. ಎಲೆಕ್ಷನ್ ಡೇಟ್ ಫಿಕ್ಸ್ ಆಗಿತ್ತು. ಕ್ಯಾಲೆಂಡರ್ ಅನೌನ್ಸ್ ಆಗಿತ್ತು. ಮುಖ್ಯಮಂತ್ರಿಗಳಿಗೆ ಯಾವುದೇ ಅರ್ಹತೆ ಇರಲಿಲ್ಲ. ಅವತ್ತು ಫೌಂಡೇಷನ್ ಅನ್ನು ಹಾಕಲಾಯಿತು. ಆದರೂ ನಾವು ಮಾತನಾಡಲಿಲ್ಲ. ಏಕೆಂದರೆ ನನ್ನ ಭಾಗದ ಜನಕ್ಕೆ ಏನಾದರೂ ಪವರ್ ಸಿಕ್ಕಿದರೆ ಅದಕ್ಕಿಂತ ಒಳ್ಳೆಯ ಕೆಲಸಬೇಕಾಗಿಲ್ಲ. ಸಣ್ಣಪುಟ್ಟ ದೋಷಗಳನ್ನು ಎತ್ತಿ ಹಿಡಿದುಬಿಟ್ಟು ನಾನು ಕೆಟ್ಟವನು ಅಂತ ಅನ್ನಿಸಿಕೊಳ್ಳುವುದಕ್ಕೆ ತಯಾರಾಗಿ ಇರಬಾರದು ಅಂತ ಸಹಿಸಿಕೊಂಡು ಹೋಗಿ ನಾನು ಅವರ ಜೊತೆಯಲ್ಲಿ ಕುಳಿತುಕೊಂಡೆ. ಬೇಕಾದರೆ ರೆಕಾರ್ಡ್ಸ್ ತೆಗೆಸಿ ನೋಡಿ. ಎಲೆಕ್ಷನ್ ಡಿಕ್ಲೇರ್ ಆದಮೇಲೆ, ನಮ್ಮ ಪಾರ್ಲಿಮೆಂಟ್ ಕ್ಯಾಂಡಿಡೇಟ್ ಅನ್ನು ಕರೆದುಕೊಂಡು ಬಂದು ಅಲ್ಲಿ ಭಾಷಣವನ್ನು ಬಿಗಿದರು. ಆದರೂ ನಾವು ತಡೆದುಕೊಂಡೆವು. ಏನಾದರೂ ಇಲ್ಲಿ ಕೆಲಸ ಆಗಲಿ, 4–5 ತಾಲ್ಲೂಕಿಗೆ ಪವರ್ ಬಂದರೆ ನಾವು ಉಳಿದುಕೊಳ್ಳುತ್ತೇವೆಂದು just because ನಾಲ್ಕೇನಾಲ್ಕು ಬ್ಯಾಟರಿಯನ್ನು ನೀವು ಬಿರ್ಲಾದವರಿಗೆ ಆರ್ಡರ್ ಕೊಟ್ಟು ನಾಲ್ಕು ತಿಂಗಳಿಂದ ತರಿಸಿಕೊಳ್ಳುವುದಕ್ಕೆ ಆಗದೇ ಇರುವಂತಹ ಒಂದೇ ಒಂದು ಕಾರಣಕ್ಕೆ ಇವತ್ತು ರಿಸಿವಿಂಗ್ ಸ್ಟೇಷನ್ ಟೆಂಪರರಿ ಕೆಲಸ ಮಾಡಿಲ್ಲ. ಪರ್ಮನೆಂಟ್ ಕೆಲಸ ಆಗಲಿಕ್ಕೆ ನಿಮಗೆ 3 ವರ್ಷ ತೆಗೆದುಕೊಳ್ಳುತ್ತದೆ. ಟೆಂಪರರಿ ಕೆಲಸ ಮಾಡುವುದಕ್ಕೆ ಆಗಿಲ್ಲ. ಸೆಪ್ಟೆಂಬರ್ ಎಂಡ್‌ಗೆ ನನ್ನ ಜೊತೆಗೆ ಚೀಫ್ ಇಂಜಿನಿಯರ್ (ಮೇಜರ್‌ವರ್ಕ್ಸ್) ಎನ್ನುವವರು ನನ್ನ ಜೊತೆಗೆ ಬಂದರು. ಮಾನ್ಯ ಡಿಸೋಜ ಅವರಿಗೆ ಇದು ಗೊತ್ತಿಲ್ಲ ಎಂದು ನಾನು

ತಿಳಿದುಕೊಂಡಿದ್ದೇನೆ. ಅವರ ಹೆಸರು ಗೋಪಾಲ್ ನಾನು ಅವರನ್ನು ಇಲ್ಲಿಂದ ಕರೆದುಕೊಂಡು ಹೋದೆ. ಬನ್ನಿರಿ ಏನಾಗಿದೆ ತೋರಿಸಿ ಎಂದು ಕರೆದುಕೊಂಡು ಹೋದೆ. ಸೆಪ್ಟೆಂಬರ್ ಎಂಡ್‌ಗೆ we ensure your power supply ಎಂದರು ಸೆಪ್ಟೆಂಬರ್ ಎಂಡ್ ಆಯಿತು, ಅಕ್ಟೋಬರ್ ಆಯಿತು, ನವೆಂಬರ್ ಆಯಿತು, ಡಿಸೆಂಬರ್ ಆಯಿತು, ಜನವರಿ ಆಯಿತು, ಇವತ್ತಿನವರೆಗೂ ಇಲ್ಲ, ಅವತ್ತು ಡಿಸೆಂಬರ್ ಎಂಡ್‌ವರೆಗೂ ಕಂಟ್ರಾಕ್ಟರ್ ಪೇಮೆಂಟ್ ಮಾಡಲಿಲ್ಲ. ಈಗ ಬ್ಯಾಟರಿ ಬರಲಿಲ್ಲ. ಈಗ ಎರಡನೆಯದ್ದನ್ನು ನಾನು ಕೇಳುತ್ತಿದ್ದೇನೆ. ಚಿಕ್ಕನಾಯಕನಹಳ್ಳಿ ಸ್ಟೇಷನ್‌ನಲ್ಲಾಗಲಿ, ಗುಬ್ಬಿ ಸ್ಟೇಷನ್‌ನನ್ನಾಗಲಿ, ತಿಪಟೂರು ಸ್ಟೇಷನ್‌ನಲ್ಲಾಗಲಿ, ಲೋಡ್ ತೆಗೆದುಕೊಳ್ಳುವಂತಹ ಕೆಪಾಸಿಟಿ ಇಲ್ಲ. ನೀವು 6 ಗಂಟೆಯನ್ನು ಅನೌನ್ಸ್ ಮಾಡಿದರೆ ನಮಗೆ 12 ಗಂಟೆಯಷ್ಟು ಇದೆ. 12 ಗಂಟೆ ಅಂತ ಅನ್ನಿಸಿಕೊಳ್ಳುವುದಕ್ಕೆ ಕೆ.ಇ.ಬಿ.ಯವರು ತಯಾರಾಗಿಲ್ಲ. ಮೂರು ಗಂಟೆಯ ರಾತ್ರಿಯಲ್ಲಿ ಆಫ್ ಮಾಡುತ್ತಾರೆ. ಮೂರು ಗಂಟೆ ಸಿಂಗಲ್ ಫ್ಯೂಸ್ ಮಾಡುತ್ತಾರೆ. ಆಗ ಬರೀ ಮನೆಗಳಿಗೆ ಕೊಡುತ್ತಾರೆ. ಇದರ ಕಥೆಯನ್ನು ಎಲ್ಲೂ ಕೇಳಿಲ್ಲ. ಇದು ರಾಜ್ಯದ ಪಾಲಿಸಿ ಅಲ್ಲ, ಅವರವರ ಇಚ್ಛೆಯಿಂದ ಮಾಡುತ್ತಾರೆ. ಅವನು ಕೊಟ್ಟಾಗ ನಾನು ಪವರ್ ತೆಗೆದುಕೊಳ್ಳಬೇಕು. ನಾವು 6 ಗಂಟೆ, 8 ಗಂಟೆ, 10 ಗಂಟೆ ವೋಲ್ಟೇಜ್ ಇರುವ ಪವರ್ ಕೊಡಿ ಸ್ಟಬಲೈಸ್ ಮಾಡಿ ಪವರ್ ಕೊಡಿ, ಪಂಪ್‌ಸೆಟ್ ಓಡುವವಷ್ಟು ಪವರ್ ಕೊಡಿ, ಅಷ್ಟಾದರೂ ನಾವು ಸಮಾಧಾನಪಟ್ಟಿಕೊಳ್ಳುತ್ತೇವೆಂದೂ ಹೇಳಿದರೂ ಇವತ್ತಿನವರೆಗೂ ಆಗಿಲ್ಲ. ಯಾವ ಪಂಪ್‌ಸೆಟ್ ಓಡುವುದಿಲ್ಲ. ರೈತರು ಇವತ್ತು ಆಟೋಸ್ವಿಚ್ ಅಂತ ಹಾಕಿಕೊಳ್ಳುತ್ತಿದ್ದಾರೆ. ಒಂದು ಸಲ ನೀವು ಪವರ್ ಅನ್ನು ಆನ್ ಮಾಡಿದರೆ ಎಲ್ಲಾ ಐ.ಪಿ ನೆಸ್ಟ್ ಒಟ್ಟಿಗೆ ಆನ್ ಆಗುತ್ತದೆ. 250–160ರಲ್ಲಿ ಇದ್ದಿದ್ದ ವೋಲ್ಟೇಜ್ 200–180–170ಕ್ಕೆ ಬಂದು ನಿಲ್ಲುತ್ತದೆ. ಎಲ್ಲಾ ಸ್ಟಬಿಲೈಸರ್ಸ್ ಆಫ್ ಆಗುತ್ತದೆ. ಎಲ್ಲಾ ಸ್ಟಾಟರ್ಸ್ ಬಿದ್ದು ಹೋಗುತ್ತದೆ. ನಾನು ಉತ್ಪ್ರೇಕ್ಷೆಗೆ ಈ ಮಾತನ್ನು ಹೇಳುತ್ತಿಲ್ಲ. ತಾವು ಯಾರಾದರೂ ಕನ್ಸರ್ನ್ಡ್ ಇರುವ ಮಂತ್ರಿ ಇದ್ದರೆ ತಾವು ಬಂದು ನೋಡಬೇಕು ಈ ರಾಜ್ಯದ ಬಗ್ಗೆ ರೈತರ ಬಗ್ಗೆ ಏನಾದರೂ ಸ್ವಲ್ಪ ಕನಿಕರ ಇದ್ದರೆ ನಮ್ಮ ಕಷ್ಟವನ್ನು ಬಂದು ನೋಡಬೇಕು. ಒಂದು ಕಡೆ ಮಳೆಯೂ ಬರುವುದಿಲ್ಲ. ಇನ್ನೊಂದು ಕಡೆ ನೀರನ್ನು ಇಟ್ಟುಕೊಂಡು ಬಾವಿತೆಗೆದು ಪಂಪು ಇಟ್ಟುಕೊಂಡು ನೀರನ್ನು ಆಚೆಗೆ ಹೊಡೆಯಲಾರದೆ ನಾವು ಹಾಳಾಗಿಹೋಗಿದ್ದೇವೆ. ಇದು ಯಾರಿಗೂ ಬೇಕಾಗಿಲ್ಲ. ಈ ಸ್ಥಿತಿಯಲ್ಲಿ ನಿಮ್ಮ ಸರ್ಕಾರ ನಡೆಯುತ್ತಿದೆ. ಬಹಳ ದಿವಸ ಈ ರೀತಿಯಾಗಿ ನಡೆದರೆ ರೈತರು ತಮ್ಮನ್ನು ಒಪ್ಪುವುದಿಲ್ಲ. ಬಹಳ ದಿವಸ ಹೀಗೆ ನಡೆಯುವುದಕ್ಕೆ ಆಗುವುದಿಲ್ಲ. ಇವತ್ತಾದರೂ ಈ ಚರ್ಚೆ ಬಂದಿದೆ; ಪುಣ್ಯಕ್ಕಾದರೂ, ಪಾಪಕ್ಕಾದರೂ ಎನ್‌ಕ್ವೈರಿ ಮಾಡಬೇಕಾಗುತ್ತದೆ. ಹೋದ ವರ್ಷದ ಟಾರ್‌ಗೆಟ್‌ನಲ್ಲಿ ಅಲ್ಲಿ ಎಸ್ಟಿಮೇಟ್ ಮಂಜೂರಾಗಿರುವ ಟ್ರಾನ್ಸ್‌ಫಾರ್ಮರ್‌ನಲ್ಲಿ 10 ಪರ್ಸೆಂಟ್ ಹಾಕಿದ್ದಿರಾ? ಕಮೀಷನ್ ಮಾಡಿದ್ದೀರಾ? ನಾನು ಇದನ್ನು ಚಾಲೆಂಜ್ ಮಾಡುತ್ತೇನೆ. Not even a single, ಒಂದು ಪರ್ಸೆಂಟ್ ಆಗಿಲ್ಲ. ಐ.ಪಿ ಸೆಟ್ಟುಗಳಿಗೆ ಕನೆಕ್ಷನ್ ಅನ್ನು ಹೇಗೆ ಕೊಟ್ಟರು ಅನ್ನುವುದನ್ನು ತಮ್ಮ ಇಲಾಖೆಯವರಿಂದ ಕೇಳಬೇಕಾಗುತ್ತದೆ. ದೊಡ್ಡ ಭಾಷಣವನ್ನು ಬಿಗಿದು ಹೋಗಬಹುದು. ನನ್ನ ರಾಜ್ಯದ ಪಾಲಿಸಿ ಇದೆ, 65,000 ಐ.ಪಿ. ಸೆಟ್ಟುಗಳಿಗೆ ಕರೆಂಟ್ ಕೊಡುತ್ತೇವೆ. 700 ಹಳ್ಳಿಗಳಿಗೆ ಕರೆಂಟ್ ಕೊಡುತ್ತೇವೆ ಎಂದು ಭಾಷಣ ಬಿಗಿಯುವುದು ಮುಖ್ಯವಲ್ಲ. ಆವೊತ್ತು ನಾವು ಮುಖ್ಯಮಂತ್ರಿಗಳ ಸ್ಥಾನದಲ್ಲಿ ತಮ್ಮನ್ನು ಕೂರಿಸಿದ್ದೇವೆ. ನಿಮ್ಮ ಸ್ಥಿತಿ ಏನಾಯಿತು? ಕಾರ್ಯ ನಿರ್ವಹಿಸುತ್ತಿದ್ದ ಐ.ಪಿ. ಸೆಟ್‌ಗಳೆಲ್ಲವೂ ನಿಂತುಹೋಯಿತು. ನಮ್ಮ ಯೋಗ್ಯತೆಗೆ ಮನೆಯಲ್ಲಿ ಚೆನ್ನಾಗಿ ಉರಿಯುತ್ತಿದ್ದಂಥ ಟ್ಯೂಬಲೈಟ್ ಸಹ ಹತ್ತುವುದಿಲ್ಲ. 100 ಕ್ಯಾಂಡಲ್ ಬಲ್ಬ್ ಹಾಕಿದರೂ ಕೂಡ ಅದರಲ್ಲಿ 40 ಕ್ಯಾಂಡಲ್‌ನಷ್ಟು ಪವರ್ ತೋರಿಸುತ್ತಿದೆ. ಆದುದರಿಂದ, ದಯಮಾಡಿ ಇದನ್ನು ಪರಿಶೀಲಿಸಬೇಕಾಗುತ್ತದೆ. ನಾನು ತಮಗೆ ಇನ್ನೊಂದು ಮಾಹಿತಿಯನ್ನು ಕೊಡುವುದಕ್ಕೆ ಇಚ್ಛಿಪಡುತ್ತೇನೆ: ಈ ಕಾಲಕ್ಕೆ ತುಮಕೂರು ವಿಭಾಗದಲ್ಲಿ 6,350 ಪಂಪುಸೆಟ್ಟುಗಳನ್ನು ಎನರ್ಜೈಸ್ ಮಾಡಬೇಕಾಗಿತ್ತು. ಆದರೆ, 2,800ಐ.ಪಿ.

ಸೆಟ್ಟುಗಳನ್ನು ಮಾತ್ರ ವಿದ್ಯುದ್ದೀಕರಣಗೊಳಿಸಿದ್ದೀರಿ. ನಿಮ್ಮ ಇಂಜಿನಿಯರ್ ಕೊಟ್ಟಿರುವ ಮಾಹಿತಿ ಪ್ರಕಾರ ತುಮಕೂರು ವಿಭಾಗಕ್ಕೆ ಈ ದಿನಾಂಕದೊಳಗೆ 465 ಹೊಸ ಟಿ.ಸಿ.ಯನ್ನು ಹಾಕಬೇಕಾಗುತ್ತು, ಬರೀ 50 ಟಿ.ಸಿ.ಯನ್ನು ಹಾಕಿದ್ದಾರೆ. ಸನ್ಮಾನ್ಯ ಸದಸ್ಯರಾದ ಶಿವನಂಜಪ್ಪನವರಿಗೆ ಗೌರವ ಕೊಡುತ್ತಾ ಹೇಳುತ್ತಿದ್ದೇನೆ. ಅವರ ಕ್ಷೇತ್ರದಲ್ಲಿ ನೀರನ್ನು ಬರಿಸುವುದಕ್ಕೋಸ್ಕರ 12 ಟಿ.ಸಿ.ಯನ್ನು ಹಾಕಬೇಕಾಗಿದೆ. 50 ಟಿ.ಸಿ.ಯನ್ನು ತುಮಕೂರು ವಿಭಾಗದ ಆರು ತಾಲ್ಲೂಕಿಗೆ ಕುಡಿಯುವ ನೀರಿಗೋಸ್ಕರ ಹಾಕಬೇಕಾಗಿದೆ. ನಮ್ಮ ಎಲ್ಲಾ ಹಂತ ಮುಗಿದುಹೋಗಿದ್ದು, ಟಿ.ಸಿ. ಇಲ್ಲವೆಂದು ಕುಡಿಯುವ ನೀರನ್ನು ಕಮಿಷನ್ ಮಾಡದೆ ಹಾಗೇ ಇಟ್ಟುಕೊಂಡಿದ್ದಾರೆ. ಕೇವಲ 4 ಗಂಟೆ, 6 ಗಂಟೆಗಳ ಕಾಲ ಹರಿಯುವ ವಿದ್ಯುತ್ತಿಗೆ ಟಿ.ಸಿ. ಬೇಡ. ''ಟಿ.ಸಿ. ಕನೆಕ್ಟ್ ಮಾಡಿದರೆ ಹಳ್ಳಿಯವರು ನನ್ನನ್ನು ಹಿಡಿದುಕೊಂಡು ಹೊಡೆಯುತ್ತಾರೆ, ಸ್ವಾಮಿ'' ಎಂದು ಇಂಜಿನಿಯರ್ ಹೇಳಿದ್ದಾರೆ. ''ನನ್ನ ಬಾವಿಗೆ ಇಲ್ಲದ ನೀರನ್ನು ಕುಡಿಯುವುದಕ್ಕೆ ಕೊಡುತ್ತೇನೆಂದು ಬರುತ್ತೀಯಾ'' ಎಂದು ಹಳ್ಳಿಯವರು ಆತನನ್ನು ಹೊಡೆಯುತ್ತಾರೆ. ತಾವು ಇದರ ಬಗ್ಗೆ ಯೋಚನೆ ಮಾಡಬೇಕು. 100 ದಿವಸಗಳಲ್ಲಿ ನಮ್ಮ ಪ್ರೋಗ್ರೆಸ್ ಏನೆಂದು ತೆಗೆದು ನೋಡಬೇಕೆಂದರೆ ಸರ್ಕಾರ ಇತ್ತ ಕಡೆ ಗಮನ ಕೊಡಬೇಕಾಗಿದೆ. ಏನಾದರೂ ಪ್ರೋಗ್ರೆಸ್ ಆಗಬೇಕೆಂದರೆ ಅಲ್ಲಿ ರೈತರು ಉಳಿದುಕೊಳ್ಳಬೇಕು. ಹಾಕಿರುವ ಬಂಡವಾಳವನ್ನು ನಾವು ವಾಪಸ್ಸು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಬಡ್ಡಿ ಕಟ್ಟುವಷ್ಟನ್ನಾದರೂ ನಮಗೆ ಅನುಕೂಲ ಮಾಡಿಕೊಡಿ. ನಿಮ್ಮ ಸರ್ಕಾರದ ನೀತಿಗಳು ನಮ್ಮ ಮನೆಗಳನ್ನು ಹಾಳು ಮಾಡಿದೆ. ಬಡ್ಡಿ ಮನ್ನಾ ಮಾಡುತ್ತೇವೆ, ಪ್ರೊಡಕ್ಷನ್ ಇನ್‌ಸೆಂಟಿವ್ ಕೊಡುತ್ತೇವೆಂದು ಹೇಳಿ ಇವೊತ್ತು ಟ್ರೆಜರಿ ಬ್ಯಾನ್ ಮಾಡಿದ್ದೀರಿ. ನಾವು ಎಲ್ಲಿಗೆ ಹೋಗಬೇಕು? ಯಾರ ಹತ್ತಿರ ಹೋಗಿ ಕೇಳಬೇಕು? ಎಂಬುದರ ಬಗ್ಗೆ ಈ ಸದನದಲ್ಲಿ ದಯಮಾಡಿ ಹೇಳಬೇಕು. ಇಂತಹವರ ಹತ್ತಿರ ಹೋಗಿ ರೆಮಿಡಿ ಕೇಳಿ ಎಂದು ಹೇಳಿ. ಇಲ್ಲವೆ ಕೋರ್ಟಿಗೆ ಹೋಗಿ ಎಂದು ಹೇಳಿ. ನಮಗೆ ಎಲೆಕ್ಟ್ರಿಸಿಟಿ ಆಕ್ಟ್ ಗೊತ್ತಿದೆ. ಮೂರನೇದು ತಾವು ಸ್ಟೇಷನ್ ಎಲ್ಲಿ ಮಾಡಬೇಕು? ಸಬ್ ಸ್ಟೇಷನ್ ಎಲ್ಲಿ ಮಾಡಬೇಕು? ರಿಸೀವಿಂಗ್ ಸ್ಟೇಷನ್ ಎಲ್ಲಿ ಮಾಡಬೇಕೆಂಬ ಬಗ್ಗೆ ಒಂದಕ್ಕೊಂದು ಸಂಬಂಧವಿಲ್ಲದಂತೆ ಗಲಿಬಿಲಿ ಮಾಡಿದ್ದೀರಿ. ಇದರ ಬಗ್ಗೆ ಕೆ.ಇ.ಬಿ.ಯವರು ಯಾವೊತ್ತೂ ಕೂಡ ತಲೆ ಕೆಡಿಸಿಕೊಳ್ಳಲಿಲ್ಲ. ಶಿವಮೊಗ್ಗ ಬಿಟ್ಟರೆ ಪೀಣ್ಯದಲ್ಲಿ ರಿಸೀವಿಂಗ್ ಸ್ಟೇಷನ್ ಇತ್ತು ಎಂದು ತಮಗೆ ಹೇಳಿದೆ. ಈ ಬಗ್ಗೆ ಭಾರಿ ಒತ್ತಡ ಬಂದ ನಂತರ ಕಿಬ್ಬನಹಳ್ಳಿಯಲ್ಲಿ ಒಂದು ಮತ್ತು ತುಮಕೂರಿನ ಅಂತರಸನಹಳ್ಳಿಯಲ್ಲಿ ಒಂದು ರಿಸೀವಿಂಗ್ ಸ್ಟೇಷನ್ ಆಯಿತು. ತುಮಕೂರು ಜಿಲ್ಲೆಯಲ್ಲಿ 5-6 ಸಬ್‌ಸ್ಟೇಷನ್‌ಗಳು ಆಗಬೇಕಾಗಿತ್ತು. ಯಾವುದೇ ಪ್ರೋಗ್ರೆಸ್ ಆಗಲಿಲ್ಲ. ನಿಟ್ಟೂರು ಒಂದನ್ನು ಪ್ರೋಗ್ರೆಸ್ ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ನನ್ನ ಕ್ಷೇತ್ರದಲ್ಲಿ ಯಾವುದೇ ಪ್ರೋಗ್ರೆಸ್ ಆಗಿಲ್ಲ. ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ರಿಸೀವಿಂಗ್ ಸ್ಟೇಷನ್ ಆಗದಿದ್ದರೆ ಕಡೇ ಪಕ್ಷ ಅಂತರಸನಹಳ್ಳಿಯಲ್ಲಿ ವೋಲ್ಟೇಜ್ ಆದರೂ ಇರುವಂತೆ ಏನಾದರೂ ಮಾಡುತ್ತೀರಾ? ಒಂದು ಸಣ್ಣ 60 ಕೆವಿಎ ಲೈನ್ ಎಳೆದು ಬಿಟ್ಟು ಟ್ಯಾಪ್ ಮಾಡಿ ಕರೆಂಟ್ ಕೊಡುವುದು ಬಿಟ್ಟರೆ ಬೇರೆ ಘನಕಾರ್ಯ ಏನಿಲ್ಲ. ಟ್ರಾನ್ಸ್‌ಫಾರ್ಮರ್ ಇಟ್ಟು ಲೈನ್ ಟ್ಯಾಪ್ ಮಾಡಿ ಫೀಡ್ ಮಾಡಬೇಕಾದ ಕರ್ತವ್ಯ ಅದು. ಅದನ್ನು ಏನಾದರೂ ಮಾಡುತ್ತೀರಾ? ಅದೂ ಕೂಡ ಇಲ್ಲ. ಇನ್ನು ನಮ್ಮ ಭಾಗದಲ್ಲಿರುವ ಸ್ಟೇಷನ್‌ಗಳನ್ನು ಏನಾದರೂ ನೋಡಿದ್ದೀರಾ? ಅದೇ ಸ್ಥಿತಿಯಲ್ಲಿವೆ. ಅನಂತರ, ತಮ್ಮ ಲೈನ್‌ಮೆನ್‌ಗಳು ಬಹಳ ಚೆನ್ನಾಗಿದ್ದಾರೆ ಸ್ವಾಮಿ! ಕೆಇಬಿಯಲ್ಲಿ 5-10 ವರ್ಷಗಳಿಂದ ಲೈನ್‌ಮೆನ್‌ಗಳ ನೇಮಕಾತಿಯಾಗಿಲ್ಲ. ಎಲ್ಲರೂ at the verge of retirement ಒಬ್ಬ ಮರ ಹತ್ತುವುದಿಲ್ಲ, ಒಬ್ಬ ಕಂಬ ಹತ್ತುವುದಿಲ್ಲ. ಮರ ತಂತಿ ಮೇಲೆ ಬೀಳುವುದರಿಂದ, ಮರವನ್ನು ಕಡಿಯಿರಿ ಎಂದರೆ ಲೈನ್‌ಮೆನ್ ಯಾರೂ ಮರ ಹತ್ತುವುದಿಲ್ಲ. ಫ್ಯೂಸ್ ಹೋಗಿದೆ, ಟ್ರಾನ್ಸ್‌ಫಾರ್ಮರ್ ಇಲ್ಲದ್ದರಿಂದ ಮರ ಹತ್ತಿರಿ ಎಂದರೆ ಯಾರೂ ಕೂಡ ಹತ್ತುವುದಿಲ್ಲ, ನಾವು ಅವರ ಬದಲಿಗೆ ಬೇರೆ ಹುಡುಗರನ್ನು ಹತ್ತಿಸಬೇಕು.

ನಾವು ಹುಡುಗರನ್ನು ಹತ್ತಿಸಿದರೆ ''ಹೇಗೆ ಕಂಬದ ಮೇಲೆ ಹತ್ತಿದೆ'' ಎಂದು ಹಿಡಿದುಕೊಳ್ಳುತ್ತಾನೆ. ಇವನಿಗೆ ಕಾಲು ನಡುಗುತ್ತದೆ, ಕಂಬ ಹತ್ತುವಂತಿಲ್ಲ. ಮತ್ತೆ ಇಷ್ಟಿಷ್ಟು ಐ.ಪಿ. ಸೆಟ್‌ಗಳಿಗೆ ಒಬ್ಬ ಲೈನ್‌ಮೆನ್ ಇರಬೇಕೆಂಬ ಬಗ್ಗೆ ಕೂಡ ನೀವು ರೂಲ್ಸ್ ಮಾಡಿದ್ದೀರಿ. ಈಗ ಒಬ್ಬ ರೀಡರ್ ಇಲ್ಲವೆಂದು ಮೀಟರ್ ತೆಗೆದಿದ್ದೀರಿ, ಇಷ್ಟಿಷ್ಟು ಲೆಡ್ಜರ್‌ಗೆ ಒಬ್ಬ ಕೇಸ್ ವರ್ಕರ್ ಎಂದು ಮಾಡಿದ್ದೀರಿ. ಅದನ್ನು ತಾವು ಕೆಇಬಿಯಲ್ಲಿ ತೆಗೆಯಿಸಿ ನೋಡಬೇಕು. 100 ಐ.ಪಿ ಸೆಟ್‌ಗಳಿಗೆ ಒಬ್ಬೊಬ್ಬ ಕೇಸ್ ವರ್ಕರ್ ಇದ್ದಾರೆ. ನನ್ನ ಕ್ಷೇತ್ರದಲ್ಲಿ ಸುಮಾರು 60 ಕಿಲೋಮೀಟರ್ ವ್ಯಾಪ್ತಿಯೊಳಗಿರುವ ಐ.ಪಿ. ಸೆಟ್‌ಗಳನ್ನು ಒಬ್ಬ ಜ್ಯೂನಿಯರ್ ಇಂಜಿನಿಯರ್ ಮ್ಯಾನೇಜ್ ಮಾಡಬೇಕಾಗಿದೆ. ಶೆಟ್ಟಿಕೆರೆ ಮತ್ತು ಹಂದನಕೆರೆ ಹೋಬಳಿಗಳ ವಿಸ್ತೀರ್ಣ 60 ಕಿಲೋಮೀಟರ್ ಇದ್ದು, ಒಬ್ಬ ಜ್ಯೂನಿಯರ್ ಇಂಜಿನಿಯರ್ ನೋಡಿಕೊಳ್ಳಬೇಕಾಗಿದೆ. ಆವೊತ್ತು ಕೇಡರ್ ಮಾಡಬೇಕಾದರೆ ಯಾವ ಒಂದು ಪ್ಯಾಟ್ರನ್ ತೆಗೆದುಕೊಂಡರೋ ಅದೇ ಪ್ಯಾಟ್ರನ್‌ನಲ್ಲಿ ಕೆಇಬಿ ಲೆಕ್ಕ ಹಾಕಬೇಕಾಗಿದೆ. ಇಲ್ಲಿಂದ ನಿಮ್ಮ ಕೆಇಬಿಯ ಲಾರಿಗಳು ನಿಲ್ಲಿಸದೆ ಹೊರಟರೆ ''ನಮ್ಮ ಊರಿನ ಮುಂದಿರುವ ಕರೆಂಟ್ ಸರಿ ಮಾಡಿ ಹೋಗು'' ಎಂದು ರೈತರು ಸುಮಾರು 50 ಜಾಗಗಳಲ್ಲಿ ಲಾರಿಗಳನ್ನು ತಡೆದು ನಿಲ್ಲಿಸುತ್ತಾರೆ. ಆ ಭಾಗದಲ್ಲಿ ಪವರ್ ಇರುವುದಿಲ್ಲ. ಇದು ಉತ್ಪ್ರೇಕ್ಷೆಯ ಮಾತಲ್ಲ. ತಮಗೆ ಹೇಳಬೇಕೆಂದರೆ, ನನ್ನ ಕ್ಷೇತ್ರದಲ್ಲಿರುವ ಹಂದನಕೆರೆ ಹೋಬಳಿಯಲ್ಲಿ ವಾರಗಟ್ಟಲೆ ಪವರ್ ಇರುವುದಿಲ್ಲ. ನಾವು ಯಾರನ್ನೂ ಕೇಳುವಂತಿಲ್ಲ. ಕೆಇಬಿಯ ಲೈನ್‌ಮೆನ್ ಬರುವುದಿಲ್ಲ. ಬಂದರೂ ಅಕಸ್ಮಾತ್ ಕುಡಿದು ಬರುತ್ತಾನೆ. ಹಾಗೂ ಅವನನ್ನು ಕೇಳಿದರೆ ''ನೋಡಿ, ಫ್ಯೂಸ್ ತೆಗೆದುಹಾಕುತ್ತೇನೆ, ಏನು ಮಾಡುತ್ತೀರೋ, ಮಾಡಿಕೊಳ್ಳಿ'' ಎಂದು ಹೇಳುತ್ತಾನೆ. ನನ್ನ ಕ್ಷೇತ್ರವಾದ ಹಂದನಕೆರೆ ಹೋಬಳಿಯಲ್ಲಿ ನನ್ನ ಕಣ್ಣೆದುರಿಗೆ ಇದು ನಡೆದಿದೆ. ಒಂದು ಸಲ ನಾನು ಆತನ ಮದುವೆಗೆ ಹೋಗಿ, ಅವನಿಗೆ 20 ರೂಪಾಯಿ ಕೊಡಲಿಲ್ಲವೆಂದದ್ದಕ್ಕೆ ಆತ ಚಾನೆಲ್ ತೆಗೆದು ಪಕ್ಕದಲ್ಲಿ ನಡೆಯುತ್ತಿದ್ದ, ಮದುವೆಗೆ ತೊಂದರೆ ಮಾಡಿ, ಎಲೆಕ್ಟ್ರಿಕ್ ತಂತಿ ಮೇಲೆ ಮಲಗಿದ್ದ. ಆಗ ನಾನು ಕಾರು ತೆಗೆದುಕೊಂಡು ಜೊತೆಯಲ್ಲಿ 20 ಹುಡುಗರನ್ನು ಕರೆದುಕೊಂಡು ಹೋಗಿ 'ಅಲ್ಲಿಂದ ಅವನನ್ನು ಇಳಿಸಿ' ಎಂದಾಗ ಅವನು ಬಂದ. ಆಗ ನಾನು ''ಫ್ಯೂಸ್ ಹಾಕೋ ಬದ್ಮಾಶ್'' ಎಂದಾಗ ಕರೆಂಟ್ ಕೊಟ್ಟ. ಇಂತಹ ಸಿಬ್ಬಂದಿಗಳಿರುವ ಇಲಾಖೆ ಕೆಇಬಿಯಾಗಿದೆ. ಇದು ನಿಜವಾದ ಮಾತು. ಇದರ ಬಗ್ಗೆ ನಾವ್ಯಾರು ನಿಮ್ಮನ್ನು ಕೇಳುವಂತಿಲ್ಲ. ಏನಾದರೂ ಕೇಳಿದ ಪಕ್ಷದಲ್ಲಿ ಒಂದಷ್ಟು ದಂಡ ಹಾಕುವುದು. ಈ ಸರ್ಕಾರದಿಂದ ನನಗೆ ರಕ್ಷಣೆ ಬೇಕಾಗಿದೆ ಎಂದು ಕೇಳುವುದು. ನಾನೊಬ್ಬ ಐ.ಪಿ. ಪವರ್ ಕನ್‌ಸ್ಯೂಮರ್ ಆಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ ಮತ್ತು ಡಿಮ್ಯಾಂಡ್ ಮಾಡುತ್ತಿದ್ದೇನೆ. ಈ ರಾಜ್ಯಕ್ಕೆ ಇಷ್ಟು ಗಂಟೆಗಳ ಕಾಲ ಸ್ಟೆಬಿಲೈಸ್ಡ್ ಪವರ್ ಅನ್ನು ಕೊಡುತ್ತೇವೆಂದು ಮಾತು ಕೊಡಬೇಕು. ಇಂಟರ್‌ಪ್ಷನ್ ಇಲ್ಲದೆ ಇಂತಿಷ್ಟು ಗಂಟೆಗಳ ಕಾಲ ಇಷ್ಟು ವೋಲ್ಟ್‌ನಲ್ಲಿ ಪವರ್ ಕೊಡುತ್ತೇವೆಂದು ನಿರ್ಧಾರವನ್ನು ತೆಗೆದುಕೊಳ್ಳುವ ಯೋಗ್ಯತೆ ಈ ಸರ್ಕಾರಕ್ಕಿದೆಯೆ ಎಂದು ಕೇಳುತ್ತಿದ್ದೇನೆ. ಇಲ್ಲದಿದ್ದರೆ, 'ನಮಗೆ ಯೋಗ್ಯತೆ ಇಲ್ಲ' ಎಂದು ತಾವು ಡಿಕ್ಲರೇಷನ್ ಕೊಡಬೇಕು. ನಿಮ್ಮನ್ನು ನಂಬಿ ಯಾರೂ ತೋಟ ಮಾಡಿಲ್ಲ, ಗದ್ದೆ ಮಾಡಿಲ್ಲ, ಬೆಳೆ ತೆಗೆದಿಲ್ಲ. ನಮ್ಮ ದುರಾದೃಷ್ಟ ನೀವು ಹೇಳಿಕೊಂಡು ಹೋದಿರಿ, ನಾವು ಕೇಳಿಕೊಂಡು ಬಂದೆವು. ಇದರ ಬಗ್ಗೆ ನಾವು ಯಾರನ್ನು ಕೇಳಬೇಕು. ತಾವು ಈ ಕಡೆ ಹೆಚ್ಚಿನ ಗಮನ ಕೊಡಬೇಕು. ಟ್ರಾನ್ಸ್‌ಫಾರ್ಮರ್ಸ್ ಬಗ್ಗೆ ಏನು ದೊಡ್ಡ ತೊಂದರೆ ಇದೆ, ಇದೊಂದು ಬೃಹತ್ ಜಾಲ, ಇದರಲ್ಲಿ ಬೇಕಾದಷ್ಟು ನಡೆದುಹೋಗಿದೆ. ತುಮಕೂರಿನ ಒಂದು ಮಾಹಿತಿಯನ್ನು ತಮಗೆ ಹೇಳಬೇಕೆಂದರೆ, ಗ್ಯಾರಂಟಿ ಅವಧಿಯಲ್ಲಿ ಖರೀದಿಸಿದ 110 ಕೆವಿಎ ಟ್ರಾನ್ಸ್‌ಫಾರ್ಮರ್‌ಗಳಲ್ಲಿ 84 ಟ್ರಾನ್ಸ್‌ಫಾರ್ಮರ್‌ಗಳು ಫೈಲ್ ಆಗಿದೆಯೆಂದು ನಾನು ಒತ್ತಿ ಹೇಳುತ್ತಿದ್ದೇನೆ. ಔಟ್‌ಸೈಡ್ ಗ್ಯಾರಂಟಿ ಅವಧಿಯಲ್ಲಿ 26 ಟ್ರಾನ್ಸ್‌ಫಾರ್ಮರ್‌ಗಳು ಫೇಲಾಗಿವೆ. ಗ್ಯಾರಂಟಿ ಅವಧಿಯಲ್ಲಿ 200 ಕೆವಿಎ ಟ್ರಾನ್ಸ್‌ಫಾರ್ಮರ್‌ಗಳಲ್ಲಿ ಮೂರು

ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡಿದರೂ ಕೂಡ ಫೇಲಾಗಿದೆ. 25 ಕೆವಿಎ ಟ್ರಾನ್ಸ್‌ಫಾರ್ಮರ್‌ಗಳಲ್ಲಿ 439 ಟ್ರಾನ್ಸ್‌ಫಾರ್ಮರ್‌ಗಳು ಫೇಲಾಗಿವೆ. ನನ್ನ ಅಂದಾಜಿನ ಪ್ರಕಾರ 254 ಟ್ರಾನ್ಸ್‌ಫಾರ್ಮರ್‌ಗಳು ಗ್ಯಾರಂಟಿ ಅವಧಿಯಲ್ಲಿ ಫೇಲಾಗಿದ್ದು, 185 ಟ್ರಾನ್ಸ್‌ಫಾರ್ಮರ್‌ಗಳು ಔಟ್‌ಸೈಡ್ ಗ್ಯಾರಂಟಿ ಅವಧಿಯಲ್ಲಿ ಫೇಲಾಗಿದೆ. 63 ಕೆವಿಎ ಟ್ರಾನ್ಸ್‌ಫಾರ್ಮರ್‌ಗಳಲ್ಲಿ 314 ಟ್ರಾನ್ಸ್‌ಫಾರ್ಮರ್‌ಗಳು ಫೇಲಾಗಿವೆ, 209 ಟ್ರಾನ್ಸ್‌ಫಾರ್ಮರ್‌ಗಳು ಗ್ಯಾರಂಟಿ ಅವಧಿಯಲ್ಲಿ ಫೇಲಾಗಿವೆ, 105 ಟ್ರಾನ್ಸ್‌ಫಾರ್ಮರ್‌ಗಳು ಔಟ್‌ಸೈಡ್ ಗ್ಯಾರಂಟಿ ಅವಧಿಯಲ್ಲಿ ಫೇಲಾಗಿವೆ. ಅನಂತರ, ಹಿಂದಿದ್ದ ಕೆಇಬಿ ಅಧ್ಯಕ್ಷರು ಟ್ರಾನ್ಸ್‌ಫಾರ್ಮರ್‌ಗಳ ರಿಪೇರಿಗಾಗಿ ನನ್ನ ಕ್ಷೇತ್ರವಾದ ಚಿಕ್ಕನಾಯಕನಹಳ್ಳಿಯಲ್ಲಿರುವ ಕೆಇಬಿ ಕಛೇರಿಗೆ ಒಬ್ಬ ಸಿಬ್ಬಂದಿಯನ್ನು ಕಳುಹಿಸಿದರು. ಆ ಸಿಬ್ಬಂದಿಗೆ 11 ಕೆವಿಎ ಲೈನ್, 13.2 ಕೆವಿಎ ಏನೆಂದು ಕೂಡ ಗೊತ್ತಿಲ್ಲ. ಹಾಸನದಲ್ಲಿ ಯಾರೋ ಕಂಟ್ರಾಕ್ಟರ್ ಒಬ್ಬರನ್ನು ಗೊತ್ತು ಮಾಡಿ ''ಅಲ್ಲಿಗೆ ಹೋಗಿ, ಅಲ್ಲಿರತಕ್ಕ 13.2 ಕೆವಿಎ ಟ್ರಾನ್ಸ್‌ಫಾರ್ಮರ್‌ಗಳನ್ನೆಲ್ಲಾ ರಿಪೇರಿ ಮಾಡಿ ಬಾ'' ಎಂದು ಕಳುಹಿಸಿದರು. ಪುಣ್ಯವಶಾತ್, ನಾನು ಆ ಸಮಯದಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿದ್ದೆ. ಆಗ ನಾನು ''ಸ್ವಾಮಿ, ಇವರು ಟ್ರಾನ್ಸ್‌ಫಾರ್ಮರ್ ರಿಪೇರಿಗಾಗಿ ಬಂದವರು, ಇವರಿಗೆ 11 ಕೆವಿಎ ಟ್ರಾನ್ಸ್‌ಫಾರ್ಮರ್ ಅನ್ನು ರಿಪೇರಿ ಮಾಡುವುದಕ್ಕೆ ಬರುವುದಿಲ್ಲ'' ಎಂದು ಅಲ್ಲಿದ್ದ ಎಸ್.ಇ.ಗೆ ಹೇಳಿ ಅವನನ್ನು ವಾಪಸ್ಸು ಕಳುಹಿಸಿದೆ. ಈ ರೀತಿಯಲ್ಲಿ ಕೆಇಬಿ ಕಛೇರಿ ನಡೆಯುತ್ತಿದೆ. ಔಟ್‌ಸೈಡ್ ಗ್ಯಾರಂಟಿ ಅವಧಿಯಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಫೇಲಾದರೆ ಆಗಲಿ, ಗ್ಯಾರಂಟಿ ಅವಧಿಯೊಳಗೆ ಇಷ್ಟು ಸಂಖ್ಯೆಯಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಫೇಲಾಗಿವೆಯೆಂದರೆ, ಇದನ್ನು ಸರಬರಾಜು ಮಾಡಿದವರು ಯಾರು? ರಿಪೇರಿ ಮಾಡಿದವರ್‍ಯಾರು? ಸಂಬಂಧಪಟ್ಟವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಕೆಇಬಿ ಕಡೆಯಿಂದ ಏನು ಕ್ರಮ ಕೈಗೊಳ್ಳಲಾಗಿದೆ? ಯಾವುದಾದರೂ ಟ್ರಾನ್ಸ್‌ಫಾರ್ಮರ್ ಕೆಟ್ಟು ರಿಪೇರಿ ಮಾಡುವಂತಿದ್ದರೆ, ರಿಪೇರಿಗಾಗಿ ಟ್ರಾನ್ಸ್‌ಫಾರ್ಮರ್ ಬಾಕ್ಸ್ ಅನ್ನು ಬೆಂಗಳೂರಿಗೆ ತರಬೇಕಾಗಿರುವುದು ಒಂದು ದುರಂತ. ಒಂದೊಂದು ಕೆಇಬಿ ಕಛೇರಿಗೆ ಒಂದೊಂದು ಲಾರಿ ಕೊಟ್ಟಿದ್ದಾರೆ. ಇನ್ನು ಪೂರ್ತಿಯಾಗಿ supervision of line works ನಿಂತುಹೋಯಿತು. ನಮ್ಮ ಕೆಇಬಿ ಕಛೇರಿಯಲ್ಲಿ ಜೀಪುಗಳಿಲ್ಲ. ಸುಮಾರು 20–30 ವರ್ಷಗಳ ಹಿಂದೆ ಕೊಟ್ಟಂಥ ಜೀಪುಗಳಿವೆ. ಕೆಇಬಿ ಇಂಜಿನಿಯರುಗಳು ಲಾರಿಯಲ್ಲಿ ಓಡಾಡುತ್ತಿದ್ದರು. ಲಾರಿ ಬಂದು ಕವಿಕಾ (ಕರ್ನಾಟಕ ವಿದ್ಯುಚ್ಛಕ್ತಿ ಕಾರ್ಖಾನೆ) ಮುಂದೆ ನಿಂತಿದೆ. ಬೇಕಾದರೆ ಇದರ ಬಗ್ಗೆ ದಾಖಲೆಗಳನ್ನು ತೆಗೆಸಿ ನೋಡಿ. ಪ್ರತಿದಿನ 8–10 ಲಾರಿಗಳು ಬಂದು ನಿಲ್ಲುತ್ತವೆ, ಮಾನಿಟರಿಂಗ್ ಇಲ್ಲ. 'ಇಲ್ಲಿ ಟ್ರಾನ್ಸ್‌ಫಾರ್ಮರ್ ಇದೆ, ಇಂತಹವರಿಗೆ ರಿಸರ್ವ್ ಮಾಡಿದ್ದೇವೆ, ಇಂತಹ ಕಡೆಯಿಂದ ಲಾರಿ ತೆಗೆದುಕೊಂಡು ಟ್ರಾನ್ಸ್‌ಫಾರ್ಮರ್‌ಗಳನ್ನು ತುಂಬಿಕೊಂಡು ಹೋಗು' ಎಂದು ನಿಮ್ಮ ಎಂ.ಎಂ.ಪಿ.ಯವರಿಗೆ ಹೇಳುವುದಕ್ಕೆ ಧೈರ್ಯವಿಲ್ಲ. ಎಲ್ಲಾ ಲಾರಿಗಳು ಬರಬೇಕು, ಬಂದು ಕವಿಕಾ ಮುಂದೆ ನಿಂತುಕೊಳ್ಳಬೇಕು, ಎಲ್ಲರೂ ಅಲ್ಲಿಯೇ ಇದ್ದು ಹೊಡೆದಾಡಬೇಕು. ಸ್ವಾಮಿ, ಸನ್ಮಾನ್ಯ ಮಂತ್ರಿಗಳೇ, ಕವಿಕಾ ಮುಂದೆ ಬಹಳಷ್ಟು ಹೊಡೆದಾಟವಾಗಿವೆ. ಇಂತಹ ಸ್ಥಿತಿಯಲ್ಲಿ ಏನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನಡೆಯುತ್ತಿದೆ, ಇದಕ್ಕೆ ನಮ್ಮ ಧಿಕ್ಕಾರ ಇದೆಯೆಂದು ಹೇಳುತ್ತಾ, ನನಗೆ ಸಭಾಧ್ಯಕ್ಷರು ನಿರ್ಬಂಧ ವಿಧಿಸಿದ್ದಾರೆ. ಜೊತೆಗೆ ಮಾತನಾಡುವ ಸದಸ್ಯರು ಜಾಸ್ತಿ ಇರುವುದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದಿಷ್ಟೆ. ಈ ಸರ್ಕಾರಕ್ಕೆ ಕಣ್ಣು, ಕಿವಿ ಇಲ್ಲವೆಂದು ನಾವು ಈಗಾಗಲೇ ತೀರ್ಮಾನ ಮಾಡಿದ್ದೇವೆ. ಈಗ ನಾವು ಎತ್ತರದ ಧ್ವನಿಯಲ್ಲಿ ಮಾತನಾಡುವಂಥ ಸ್ಥಿತಿಗೆ ಬರಬೇಕಾಗಿದೆ. ಆದುದರಿಂದ, ಕಿವಿ ಇದ್ದರೆ ರೈತರ ಕಡೆ ಗಮನಕೊಟ್ಟು, ಅವರಿಗೆ ಏನು ಆಗಬೇಕಾಗಿದೆಯೆಂದು ಕೇಳಿ. ನೀವು ಏನೂ ಮಾಡುವುದಕ್ಕೆ ಆಗದೇ ಇದ್ದರೆ 12 ಗಂಟೆ ಅಥವಾ 16 ಗಂಟೆಗಳ ಕಾಲ ವಿದ್ಯುತ್ ಕೊಡುವ ಪಾಲಿಸಿ ಏನಿದೆ, ಆ ಪಾಲಿಸಿ ಪ್ರಕಾರ ನಮಗೆ ವಿದ್ಯುತ್ ಸರಬರಾಜು ಮಾಡಬೇಕಾಗುತ್ತದೆ. ಇಲ್ಲವೆಂದರೆ ನಾವು ನಿಮ್ಮನ್ನು ಸುಮ್ಮನೆ

ಬಿಡುವುದಿಲ್ಲ. ತಮ್ಮ ಮುಂದೆ ನಾವು ಡಿಮ್ಯಾಂಡ್ ಮಾಡುತ್ತಿದ್ದೇವೆ. ಏನೆಂದರೆ, ತಾವು ಮತ್ತೆ ಯೂನಿಟ್‌ಗೆ 50-60 ಪೈಸೆ ಛಾರ್ಜ್ ಮಾಡುವುದಕ್ಕೆ ಹೊರಟಿದ್ದೀರಿ, ಈ ತೀರ್ಮಾನವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಜನರು ನಿಮಗೆ ಹೊಡೆದು ಬಿಡುತ್ತಾರೆ. ಈ ಸ್ಥಿತಿಯಲ್ಲಿ ಐ.ಪಿ. ಸೆಟ್‌ಗೆ ಮತ್ತೆ ಹಣ ಕೊಡಿ ಎಂದು ಸರ್ಕಾರ ಕೇಳುವುದಕ್ಕೆ ಬಂದರೆ ನಿಮ್ಮ ಅಧೀನದಲ್ಲಿರುವ ಸ್ಥಳೀಯ ಅಧಿಕಾರಿಗಳು ಏನು ತಿನ್ನಬೇಕಾಗುತ್ತದೆ. ನಿಮ್ಮ ಐಪಿಸಿ ನಮಗೇನೂ ಮಾಡುವಂತಿಲ್ಲ. ನಾವು ಸ್ವಲ್ಪ ಕಾನೂನು ಓದಿಕೊಂಡಿದ್ದೇವೆ. ಜಾಮೀನು ಯಾವಾಗ ತೆಗೆದುಕೊಳ್ಳಬೇಕೆಂದು ಗೊತ್ತಿದೆ, ಯಾವಾಗ ಕೊಡಿಸಬೇಕೆಂದು ಕೂಡ ಗೊತ್ತಿದೆ. ನಾವು ಇವೊತ್ತು ಸದನದಲ್ಲಿ ಹೇಳುತ್ತಿದ್ದೇನೆ ನಾಳೆ ಅಥವಾ ಮುಂದಿನ ತಿಂಗಳಿನಿಂದ ನಮಗೆ ಏನಾದರೂ ವಿದ್ಯುಚ್ಛಕ್ತಿ ಸರಬರಾಜು ಸರಿಯಾಗಿರದಿದ್ದರೆ ನಿಮ್ಮ ಅಧಿಕಾರಿಗಳನ್ನು ಅಲ್ಲಿಂದ ವಾಪಸ್ಸು ಕರೆಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಕೆಇಬಿಯನ್ನು ಕೋ-ಅಪರೇಟಿವ್ ಸೆಕ್ಟರ್‌ಗೆ ಅಥವಾ ಪ್ರೈವೇಟ್ ಸೆಕ್ಟರ್‌ಗೆ ವಹಿಸಿಕೊಡಿ. ಈ ರೀತಿ ಕೆಇಬಿ ಕಾರ್ಯ ನಿರ್ವಹಿಸಿದರೆ ಯಾರೂ ಉಳಿಯುವುದಿಲ್ಲ. ನಮ್ಮ ಫಸಲಿಗೆ ಆದ ನಷ್ಟ, ಹಾನಿಗೆ ನಿಮ್ಮ ಸರ್ಕಾರದಿಂದ ಯಾವುದೇ ಪರಿಹಾರವನ್ನು ನಾವು ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲವೆಂದು ನಮಗೆ ಈಗಾಗಲೇ ಅರ್ಥವಾಗಿದೆ. ಆದುದರಿಂದ, ದಯಮಾಡಿ ವಿದ್ಯುತ್ ಸರಬರಾಜನ್ನು ರೆಗ್ಯುಲರೈಸ್ ಮಾಡಬೇಕೆಂದು ಬೇಡಿಕೊಂಡು ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6.50 ಪಿ.ಎಂ

† ಶ್ರೀ ಎಸ್. ರುದ್ರಪ್ಪ (ತುರುವೇಕೆರೆ):- ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ಕೆ.ಇ.ಬಿ. ಬಗ್ಗೆ ನಮ್ಮ ಮಾಧುಸ್ವಾಮಿಯವರು ಪ್ರಾರಂಭ ಮಾಡಿದ ಕಾಲದಲ್ಲಿ ಒಂದು ಅಪಾದನೆಯನ್ನು ನನ್ನ ಮೇಲೆ ಹೊರಿಸಿದರು. ತುರುವೇಕೆರೆಯಲ್ಲಿ ಶಾಸಕರಿಗೆ ಹೇಳಿ ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡಿಸಿಕೊಳ್ಳಲಿ ರೈತರಿಗೆ ಎನ್ನುವ ಒಂದು ಮಾತನ್ನು ಹೇಳಿದರು. ಈ ಮಾತನ್ನು ಕೇಳಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಇಲ್ಲ ಇಲ್ಲ ನಾನು ಹೇಳಿದೆ ಇಲಾಖೆಯವರು ರೈತರಿಗೆ ಹೇಳಿದ್ದಾರೆ. ನನ್ನ ಸ್ವಂತ ಬ್ರದರ್ ಇನ್ ಲಾ, ನಾನು ಇಲ್ಲಿ ಚಾಲೆಂಜ್ ಮಾಡುವ ಹೊತ್ತಿಗೆ ಮೂರು ಸಾವಿರ ರೂಪಾಯಿಗಳನ್ನು ಕೊಟ್ಟು ರಿಪೇರಿ ಮಾಡಿಸಿಕೊಂಡು ಬಂದು ಹಾಕಿದ್ದಾರೆ. ಮಾನ್ಯ ರುದ್ರಪ್ಪನವರ ಹೆಸರನ್ನು ನಾನು ಏತಕ್ಕೆ ತರಲಿ.

ಶ್ರೀ ಎಸ್. ರುದ್ರಪ್ಪ:- ನನ್ನ ಹೆಸರು ಹೇಳಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಕೆ.ಇ.ಬಿ. ಡಿಪಾರ್ಟ್‌ಮೆಂಟ್‌ನವರು ರೈತರಿಗೆ ನೀವೇ ಟ್ರಾನ್ಸ್‌ಫಾರ್ಮರುಗಳನ್ನು ರಿಪೇರಿ ಮಾಡಿಸಿಕೊಳ್ಳಿ ಎಂದು ಹೇಳಿದ್ದಾರೆ.

ಶ್ರೀ ಎಸ್. ರುದ್ರಪ್ಪ:- ಮಾನ್ಯ ಅಧ್ಯಕ್ಷಿಣಿಯವರೇ ರೆಕಾರ್ಡ್‌ನ್ನು ನೋಡಿ, ಶಾಸಕರು ಹೇಳಿದ್ದಾರೆಂದು ಹೇಳಿದರು.

ಶ್ರೀ ಜೆ.ಸಿ. ಮಾಧುಸ್ವಾಮಿ:- ನನ್ನ ಸ್ವಂತ ಬ್ರದರ್ ಇನ್ ಲಾ ತುರುವೇಕೆರೆ ತಾಲ್ಲೂಕಿನಲ್ಲಿ ಘೂರು ಸಾವಿರ ಕೊಟ್ಟು ಟ್ರಾನ್ಸ್‌ಫಾರ್ಮರನ್ನು ರಿಪೇರಿ ಮಾಡಿಸಿರುತ್ತಾರೆ. ನಾನು ತಂದು ಕೊಡುತ್ತೇನೆ. ನಾನು ರುದ್ರಪ್ಪನವರ ಹೆಸರನ್ನು ಬಳಸಲಿಲ್ಲ. ದಯವಿಟ್ಟು ಕ್ಷಮಿಸಬೇಕು. ನಿಮ್ಮ ಡಿಪಾರ್ಟ್‌ಮೆಂಟ್‌ನವರು ಮಾಡಿರುವುದನ್ನು ಹೇಳಿದೆ. ನಾನು ರುದ್ರಪ್ಪನವರ ಬಗ್ಗೆ ಮಾತನಾಡಲಿಲ್ಲ.

ಶ್ರೀ ಎಸ್. ರುದ್ರಪ್ಪ:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ನಮ್ಮ ಮಾಧುಸ್ವಾಮಿಯವರು ನಮ್ಮ ತಾಲ್ಲೂಕಿನ ಅಳಿಯಂದರು. ಅವರಿಗೆ ನಮ್ಮ ತಾಲ್ಲೂಕಿನ ಕಷ್ಟ ಸುಮಾರಾಗಿ ಗೊತ್ತಿದೆ. ಆದರೆ ಒಂದು ಮಾತನ್ನು ಹೇಳಿದಾಗ, ಅವರು ಹೇಳಲಿಲ್ಲವೆಂದು ಹೇಳಿದರು, ಪರವಾಗಿಲ್ಲ. ಇವತ್ತು

ನಮ್ಮ ತುರುವೇಕೆರೆಯಲ್ಲಿ ಕೆ.ಇ.ಬಿ. ಬಗ್ಗೆ ಹೇಳಬೇಕಾದರೆ, ನಮ್ಮ ರೈತರ ಪರಿಸ್ಥಿತಿ ಏನಾಗಿದೆ ಎಂದರೆ ನಮಗೆ ಕಣ್ಣಿದ್ದರೂ ಕುರುಡರಾಗಿದ್ದೇವೆ. ಕರೆಂಟ್ ಇದೆ, ಆದರೆ ಐ.ಪಿ. ಸೆಟ್ ಓಡುತ್ತಾ ಇಲ್ಲ. ದಿನಕ್ಕೆ 6 ಗಂಟೆ ಸಹ ಇವತ್ತು ಐ.ಪಿ. ಸೆಟ್ ಓಡುತ್ತಾ ಇಲ್ಲ. ಮೋಟಾರ್ ಓಡುತ್ತಾ ಇಲ್ಲ. ಮೊನ್ನೆಯ ಒಂದು ಉದಾಹರಣೆಯನ್ನು ಹೇಳುತ್ತಿದ್ದೇನೆ. ಮೊನ್ನೆ ನನ್ನ ಗ್ರಾಮದಲ್ಲಿ ಸುಮಾರು 6 ಮೋಟಾರುಗಳು ಸುಟ್ಟು ಹೋಗಿವೆ. ರೈತರು ತೋಟದಲ್ಲಿ ಹೋಗಿ ಮಲಗಿಕೊಂಡು 12 ಗಂಟೆಗೆ 2 ಗಂಟೆಗೆ 3 ಗಂಟೆಗೆ ಕಾದರೂ ಸಹಿತ ಸಿಂಗಲ್ ಫ್ಯೂಸ್ ಇದ್ದರೂ ಸಹಿತ ಕರೆಂಟ್ ಬರುತ್ತಿರಲಿಲ್ಲ. ಮೂರು ಗಂಟೆಗೆ ಅವರು ಎದ್ದು ಹಾಕಿದರೆ ಮತ್ತೆ ಬೆಳಿಗ್ಗೆ 6 ಗಂಟೆಗೆ ಕರೆಂಟ್ ಹೋಗುತ್ತಿದೆ. ಇಂಥ ಒಂದು ಪರಿಸ್ಥಿತಿ ನಮ್ಮ ತಾಲ್ಲೂಕಿನಲ್ಲಿ ಇದೆ. ನಮ್ಮ ತಾಲೂಕ್ಕಿನಲ್ಲಿ ಕಳೆದ ಮೂರು ವರ್ಷದಲ್ಲಿ ಸುಮಾರು 500 ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟುಹೋಗಿವೆ, ಅವುಗಳನ್ನು ರಿಪೇರಿ ಮಾಡಿಲ್ಲ. 350 ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ನಮ್ಮ ಆಫೀಸ್‌ನಲ್ಲಿ ಬಿದ್ದಿವೆ. ಏತಕ್ಕೆ ಅವುಗಳನ್ನು ಬೆಂಗಳೂರಿಗೆ ಕಳುಹಿಸಿಲ್ಲ, ರಿಪೇರಿ ಮಾಡಿಸಿಲ್ಲವೆಂದು ಕೇಳಿದರೆ ಇಲ್ಲಿಗೆ ತರಬೇಡಿ ಎಂದು ಅಧಿಕಾರಿಗಳು ಹೇಳುತ್ತಾರೆ. ಅದಕ್ಕೆ ನಾವು ತೆಗೆದುಕೊಂಡು ಹೋಗಿಲ್ಲವೆಂದು ತಾಲ್ಲೂಕ್ಕಿನ ಅಧಿಕಾರಿಗಳು ಹೇಳುತ್ತಾರೆ. ಮೊನ್ನೆ ನಾನು ಪ್ರಶ್ನೆಯನ್ನು ಹಾಕಿದಾಗ ಸುಮಾರು 6 ಗ್ರಾಮಗಳಿಗೆ ಮಾತ್ರ ಕರೆಂಟ್ ಇಲ್ಲವೆಂದು ಹೇಳಿದರು. ಸುಮಾರು 25 ರಿಂದ 30 ಗ್ರಾಮಗಳಿಗೆ ಇವತ್ತು ಕರೆಂಟ್ ಇಲ್ಲ. ಸುಮಾರು 70 ಟ್ರಾನ್ಸ್‌ಫಾರ್ಮರ್‌ಗಳು ಒಂದು ತಿಂಗಳಲ್ಲಿ ಸುಟ್ಟು ಹೋಗಿವೆ. ಮೊನ್ನೆ ತಾನೆ 17 ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಟ್ಟಿದ್ದಾರೆ, ಇನ್ನು 20 ಟ್ರಾನ್ಸ್‌ಫಾರ್ಮರ್‌ಗಳು ಬೇಕಾಗಿದೆ. ಕಳೆದ ನಾಲ್ಕು ತಿಂಗಳಿಂದ ಹಳ್ಳಿಗಳಿಗೆ ಕರೆಂಟ್ ಇಲ್ಲ, ಐ.ಪಿ. ಸೆಟ್‌ಗಳು ಓಡುತ್ತಿಲ್ಲ. ಆಡಿಷನಲ್ ಟ್ರಾನ್ಸ್‌ಫಾರ್ಮರ್‌ಗಳು ಸುಮಾರು 75 ಬೇಕಾಗಿದ್ದು, ಇದುವರೆಗೂ ನಮಗೆ ಆಡಿಷನಲ್ ಟ್ರಾನ್ಸ್‌ಫಾರ್ಮರ್‌ಗಳು ಒಂದೂ ಹಾಕಿಲ್ಲ. ಸುಟ್ಟುಹೋದ ಟ್ರಾನ್ಸ್‌ಫಾರ್ಮರ್ ಜಾಗದಲ್ಲಿ ಬೇರೆಯದನ್ನು ಅತಿ ಜಾಗ್ರತೆಯಾಗಿ ಹಾಕಬೇಕಾಗಿದೆ. ನಮ್ಮ ತಾಲ್ಲೂಕ್ಕಿನಲ್ಲಿ ಎಂ.ಇ.ಎಸ್. ಒಂದು ಸ್ಟೇಷನ್ ಇದೆ. ಇವತ್ತು ಅಲ್ಲಿ ಓವರ್‌ಲೋಡ್ ಆಗಿದೆ. ದಿನಕ್ಕೆ 20 ರಿಂದ 30 ಸಾರಿ ಟ್ರಿಪ್ ಆಗುತ್ತಿದೆ, ರೈತರಿಗೆ ಬಹಳ ತೊಂದರೆ ಆಗಿದೆ. ಅಲ್ಲಿ ಒಂದು ಆಡಿಷನಲ್ ಟ್ರಾನ್ಸ್‌ಫಾರ್ಮರ್ ಬೇಕಾಗಿದೆ. ಅದನ್ನು ಕೊಟ್ಟರೆ ರೈತರಿಗೆ ಉತ್ತಮವಾದ ಕರೆಂಟ್ ಕೊಡಬಹುದೆಂದು ನನ್ನ ಭಾವನೆ. ನಮ್ಮ ತಾಲ್ಲೂಕ್ಕಿನ ದಂಡಿನಶಿವರ, ಮಾಯಸಂದ್ರಕ್ಕೆ 1992ನೇ ಇಸವಿ ಫೆಬ್ರುವರಿಯಲ್ಲಿ ಎರಡು ಸೆಕ್ಷನ್ ಆಫೀಸರ್‌ಗಳು ಪೋಸ್ಟ್‌ನ್ನು ಸ್ಯಾಂಕ್ಷನ್ ಮಾಡಿಕೊಟ್ಟರು. ಇದುವರೆಗೂ ಅವರು ಕೆಲಸವನ್ನು ಪ್ರಾರಂಭ ಮಾಡಿಲ್ಲ. ದಂಡಿನಶಿವಾರದಿಂದ ತುರುವೇಕೆರೆಗೆ ಮೂವತ್ತು ಕಿಲೋಮೀಟರ್ ಇದ್ದು ರೈತರು ಬಂದು ಕರೆಂಟು ಫೀಸನ್ನು ಕಟ್ಟಬೇಕಾಗಿದೆ. ಮಾಯಸಂದ್ರದಿಂದ ಸಹ 20–25 ಕಿಲೋಮೀಟರ್ ತುರುವೇಕೆರೆಗೆ ಆಗುತ್ತದೆ. ನಾವು ಕೇಳಿದರೆ ನಮ್ಮಲ್ಲಿ ಸ್ಟಾಫ್ ಇಲ್ಲ ನಾವು ಏನು ಮಾಡೋಣವೆಂದು ನಮ್ಮ ಅಧಿಕಾರಿಗಳು ಹೇಳುತ್ತಾರೆ. ಅದಕ್ಕೋಸ್ಕರವಾಗಿ ತಕ್ಷಣವೇ ಸೆಕ್ಷನ್ ಆಫೀಸರನ್ನು ಕೊಟ್ಟು ಕಛೇರಿಯನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ಇನ್ನು ಮೂರನೆಯದಾಗಿ ನಮ್ಮ ತುರುವೇಕೆರೆ ತಾಲ್ಲೂಕಿನಲ್ಲಿ ಈ ವರ್ಷ 1100 ಐ.ಪಿ. ಸೆಟ್ಟುಗಳಿಗೆ ಕನೆಕ್ಷನ್ ಕೊಟ್ಟಿದ್ದಾರೆ. ಇನ್ನು ಸುಮಾರು 1100ಕ್ಕೆ ಫಿಕ್ಸ್ ಮಾಡಿದ ಪ್ರಕಾರ ಉಳಿದ ಎರಡು ತಿಂಗಳಲ್ಲಿ ಕನೆಕ್ಷನ್ ಕೊಡಬೇಕಾಗಿದೆ. ಅಧಿಕಾರಿಗಳನ್ನು ಕೇಳಿದರೆ ವೈರು ಇಲ್ಲ ಪಿ.ಸಿ. ಸೆಟ್ಸ್ ಸಾಮಾನಿಲ್ಲವೆಂದು ಅನೇಕ ಸಮಸ್ಯೆಗಳನ್ನು ಹೇಳುತ್ತಿದ್ದಾರೆ. ಇನ್ನು 2 ತಿಂಗಳಲ್ಲಿ ಸುಮಾರು 670 ಐ.ಪಿ. ಸೆಟ್‌ಗಳಿಗೆ ಕನೆಕ್ಷನ್ ಕೊಡಬೇಕಾಗಿದೆ. ಐ.ಪಿ. ಸೆಟ್‌ಗೆ ಕನೆಕ್ಷನ್ ಕೊಡದೇ ಹೋದರೆ ರೈತರು ಕಂಗಾಲಾಗುತ್ತಾರೆ. ಅತಿ ಶೀಘ್ರವಾಗಿ ನಮಗೆ ವೈರು ಪಿ.ಸಿ. ಸೆಟ್‌ಗಳನ್ನು ಒದಗಿಸಬೇಕೆಂದು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ 50 ಗೊಲ್ಲರ ಹಟ್ಟಿಗಳು ಇವೆ, ಇದರಲ್ಲಿ ಕೇವಲ 10–15 ಗೊಲ್ಲರ ಹಟ್ಟಿಗಳಿಗೆ ಮಾತ್ರ ಲೈಟ್ ಇದೆ. ಸ್ವಾತಂತ್ರ್ಯ ಬಂದ ಮೇಲೂ ಕೂಡ ಎಷ್ಟೋ ಗೊಲ್ಲರ ಹಟ್ಟಿಗಳಿಗೆ ಲೈಟಿಂಗ್ ಕೊಟ್ಟಿಲ್ಲ, ನಮ್ಮಲ್ಲಿ 30 ಗೊಲ್ಲರ ಹಟ್ಟಿಗಳಿಗೆ ಲೈಟಿಂಗ್ ಇಲ್ಲ, 10–15

ಜನತಾ ಕಾಲೋನಿಗಳಿಗೆ ಲೈಟಿಂಗ್ ಇಲ್ಲ, ಅತಿ ಮುಖ್ಯವಾಗಿ ಗೊಲ್ಲರ ಹಟ್ಟಿಗಳಿಗೆ ಲೈಟಿಂಗ್ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿಸುತ್ತೇನೆ. ಅರಳಗುಪ್ಪೆ ಗೊಲ್ಲರಹಟ್ಟಿ, ದ್ವಾರನ ಹಳ್ಳಿ ಗೊಲ್ಲಹಟ್ಟಿ, ಬೇವಿನಮರದ ಹಟ್ಟಿ, ದೊಡ್ಡೇನಹಳ್ಳಿ, ಮಂಚೇನಹಳ್ಳಿ ಗೊಲ್ಲರ ಹಟ್ಟಿ, ರಂಗನಹಳ್ಳಿ ಗೊಲ್ಲರಹಟ್ಟಿ, ಹೊಸಹಟ್ಟಿ, ಕೋಡಗಲ್ಲುಹಟ್ಟಿ, ಬಸವಾಪುರಹಟ್ಟಿ, ದಶರಥಪುರ ಹಟ್ಟಿ, ಹಳ್ಳಿಗೊಲ್ಲರ ಹಟ್ಟಿ ವೀರಸಾಗರದ ಗೊಲ್ಲರ ಹಟ್ಟಿ, ಹುಲ್ಲೇಕೆರೆ ಗೊಲ್ಲರ ಹಟ್ಟಿ, ಸಿದ್ದನ ಗೊಲ್ಲರಹಟ್ಟಿ, ಅಮರಹಟ್ಟಿ ಗೊಲ್ಲರ ಹಟ್ಟಿ, ತುಂಬೇಪುರದ ಗೊಲ್ಲರ ಹಟ್ಟಿ, ಹಾಲುದೇವರ ಗೊಲ್ಲರಹಟ್ಟಿ, ಬೊಮ್ಮೇನಹಳ್ಳಿ ಗೊಲ್ಲರ ಹಟ್ಟಿ, ಬೀಚನಹಳ್ಳಿ ಗೊಲ್ಲರ ಹಟ್ಟಿ, ಮುಗಳೂರು ಗೊಲ್ಲರ ಹಟ್ಟಿ, ಮಲ್ಲಿದೇವನ ಗೊಲ್ಲರ ಹಟ್ಟಿ, ದೊಡ್ಡೇರಿ ಗೊಲ್ಲರ ಹಟ್ಟಿ, ಯರನ ಗೊಲ್ಲರ ಹಟ್ಟಿ, ವರಾಹಸಂದ್ರದ ಗೊಲ್ಲರ ಹಟ್ಟಿ, ತರಮನಕೋಟೆ ಗೊಲ್ಲರ ಹಟ್ಟಿ, ಕೊಮ್ಮರ ದೇವನಹಳ್ಳಿ ಗೊಲ್ಲರ ಹಟ್ಟಿ, ಗಿಡ್ಡನಹಟ್ಟಿ, ಮಲ್ಲಿಗೆರೆ ಹಟ್ಟಿ, ಸೀಗೇ ಹಳ್ಳಿ ಗೊಲ್ಲರ ಹಟ್ಟಿ, ಜನತಾ ಕಾಲೋನಿಗಳು, ತಂಡದ ಜನತಾ ಕಾಲೇನಿ, ಕರಿಕಲ್ಲು ಕ್ರಾಸ್, ಸೋಮನಹಳ್ಳಿ ಬೋವಿ ಕಾಲೋನಿ ಆಲದ ಹಳ್ಳಿ ಜನತಾ ಕಾಲೋನಿ ಜಡೆಯ ಮುನಿಯೂರು, ಕೊಂಡಜ್ಜಿ ಕ್ರಾಸ್, ಇನ್ನೂ ಅನೇಕ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಇಲ್ಲ. ಅವುಗಳಿಗಿರುವ ವೋಲ್ಟೇಜ್ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಜಿಗನಹಳ್ಳಿ ಕ್ರಾಸ್‌ನಲ್ಲಿ ಪ್ರಾರಂಭ ಮಾಡಿದರು ಅವು ಡಿಸೆಂಬರ್‌ನಲ್ಲಿ ಸರ್ವೀಸ್ ಕೊಡುತ್ತದೆಂದು ಹಿಂದಿನ ಅಧ್ಯಕ್ಷರಾಗಿದ್ದ ನರಸಿಂಹಮೂರ್ತಿಯವರು ಹೇಳಿದ್ದರು. ಈಗಿನ ಅಧ್ಯಕ್ಷರನ್ನು ಕೇಳಿದಾಗ ಮಾರ್ಚ್, ಏಪ್ರಿಲ್‌ಗೆ ಕೊಡುತ್ತೇವೆಂದು ಹೇಳಿದ್ದಾರೆ. ಅತಿಶೀಘ್ರದಲ್ಲಿ ವೋಲ್ಟೇಜ್ ಸಮಸ್ಯೆಯನ್ನು ಬಗೆಹರಿಸಿ ಸರ್ವೀಸ್ ಕೊಡಿಸಬೇಕು. ನಮ್ಮ ತಾಲ್ಲೂಕಿನಲ್ಲಿ ಇನ್ನೂ ಅನೇಕ ಸಮಸ್ಯೆಗಳು ಇವೆ, ಆ ಸಮಸ್ಯೆಗಳನ್ನೆಲ್ಲಾ ಬಗೆಹರಿಸಬೇಕಾದರೆ ಕೆ.ಇ.ಬಿ. ಮುಖ್ಯವಾಗಿ ಉತ್ತಮವಾದ ಕೆಲಸ ಮಾಡಬೇಕಾಗಿದೆ. ಆ ಕೆಲಸವನ್ನು ಅತಿ ಶೀಘ್ರವಾಗಿ ಮಾಡುತ್ತದೆಂದು ಹೇಳಿ ಈ ಸಮಸ್ಯೆ ಟ್ರಾನ್ಸ್‌ಫಾರ್ಮರ್ ಸಮಸ್ಯೆಗಳನ್ನು ಅತಿಶೀಘ್ರವಾಗಿ ಹೋಗಲಾಡಿಸಬೇಕೆಂದು ವಿನಂತಿಸುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ):- ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾತನಾಡಿದಂಥ ಗೆಳೆಯ ಮಾಧುಸ್ವಾಮಿ, ರುದ್ರಪ್ಪನವರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕೇವಲ ನಮ್ಮ ಜಿಲ್ಲೆಯ ಸಮಸ್ಯೆಗಳಿಗೆ ಹೆಚ್ಚು ಒತ್ತನ್ನು ಕೊಟ್ಟರೂ ಸಹ ಈ ಸಮಸ್ಯೆಗಳು ಇಡೀ ರಾಜ್ಯಕ್ಕೆ ಅನ್ವಯವಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಕರ್ನಾಟಕ ರಾಜ್ಯ ವಿದ್ಯುತ್ ಮಂಡಲಿ ಏನು ಇದೆ ಈ ಮಂಡಲಿಯ ಕಾರ್ಯ ನಿರ್ವಹಣೆಯಲ್ಲಿ ಒಂದು ಮಾತನ್ನು ಹೇಳುವುದಾದರೆ ಇದು ಅತ್ಯಂತ ಅದಕ್ಷ ಮತ್ತು ಭ್ರಷ್ಟಾಚಾರದಿಂದ ಕೂಡಿದಂಥ ಒಂದು ಆಡಳಿತ ಮಂಡಲಿ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಇದನ್ನು ಸಾರ್ವಜನಿಕರು ಸಾರ್ವತ್ರಿಕವಾಗಿ ಯಾವುದೇ ಪಕ್ಷ ಭೇಧ ಮರೆತು ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ. ಏತಕ್ಕೆಂದರೆ ಅಲ್ಲಿ ವಿದ್ಯುತ್ ಪೂರೈಕೆ ಏನು ಇದೆ ಅದು ಕೇವಲ ಹಣದ ಚಲಾವಣೆಯ ಮೇಲೆ ಮಾತ್ರ ಪೂರೈಕೆಯಾಗುತ್ತಿದೆ. ಇದಕ್ಕೆ ಏನು ಆಧಾರವೆಂದು ತಾವು ಕೇಳಬಹುದು. ನಾನು ಮುಖ್ಯಮಂತ್ರಿಗಳನ್ನು ಮತ್ತು ಸಂಬಂಧಪಟ್ಟ ಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛಿಸುತ್ತೇನೆ. ತಾವು ಏನು ವಿದ್ಯುತ್ ಪೂರೈಕೆ ಮಾಡಬೇಕೆಂದು ಇದ್ದೀರಿ ಅದನ್ನು ನಿಯಮಗಳನ್ನು ಅನುಸರಿಸಿ ಪೂರೈಕೆ ಮಾಡಿದ್ದೀರಿ. ಒಂದು ಟ್ರಾನ್ಸ್‌ಫಾರ್ಮರ್ ಕೇಂದ್ರದಿಂದ ಇಂತಿಷ್ಟು ಅಶ್ವ ಶಕ್ತಿ ಐ.ಪಿ. ಸೆಟ್‌ಗಳಿಗೆ ತಾವು ವಿದ್ಯುತ್ ಪೂರೈಕೆ ಮಾಡಬೇಕೆಂಬ ನಿಯಮವಿದ್ದರೆ ತಾವು ಅಷ್ಟೇ ಅಶ್ವ ಶಕ್ತಿಯ ವಿದ್ಯುತ್ ಪಂಪುಗಳಿಗೆ ತಾವು ವಿದ್ಯುತ್ ಅನ್ನು ಪೂರೈಕೆ ಮಾಡಿದ್ದೀರಾ? ಅಲ್ಲಿ 25 ಹೆಚ್.ಪಿ. ಕೆಪ್ಯಾಸಿಟಿಯಿರುವಂತಹ ಟ್ರಾನ್ಸ್‌ಫಾರ್ಮರ್ ಕೇಂದ್ರ ಇದ್ದರೆ ನೀವು 40 ಹೆಚ್.ಪಿ. ಇರುವಂತಹ ವಿದ್ಯುತ್ ಪಂಪ್‌ಸೆಟ್‌ಗಳಿಗೆ ಕೊಟ್ಟಿರುತ್ತೀರಿ. ಏಕೆ ಕೊಟ್ಟಿರುತ್ತೀರಿ. ಏಕೆ ಕೊಟ್ಟಿರುತ್ತೀರಿ? ಏಕೆ ಕೊಡುತ್ತೀರೆಂದರೆ

ಏನಾದರೂ ಅಲ್ಲಿ ಲಾಭ ಇರಬೇಕಲ್ಲ. ಇದಕ್ಕಿಂತ ಉದಾಹರಣೆ ಏನು ಬೇಕು? ಇವರು ನಿಯಮಗಳನ್ನು ಮಾಡಿಕೊಂಡಿದ್ದಾರೆ ಆದರೆ ಈ ನಿಯಮಗಳನ್ನು ಮಾಡಿಕೊಂಡಿರುವುದು ಪಾಲಿಸುವುದಕ್ಕಲ್ಲ ಉಲ್ಲಂಘನೆ ಮಾಡುವುದಕ್ಕೆ ನೇರವಾಗಿ ನಾನು ಪ್ರಶ್ನೆ ಕೇಳುತ್ತಿದ್ದೇನೆ. ನನ್ನ ಜೊತೆಯಲ್ಲಿ ಯಾವ ಮಂತ್ರಿಗಳಾಗಲೀ, ಅಧಿಕಾರಿಗಳಾಗಲೀ ಬರಲಿ. ಒಂದು ಟ್ರಾನ್ಸ್‌ಫಾರ್ಮರ್ ಕೇಂದ್ರದಿಂದ ಕೇವಲ 750 ಮೀಟರ್ ಅಂತರದವರೆಗೆ ಮಾತ್ರ ಪಂಪ್‌ಸೆಟ್ ಇರಬೇಕೆಂಬ ನಿಯಮವಿದೆ. ಅದಕ್ಕಿಂತ ಮುಂದೆ ಇದ್ದರೆ, ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸ್ ಜಾಸ್ತಿಯಾಗುತ್ತಿದೆ. ಮತ್ತು ಓಲ್ಟೇಜ್ ಸಹ ಕಡಿಮೆಯಾಗುತ್ತದೆ. ಇದು ಅವರೇ ಮಾಡಿಕೊಂಡಿರುವಂಥ ನಿಯಮ. ನಾನು ಕೇಳುತ್ತೇನೆ ಎಷ್ಟೋ ಟ್ರಾನ್ಸ್‌ಫಾರ್ಮರ್ ಕೇಂದ್ರಗಳಿಂದ 750 ಮೀಟರ್‌ಗಿಂತ ದೂರ ಇರುವಂಥ ಐ.ಪಿ. ಸೆಟ್‌ಗಳಿಗೆ ತಾವು ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡಿದ್ದೀರಿ. ಅವರಿಗೆ ಒಂದು ಕಡೆ ಗುರಿಯನ್ನು ಮುಟ್ಟಬೇಕು, ಮತ್ತೊಂದು ಕಡೆ ವೈಯಕ್ತಿಕವಾದಂಥ ಲಾಭವನ್ನು ಮಾಡಬೇಕು ಎನ್ನುವುದು ಮುಖ್ಯವಾದಂಥ ಉದ್ದೇಶ. ಕಳೆದ 15 ವರ್ಷಗಳಿಂದ ನಾನು ಯಾವುದೇ ಸರ್ಕಾರವನ್ನು ಟೀಕೆ ಮಾಡುತ್ತಿಲ್ಲ. ಈ ಕೆ.ಇ.ಬಿ.ಯವರ ಕಾರ್ಯನಿರ್ವಹಣೆ ಹೇಗಿದೆ ಎಂದರೆ ಸಿಸ್ಟಮ್ ಇಂಪ್ರೂವ್‌ಮೆಂಟ್ ವರ್ಕ್ಸ್ ಎಂದು ನಾವು ಏನು ಕರೆಯುತ್ತೇವೆ ಅದಕ್ಕೆ ಬಜೆಟ್‌ನಲ್ಲಿ ಎಷ್ಟು ಹಣವನ್ನು ತಾವು ತೊಡಗಿಸಿಕೊಂಡಿದ್ದೀರಿ, ಆ ಹಣದಲ್ಲಿ ಎಷ್ಟು ಭಾಗವನ್ನು ನೀವು ಸಿಸ್ಟಮ್ ಇಂಪ್ರೂವ್‌ಮೆಂಟ್‌ಗೋಸ್ಕರ ಖರ್ಚು ಮಾಡಿದ್ದೀರಿ ಈ ಲೆಕ್ಕವನ್ನು ಕೊಡಬೇಕಾಗುತ್ತದೆ. ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ಸುಮಾರು 31-3-1991ಕ್ಕೆ 74 ಸಾವಿರಕ್ಕಿಂತಲೂ ಹೆಚ್ಚು ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಇದ್ದುವು. 1990-91ರಲ್ಲಿ 4900ಕ್ಕೂ ಹೆಚ್ಚು ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ನೀವು ಸೇರ್ಪಡೆ ಮಾಡಿದ್ದೀರಿ. 1992ನೇ ಇಸವಿಯಲ್ಲಿ ಅದೂ ಇನ್ನೂ ಹೆಚ್ಚಾಗಿದೆ. ಹಾಗಾದರೆ ಸಾಗಾಣಿಕೆಗೆ ಉದ್ದಲೈನ್ ಏನಿದೆ ಎಷ್ಟು ಕಿಲೋಮೀಟರ್ ಹಾಕಿದ್ದೀರಿ, ಇವುಗಳ ಲೆಕ್ಕ ಇರಬೇಕಲ್ಲ! ಈ ಎಲ್ಲಾ ಲೆಕ್ಕವನ್ನು ನೋಡಿದಾಗ ಅವರು ಖಂಡಿತವಾಗಿಯೂ ಸಹ ಅಗತ್ಯವಾದಂಥ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಿಲ್ಲವೆನ್ನುವ ಮಾತನ್ನು ಅವರ ಅಂಕಿಅಂಶಗಳೇ ಒಪ್ಪುತ್ತವೆ. ಅದಕಿಂತ ಹೆಚ್ಚಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ. ಚಿತ್ರದುರ್ಗಾ ಜಿಲ್ಲೆಯಲ್ಲಿ ಸುಮಾರು 3,000 ಟ್ರಾನ್ಸ್‌ಫಾರ್ಮರ್‌ಗಳು ಇದ್ದರೂ ಸಹ ಅದರಲ್ಲಿ ಶೇಕಡಾವಾರು ಎಷ್ಟು ಕೆಟ್ಟಿದೆ ಎಂಬುದನ್ನು ತಾವು ತೆಗೆದು ನೋಡಬೇಕು. ನಾನು ಏತಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇತ್ತೀಚೆಗೆ ಅದರ ಅದಕ್ಷತೆ ಮತ್ತು ಭ್ರಷ್ಟಾಚಾರ ಎಷ್ಟಾಗಿದೆ ಎನ್ನುವುದಕ್ಕೆ ಒಂದೇ ಒಂದು ಉದಾಹರಣೆ ನಾನು ಕೊಡುತ್ತೇನೆ. 1988ರಿಂದ ಪ್ರತಿವರ್ಷವೂ ಸಹ ಎಷ್ಟು ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟುಹೋದವು, ಇತ್ತೀಚಿನ ದಿವಸಗಳಲ್ಲಿ ಈ ಶೇಕಡಾವಾರು ಪ್ರಮಾಣ ಎಷ್ಟು? ಕೆಟ್ಟಿರುವಂಥ ಟ್ರಾನ್ಸ್‌ಫಾರ್ಮರ್‌ಗಳು ಸಂಖ್ಯೆ ವಿಪರೀತ ಜಾಸ್ತಿಯಾಗುತ್ತಿದೆ, ಇದಕ್ಕೆ ಕಾರಣ ಏನು? ಅವರು ಅಂಕಿಅಂಶಗಳನ್ನು ಕೊಡಲಿ. ಇದಕ್ಕೆ ವಿದ್ಯುಚ್ಛಕ್ತಿ ಮಂಡಳಿಯ ಅದಕ್ಷತೆಯೇ ಕಾರಣ. ಅವರಲ್ಲಿರುವಂಥ ಭ್ರಷ್ಟಾಚಾರವೇ ಕಾರಣ. ಅವರಲ್ಲಿರುವಂಥ ನೌಕರರು ಟ್ರಾನ್ಸ್‌ಫಾರ್ಮರ್‌ನಲ್ಲಿರುವಂಥ ಎಣ್ಣೆಯನ್ನು, ಬೇರೆ ಬೇರೆ ಸಾಮಗ್ರಿಗಳನ್ನು ಕದ್ದುಕೊಂಡು ಹೋಗುತ್ತಿರುತ್ತಾರೆ. ಅವರು ಶಾಮೀಲಾಗದೆ ಇದನ್ನು ಬೇರೆಯವರು ಮಾಡಲಿಕ್ಕೆ ಸಾಧ್ಯವಿಲ್ಲ. ಸಂಬಂಧಪಟ್ಟವರನ್ನು ಹಿಡಿದುಹಾಕಿದರೆ, ರಾಜಕೀಯ ಪ್ರಭಾವ ಬೀರಿ ಅವರನ್ನು ಕೈಬಿಡುವಂಥ ಪ್ರಯತ್ನ ಮಾಡುತ್ತಾರೆ. ಟ್ರಾನ್ಸ್‌ಫಾರ್ಮರ್‌ಗಳ ಖರೀದಿಯಲ್ಲಿ ಅಥವಾ ರಿಪೇರಿಯಲ್ಲಿ ಅವ್ಯವಹಾರ ನಡೆದಿದ್ದು, ಅದರ ಬಗ್ಗೆ ತನಿಖೆ ಮಾಡಿಸಬೇಕು. ಕೆಲವು ಟ್ರಾನ್ಸ್‌ಫಾರ್ಮರ್‌ಗಳು ಖಾಸಗೀ ಕಂಪೆನಿಯವರಿಂದ ಕೊಂಡುಕೊಂಡಿದ್ದಾರೆ. ಆ ಖಾಸಗಿ ಕಂಪನಿಯಿಂದ ಕೊಂಡುಕೊಂಡ ಟ್ರಾನ್ಸ್‌ಫಾರ್ಮರುಗಳು ಗ್ಯಾರಂಟಿ ಪೀರಿಡ್‌ನಲ್ಲಿ ಎಷ್ಟರಮಟ್ಟಿಗೆ ಕೆಲಸ ಮಾಡಿವೆ, ಎಷ್ಟು ಕೆಟ್ಟು ಹೋಗಿವೆ ಎನ್ನುವ ಲೆಕ್ಕ ನೋಡಿ, ಅದಾದಮೇಲೆ ಎಷ್ಟರ ಮಟ್ಟಿಗೆ ಸರಿಪಡಿಸಿದರು ಎನ್ನುವುದನ್ನು ನೋಡಿ. ಯಾವಾಗ

ಕೇಳಿದರೂ ಟ್ರಾನ್ಸ್‌ಫಾರ್ಮರ್‌ಗಳು ಇಲ್ಲ, ಯಾವಾಗ ಕೇಳಿದರು ಟ್ರಾನ್ಸ್‌ಫಾರ್ಮಗಳು ಕೆಟ್ಟಿವೆ ಎಂದು ಹೇಳುತ್ತಾರೆ. ನಾನು ಒಂದು ಸಾರಿ ಹಿರಿಯೂರು ಮತ್ತು ಚಿತ್ರದುರ್ಗದಲ್ಲಿ ಈ ಕೆಲಸವನ್ನು ಪರೀಕ್ಷೆ ಮಾಡಲು ಪ್ರಯತ್ನ ಪಟ್ಟಾಗ ಇವರು ಕೇಂದ್ರದಿಂದ ಅಂದರೆ ಬೆಂಗಳೂರಿನಿಂದ ಕಳುಹಿಸುವಂಥ ಟ್ರಾನ್ಸ್‌ಫಾರ್ಮರ್‌ಗಳು ಅಲ್ಲಿಯೇ ಕೆಟ್ಟುಹೋದಂಥವು. ಆ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲು ಮಾಡಲಿಕ್ಕೆ ಸಾಧ್ಯವಾಗಲಿಲ್ಲ ಎನ್ನುವುದು ತಿಳಿಯಿತು. ಅಂದರೆ ಹೊಸದಾಗಿ ಕಳುಹಿಸುವಂಥ ಟ್ರಾನ್ಸ್‌ಫಾರ್ಮರ್‌ಗಳೆಲ್ಲಾ ಅಲ್ಲ ಕೆಟ್ಟುಹೋದಂಥವು. ಅಂಥವುಗಳನ್ನು ವಿದ್ಯುತ್‌ನ್ನು ಪೂರೈಕೆ ಮಾಡಲಿಕ್ಕೆ ರೈತರು ಮತ್ತು ಗ್ರಾಹಕರಿಗೆ ಕೊಟ್ಟಿದ್ದಾರೆ. ಯಾವಾಗ ಅವುಗಳ ಕೊರತೆ ಹೆಚ್ಚಾಗುತ್ತದೆ, ಕೊರತೆ ಹೆಚ್ಚಾದಾಗ ತಮಗೆ ಗೊತ್ತಿದೆ ಭ್ರಷ್ಟಾಚಾರ ಹೆಚ್ಚಾಗುತ್ತದೆ. ಇವತ್ತಿನದಿವಸ ನಾನು ಕೇಳುತ್ತಿದ್ದೇನೆ, ಅವಶ್ಯಕವಾದಂಥ ಟ್ರಾನ್ಸ್‌ಫಾರ್ಮರ್ಸ್ ಎಷ್ಟು ಬೇಕಾಗಿದೆ, ತಾವು ಎಷ್ಟು ಪೂರೈಕೆ ಮಾಡಿದ್ದಿರಿ. ಆ ಲೆಕ್ಕದ ಆ ಪಟ್ಟಿಯನ್ನು ಸಭೆಯ ಮುಂದೆ ಇಟ್ಟರೆ ಖಂಡಿತವಾಗಿಯೂ ಸಹ ನಾವು ಹೇಳುವಂಥ ಆರೋಪದಲ್ಲಿ ಅರ್ಥ ಇದೆಯೋ ಇಲ್ಲವೆಂಬುದು ಗೊತ್ತಾಗುತ್ತದೆ. ಇವತ್ತಿನದಿವಸ ರೈತರಿಗೆ ವಿದ್ಯುತ್ತನ್ನು ಪೂರೈಕೆ ಮಾಡುವುದರ ಜೊತೆಗೆ ನಾವು ಬೇರೆ ಗ್ರಾಹಕರಿಗೂ ವಿದ್ಯುತ್ತನ್ನು ಪೂರೈಕೆ ಮಾಡುತ್ತೇವೆ. ಈ ಮಾತನ್ನು ಹೇಳಿದಾಗ ನಾವು ಯಾರು ಕೈಗಾರಿಕಾ ಉದ್ಯಮಿಗಳಿದ್ದಾರೆ ಅವರಿಗೆ ವಿರೋಧವೆನ್ನುವ ಭಾವನೆ ಬರಬಾರದು. ಕೈಗಾರಿಕಾ ಸಂಪತ್ತನ್ನು ಹೆಚ್ಚಿಸಲಿಕ್ಕೆ ಬೇಕಾದಂಥ ಕೆಲಸವನ್ನು ಸರ್ಕಾರ ಮಾಡಬಾರದೆನ್ನುವುದು ನಮ್ಮ ಭಾವನೆ ಅಲ್ಲ. ಆದರೆ ಅವನಿಗೆ ಸುಲಭವಾಗಿ ಸಿಗುವಷ್ಟು ವಿದ್ಯುತ್ ಈ ದೇಶದ ಸಾಮಾನ್ಯ ರೈತರಿಗೆ ಗ್ರಾಹಕರಿಗೆ ಸಿಗುವುದಿಲ್ಲ.

ಶ್ರೀ ಸಿ. ಬೈರೇಗೌಡ:- ಈಗ ತಮಗೊಂದು ಸಲಹೆ, ಈ ಅಧಿವೇಶನ ಆದಮೇಲೆ ತಾವು ಮಂತ್ರಿಮಂಡಲವನ್ನು ವಿಸ್ತರಣೆ ಮಾಡುತ್ತೀರೆಂದು ಗೊತ್ತಾಗಿದೆ. ಈಗ ಸಭೆಯಲ್ಲಿ ಯಾರು ಹಾಜರಿದ್ದಾರೆ ಅವರಿಗೆ ಮಾತ್ರ ವಿಸ್ತರಣೆಯಲ್ಲಿ ಅವಕಾಶ ಮಾಡಿಕೊಡಿ.

ಶ್ರೀ ವಾಟಾಳ್ ನಾಗರಾಜ್:- ಮುಖ್ಯಮಂತ್ರಿಗಳು ಸಭೆಯಲ್ಲಿ ಕುಳಿತಿರುವಾಗ ನಿಮ್ಮ ಪಕ್ಷದ ಸದಸ್ಯರು ಹಾಜರಿಲ್ಲವೆಂದರೆ ಏನು ಪರಿಸ್ಥಿತಿ? ಈ ಕಡೆ ನಾನು ಒಬ್ಬ ಇದ್ದರೂ 25 ಜನ ಇದ್ದ ಹಾಗೆ ಎಂದು ಗೊತ್ತಿದೆ...

ಶ್ರೀ ಸಿ. ಬೈರೇಗೌಡ:- ನಿಮ್ಮ ವಿಪ್‌ಗೆ ಹೇಳಿ ಯಾರ್‍ಯಾರು ಇದ್ದಾರೆಂದು ಹೆಸರು ಬರೆಸಿಕೊಂಡು ರಾಜ್ಯಪಾಲರಿಗೆ ನೇರವಾಗಿ ಕಳುಹಿಸಿ.

ಶ್ರೀ ಹೆಚ್. ಏಕಾಂತಯ್ಯ:- ನಾನು ಹೇಳತಕ್ಕದ್ದು ವಿದ್ಯುತ್ ಪೂರೈಕೆ ಮಾಡುವಾಗ ನಿಮ್ಮ ಸರ್ಕಾರದ ನೀತಿ ಏನಿದೆ ಇದು ಮೇಲ್ವರ್ಗದ ಪರವಾಗಿರುವ ನೀತಿಯಾಗಿದೆ. ಏತಕ್ಕೆಂದರೆ ಈ ದೇಶದ ಕೈಗಾರಿಕೆಗಳಿಗೆ ವಿದ್ಯುತ್ ಪೂರೈಕೆ ಮಾಡಬಾರದೆಂದು ನಾನು ಹೇಳುತ್ತಿಲ್ಲ; ಅವರಿಗೆ ಎಷ್ಟು ಜಾಗತ್ರೆಯಾಗಿ ಸಂಬಂಧಪಟ್ಟ ಅಧಿಕಾರಿಗಳು ಕಳಕಳಿಯಿಂದ ವಿದ್ಯುತ್ ಪೂರೈಕೆ ಮಾಡುತ್ತಾರೋ ಅಂಥ ಕಳಕಳಿ ರೈತನಿಗೆ ವಿದ್ಯುತ್ ಪೂರೈಕೆ ಮಾಡುವುದರಲ್ಲಿ ಇಲ್ಲವೆಂದು ಹೇಳುತ್ತೇನೆ. ಈ ಮಾತನ್ನು ಹೇಳುವುದಕ್ಕೆ ಆಧಾರ ಇದೆ. ಎಸ್.ಸಿ. ಎಸ್.ಟಿ. ಕಾರ್ಪೊರೇಷನ್‌ನಿಂದ 50,000 ಸಾಲದ ಹಣ ಪಡೆದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಸೇರಿದಂತೆ ವಿದ್ಯುತ್ ಪೂರೈಕೆಗಾಗಿ ಅರ್ಜಿ ಕೊಟ್ಟಿದ್ದಾರೆ. ಕಳೆದ 6 ತಿಂಗಳುಗಳಿಂದ ಒಂದು ವರ್ಷದೊಳಗೆ ವಿದ್ಯುತ್ ಪೂರೈಕೆ ಮಾಡಿರತಕ್ಕ ಅಂಕಿಅಂಶಗಳನ್ನು ಸಭೆಯ ಮುಂದೆ ಇಡಿ. ಆಗ ಕರ್ನಾಟಕ ಸರ್ಕಾರದ ನೀತಿ ಮತ್ತು ವಿದ್ಯುತ್ ಮಂಡಲಿಯ ನೀತಿ ಯಾರ ಪರವಾಗಿದೆ ಎಂಬುದು ಗೊತ್ತಾಗುತ್ತದೆ. ಎಲ್ಲಾ ಕಡೆ ನೋಡುತ್ತೇವೆ, ಟ್ರಾನ್ಸ್‌ಮಿಷನ್ ಡಿಸ್ಟ್ರಿಬ್ಯೂಷನ್ ಲಾಸ್ ಜಾಸ್ತಿಯಾಗುತ್ತಿದೆ. ಏತಕ್ಕೆ? ರೈತರಿಗೆ ಮುಫತ್ತಾಗಿ ವಿದ್ಯುತ್ ಕೊಟ್ಟಿದ್ದೀರಿ. ಆದರೆ ಅವರ ಹೆಸರಿನಲ್ಲಿ ಏನು ದೊಡ್ಡ ದೊಡ್ಡ ಕೈಗಾರಿಕೆಗಳವರು ಮತ್ತು ಅಧಿಕಾರಿಗಳು ಶಾಮೀಲಾಗಿ ಈ ವಿದ್ಯುತ್ತನ್ನು ದರೋಡೆ

ಮಾಡುತ್ತಿದ್ದಾರೆ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಪತ್ರಿಕೆಗಳಲ್ಲಿ, ಕೆಇಬಿ. ಟ್ರಾನ್ಸ್‌ಮಿಷನ್ ಲಾಸ್ ಏನಾಗುತ್ತಿದೆ ಅದರಲ್ಲಿ ಬಹಳಷ್ಟು ಪ್ರಮಾಣದ ವಿದ್ಯುತ್ ಕಳ್ಳ ಕದೀಮ ಅಧಿಕಾರಿಗಳು ಏನಿದ್ದಾರೆ ಅವರು ಶಾಮೀಲಾಗಿ ಕೈಗಾರಿಕೆಗಳಿಗೆ ಲೈಸೆನ್ಸ್ ಕೊಟ್ಟಿದ್ದಾರೆಂದು ಕೇಳಿದ್ದೇನೆ. ಇವತ್ತಿನ ದಿವಸ ರೈತರು ಏನಿದ್ದಾರೆ 65–70 ಸಾವಿರ ಐ.ಪಿ. ಸೆಟ್‌ಗಳು ಏನಿವೆ ಅವುಗಳಿಗೆ ಎಷ್ಟು ವಿದ್ಯುತ್ ಪೂರೈಕೆ ಮಾಡಿದ್ದೀರಿ, ಅವರು ಎಷ್ಟು ಉಪಯೋಗಿಸಿದ್ದಾರೆ ಎಂಬುದಕ್ಕೆ ದಾಖಲೆ ಏನಿದೆ? ದಾಖಲೆ ಇಲ್ಲ. ಆ ದಾಖಲೆಯನ್ನು ತಮಗೆ ಇಷ್ಟ ಬಂದ ಹಾಗೆ ಅಧಿಕಾರಿಗಳು ಬದಲಾವಣೆ ಮಾಡುವುದರ ಮೂಲಕ ಕಳ್ಳತನ ಮಾಡಿದ ವಿದ್ಯುತ್ತನ್ನು ಸರಿದೂಗಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಮಾತನ್ನು ಹೇಳುವಾಗ ಯಾವುದೇ ಹೊಣೆಗಾರಿಕೆ ಇಲ್ಲದೆ ಹೇಳುತ್ತಿಲ್ಲ. ಇವತ್ತಿನ ದಿವಸ ತಾವು ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ವಿದ್ಯುತ್ ಪಂಪುಸೆಟ್ಟುಗಳಿವೆ ಮತ್ತು ಅವು ಉಪಯೋಗಿಸಿದ ವಿದ್ಯುತ್ ಪ್ರಮಾಣ ಎಷ್ಟು ಎಂದು ಲೆಕ್ಕ ಹಾಕಿ ಮತ್ತು ಅದೇ ರೀತಿ ಇಡೀ ಜಿಲ್ಲೆಯಲ್ಲಿರತಕ್ಕ ಕೈಗಾರಿಕೆಗಳು ಯಾವ ರೀತಿ ವಿದ್ಯುತ್ ಉಪಯೋಗಿಸಿಕೊಳ್ಳುತ್ತವೆ ಎಂಬುದನ್ನು ಲೆಕ್ಕ ಹಾಕಿ. ಈ ವ್ಯತ್ಯಾಸ ಹೇಗೆ ಬಂತು ಎಂದು ಹೇಳಿ. ಆಗ ಇದು ಯಾರ ಪರವಾಗಿದೆ ಎಂದು ವಿಚಾರ ಮಾಡಿ. ಇದೊಂದು ಮಾರ್ಗ. ಮತ್ತೊಂದು ಮಾರ್ಗ ನೇರವಾಗಿ ವಿದ್ಯುತ್ ಮಂಡಲಿಯ ಅಧಿಕಾರಿಗಳು ಮತ್ತು ದೊಡ್ಡ ದೊಡ್ಡ ಕೈಗಾರಿಕೆಗಳವರು ಶಾಮೀಲಾಗಿ ಕಳ್ಳತನ ಮಾಡುವುದಕ್ಕೆ ಸಹಾಯ ಮಾಡುತ್ತಿದ್ದಾರೆ. ಎಲ್ಲೆಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳು ಇವೆ ಅಲ್ಲಿ ಮೀಟರ್ ರೀಡರ್ಸ್ ಅನ್ನು ಹಾಕಿ ಅಂದರೆ ನೀವು ಹಾಕುವುದಿಲ್ಲ. ಏಕೆಂದರೆ ಅವರು ನಮಗೆ ದುಡ್ಡು ಕೊಡುತ್ತಾರೆ ಎಂದು ಒತ್ತಡ, ಪ್ರಭಾವ ಮತ್ತು ಸೋರಿಕೆಯನ್ನು ತಡೆಯುವುದಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಅಧಿಕಾರಿಗಳಾಗಲಿ, ಸರ್ಕಾರವಾಗಲಿ ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ, ಮುಂದೆಯೂ ತೆಗೆದುಕೊಳ್ಳುವುದಿಲ್ಲ. ಏತಕೆಂದರೆ ಅವರ ಪರವಾಗಿ ಇರತಕ್ಕ ಏಜೆಂಟರು ಇವರು. ಅವರ ಏಜೆಂಟರಾಗಿರುವುದರಿಂದ ಅಂಥವರ ಪ್ರತಿನಿಧಿಗಳಾಗಿರುವುದರಿಂದ ಅವರ ವಿರುದ್ಧ ಇವರು ಕ್ರಮ ತೆಗೆದುಕೊಳ್ಳುವುದಿಲ್ಲ. ಈ ಮಾತನ್ನು ನಾನು ಬಹಳ ನೋವಿನಿಂದ ಹೇಳುತ್ತೇನೆ. ಬಡವರಿಗೆ ಸೌಕರ್ಯ ಮಾಡಿದ್ದೇವೆ, ರೈತರಿಗೆ ಅನುಕೂಲ ಮಾಡಿದ್ದೇವೆ, ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಕೆ ಮಾಡಿದ್ದೇವೆಂದು ನೀವು ಹೇಳುತ್ತೀರಿ. ಆದರೆ ದೊಡ್ಡ ದೊಡ್ಡ ಬಂಡವಾಳಗಾರರು ಅದನ್ನು ಕಳವು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ತಾವು ಇದನ್ನು ಪರಿಶೀಲಿಸಿ, ತಮ್ಮಲ್ಲಿರತಕ್ಕ ವಿಶೇಷ ಪೊಲೀಸ್ ದಳವನ್ನು ಕಳುಹಿಸಿ; ಅವರು ಸರಿಯಾಗಿದ್ದಾರೆಂದು ಹೇಳುತ್ತಿಲ್ಲ. ಆದರೆ ಇವತ್ತಿನ ದಿವಸ ಮಂತ್ರಿಗಳಾಗಿ ಇದ್ದವರು, ಶಾಸಕರು, ಕಾರು ಇಡಲಿಕ್ಕೆ, ಮಾರುತಿ ಕಾರು ಇಡಲಿಕ್ಕೆ ಸಾಧ್ಯವಿಲ್ಲ. ಆದರೆ ನಾನು ತಮ್ಮ ಗಮನಕ್ಕೆ ತರುತ್ತೇನೆ. ತಮ್ಮದೇ ಆದ ಪೋಲೀಸ್ ದಳ ಏನಿದೆ ಅದರ ಮುಖಾಂತರ ವಿಚಾರ ಮಾಡಿ. ಇವತ್ತು ಒಬ್ಬ ಸಾಮಾನ್ಯ ಮೀಟರ್ ರೀಡರ್ ಬೆಂಗಳೂರಿನಲ್ಲಿ 2 ಕಾರುಗಳನ್ನು ಹೊಂದಿರುವ ಪ್ರಕರಣ ಇದೆ. ಇದು ಹೇಗಾಯಿತು? ಇವತ್ತು ಮೀಟರ್ ರೀಡರ್‌ರಿಂದ ಹಿಡಿದು ಎಕ್ಸಿಕ್ಯೂಟಿವ್ ಎಂಜಿನಿಯರ್‌ವರೆಗೆ, ಅಸಿಸ್ಟೆಂಟ್ ಎಂಜಿನಿಯರ್‌ರವರೆಗೆ ಸರಿ ಮಾಡಬೇಕೆಂದು ಇದ್ದರೂ ಕೂಡ ಕೆಳಗಿನ ಹಂತದಿಂದ ಹಿಡಿದು ಮೇಲಿನ ಹಂತದವರೆಗೂ ಎಲ್ಲಾ ಮಟ್ಟದಲ್ಲಿ ಶಾಮೀಲಾಗಿ ವಿದ್ಯುತ್ ಕಳ್ಳತನ ಮಾಡತಕ್ಕ ಪರಂಪರೆಯನ್ನು ರೆಗ್ಯುಲರೈಸ್ ಮಾಡಿದ್ದಾರೆ. ವಿದ್ಯುತ್ ಪೂರೈಕೆಯನ್ನು ರೆಗ್ಯುಲರೈಸ್ ಮಾಡಿ ಎಂದರೆ, ವಿದ್ಯುತ್ ಪೂರೈಕೆ ರೆಗ್ಯುಲರೈಸ್ ಮಾಡುವುದಿಲ್ಲ. ಆದರೆ ವಿದ್ಯುತ್ ಕಳವು ಮಾಡುವುದನ್ನು ರೆಗ್ಯುಲರೈಸ್ ಮಾಡುವ ಪ್ರವೃತ್ತಿ ನಮ್ಮಲ್ಲಿ ಬಂದಿದೆ. ಹಾಗಿದ್ದರೆ ಮೊದಲು ಇರಲಿಲ್ಲವೇ ಎಂದು ಮುಖ್ಯಮಂತ್ರಿಗಳು ಕೇಳಬಹುದು. ಮೊದಲೂ ಇತ್ತು, ಈಗಲೂ ಇದೆ. ಮೊದಲಿಗಿಂತಲೂ ಹೆಚ್ಚುಹೆಚ್ಚು ಪ್ರಮಾಣದಲ್ಲಿ ಇವತ್ತಿನದಿವಸ ಬೆಳೆಯುತ್ತಿದೆ ಎಂದು ಹೇಳುತ್ತೇನೆ. ಏಕೆ ಬೆಳೆಯುತ್ತಿದೆ? ಎಲ್ಲಿಯವರೆಗೆ ಸರ್ಕಾರ ದೃಢವಾದ, ನಿರ್ಧಾರ ಕಠಿಣವಾದ, ಕಾರ್ಯಕ್ರಮವನ್ನು ಅಧಿಕಾರಿಗಳ ಮೇಲೆ, ಅಧಿಕಾರೇತರ ಮೇಲೆ

ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಇದು ನಡೆಯುತ್ತದೆ. ಕೇವಲ ಟ್ರಾನ್ಸ್‌ಫಾರ್ಮರ್ ಬದಲಾವಣೆ ಮುಖಾಂತರ ವಿದ್ಯುತ್ ಸರಿಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ, ವಿದ್ಯುತ್ ಮಂಡಲಿಯಲ್ಲಿ ನಷ್ಟ ಸರಿಪಡಿಸುವುದಕ್ಕಾಗುವುದಿಲ್ಲ. ಇವತ್ತು ದಕ್ಷತೆಯಿಂದ ಕೂಡಿದ ಆಡಳಿತ ಕೊಡುವುದಕ್ಕೆ ಸಾಧ್ಯವಿದೆ. ಇವರಿಗೆ ಬೇಕಾದ ಸೌಲಭ್ಯ ಕೊಡುವುದಕ್ಕೆ ಯಾವ ರೀತಿ ಅನುಸರಿಸುತ್ತಾರೆ. ಪೋಲ್ ಕೊಂಡುಕೊಳ್ಳುತ್ತಾರೆ, ಇನ್‌ಸುಲೇಟರ್ಸ್ ಕೊಂಡುಕೊಳ್ಳುತ್ತಾರೆ, ಟ್ರಾನ್ಸ್‌ಫಾರ್ಮರ್ಸ್ ಕೊಂಡುಕೊಳ್ಳುತ್ತಾರೆ. ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ಇನ್ನೊಂದು ಇದೆ. ಕಂಟ್ರಾಕ್ಟರ್ಸ್ ಮೇಲೆ ಕೆಲಸಗಳನ್ನು ಕೊಡುತ್ತಾರೆ. ಮಾನ್ಯ ಅಧ್ಯಕ್ಷಣಿಯವರೇ, ಅತ್ಯಂತ ನೋವಿನಿಂದ ಹೇಳುತ್ತೇನೆ. ಅನೇಕ ಸಾಮಗ್ರಿಗಳನ್ನು ಏನು ಪೂರೈಕೆ ಮಾಡುತ್ತಾರೆ ಅದು ಪೋಲ್ಸ್ ಇರಬಹುದು, ಕಾಂಟ್ರಾಕ್ಟ್ ವರ್ಕ್ಸ್ ಇರಬಹುದು, ಯಾರು ಹಿಂದೆ ವಿದ್ಯುತ್ ಮಂಡಲಿಯ ನೌಕರರಾಗಿದ್ದರು, ಅಧಿಕಾರಿಗಳಾಗಿದ್ದರು, ಅವರು ಬೇರೆಯವರ ಹೆಸರಿನಲ್ಲಿ, ತಮ್ಮನ, ಮಕ್ಕಳ ಹೆಸರಿನಲ್ಲಿ ಆ ಸಾಮಗ್ರಿಗಳನ್ನು ಪೂರೈಕೆ ಮಾಡತಕ್ಕ ಪರಿಪಾಠ ಮೊದಲಿನಿಂದಲೂ ಬಂದಿದೆ. ನಾನು ಅಂತಹವರ ಹೆಸರುಗಳನ್ನು ಸದಾ ಹೇಳಬಲ್ಲೆ. ಅಲ್ಲಿರತಕ್ಕ ಹಿರಿಯ ಅಧಿಕಾರಿಗಳು ಶಾಮೀಲಾಗಿರುವುದರಿಂದ, ಸರ್ಕಾರ ಕಣ್ಣು ಮುಚ್ಚಿಕೊಂಡಿರುವುದ್ದರಿಂದ ಇದು ನಡೆಯುತ್ತಿದೆ. ಈ ವ್ಯವಸ್ಥೆ ಏನಿದೆ, ಈಗಿರತಕ್ಕವರು ರಿಟೈರ್ ಆಗಿರುವವರಿಗೆ ಸಹಾಯ ಮಾಡುವುದು, ಅವರ ಮಕ್ಕಳಿಗೆ ಸಹಾಯ ಮಾಡುವುದು. ಹೀಗಾಗಿ ಇದು ಒಂದು ಹೊಸ ಪರಂಪರೆ, ಸಂಪ್ರದಾಯ ನಡೆದಿದೆ. ಅದನ್ನು ಮಟ್ಟ ಹಾಕುವ ಪ್ರಯತ್ನವನ್ನು ಸರ್ಕಾರ ಮಾಡಬೇಕು. ಎಲ್ಲಿಯವರೆಗೆ ಸರ್ಕಾರ ಇದರ ಬಗ್ಗೆ ದೃಢವಾಗಿ ಗಮನಕ್ಕೆ ತೆಗೆದುಕೊಳ್ಳುವುದಿಲ್ಲವೋ, ಯಾವುದೇ ಸಾಮಗ್ರಿ ತೆಗೆದುಕೊಳ್ಳುವುದಕ್ಕೆ ಕಾನೂನು ಪ್ರಕಾರ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲವೋ ಅಥವಾ ಸ್ವೇಚ್ಛೆಯಾಗಿ ಅವರಿಗೆ ಸಹಾಯ ಮಾಡುವ ಒಂದು ಪ್ರವೃತ್ತಿಗೆ ಬೆಂಬಲ ಕೊಡುವ ರೀತಿಯಲ್ಲಿ ನಿಷ್ಕ್ರಿಯವಾಗಿರುತ್ತದೆಯೋ ಅಲ್ಲಿಯವರೆಗೆ ಈ ವಿದ್ಯುತ್ ಮಂಡಳಿ ಹೀಗೆಯೇ ನಡೆದುಕೊಂಡು ಬರುತ್ತದೆ. ಕೊನೆಯದಾಗಿ ನಾನು ಹೇಳುತ್ತೇನೆ. ಈ ವಿದ್ಯುತ್ ಮಂಡಲಿಯ ಕಾಟದಿಂದ ನಗರದಲ್ಲಿರುವ ಜನರಿಗೆ ನೀರು ಕೊಡುವುದಕ್ಕೆ ಸಾಧ್ಯವಿಲ್ಲ. ಗ್ರಾಮಾಂತರ ಪ್ರದೇಶದಲ್ಲಿನ ಮಿನಿ ವಾಟರ್ ಸ್ಕೀಮ್ ಇರಬಹುದು, ಬೇರೆ ಬೇರೆ ಯೋಜನೆಗಳಿಗೆ ವಿದ್ಯುತ್‌ನ್ನು ಕೇಳಿದರೆ ಟ್ರಾನ್ಸ್‌ಫಾರ್ಮರ್ಸ್ ಇಲ್ಲ, ವೈರ್ ಇಲ್ಲ, ಕಂಬ ಇಲ್ಲ ಎಂದು ಹೇಳುವ ನೀಚ ಮಟ್ಟಕ್ಕೆ ಇವತ್ತು ವಿದ್ಯುತ್ ಮಂಡಲಿ ಬಂದಿದೆ. ಇದನ್ನು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ, ತಾಲ್ಲೂಕಿನಲ್ಲಿ, ನಮ್ಮ ಕ್ಷೇತ್ರದಲ್ಲಿ ಅನೇಕ ತಿಂಗಳಿನಿಂದ ವಿದ್ಯುತ್ ಪೂರೈಕೆ ಮಾಡದಿರುವ ಪ್ರಕರಣಗಳನ್ನೂ ಸಹ ಅನೇಕ ಸಂದರ್ಭಗಳಲ್ಲಿ ಸಂಬಂಧಪಟ್ಟವರ ಗಮನಕ್ಕೆ ತಂದಿದ್ದೇನೆ. ನಾನು ಮಾತನಾಡುವುದು ನಿಮಗೆ ಇಷ್ಟ ಇಲ್ಲ ಎಂದರೆ ನಮ್ಮದು ತಕರಾರು ಇಲ್ಲ.. ಆಗಲೇ ಮಂಜುನಾಥ್ ಅವರು ಹೇಳುತ್ತಿದ್ದರು. ವಿದ್ಯುತ್ ಚೆನ್ನಾಗಿ ಬರುತ್ತಾ ಇದೆ ಎಂದರು. ಅದೇ ಭಾವನೆ ತಮಗೆ ಇದ್ದರೆ ನನ್ನ ತಕರಾರು ಇಲ್ಲ.

ಛೇರ್ಮನ್:- ಸಮಯದ ಅಭಾವ ಇದೆ.

ಶ್ರೀ ಹೆಚ್. ಏಕಾಂತಯ್ಯ:- ಸಮಯದ ಅಭಾವ ಇದಕ್ಕೆ ಇಲ್ಲವೇ ಇಲ್ಲ ಎಂದು ಹೇಳುತ್ತೇನೆ. ಏಕೆ ಹೇಳುತ್ತಿದ್ದೇನೆಂದರೆ, ಬೆಳಿಗ್ಗೆ 4 ಗಂಟೆಗಳ ಕಾಲ ಆಶ್ರಯ ಯೋಜನೆ ವಿಚಾರದಲ್ಲಿ ಚರ್ಚೆ ಮಾಡಿದೆವು. ಅದು ಎಷ್ಟು ಮುಖ್ಯವೋ ಅದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾದ ವಿಚಾರ ಇದು.

ಛೇರ್ಮನ್:- ಇಲ್ಲ ಎಂದು ಹೇಳಿಲ್ಲ. ಅಜೆಂಡಾದಲ್ಲಿ ಇನ್ನೂ ವಿಷಯಗಳು ಇವೆ.

ಶ್ರೀ ಹೆಚ್. ಏಕಾಂತಯ್ಯ:- ಸನ್ಮಾನ್ಯ ಅಧ್ಯಕ್ಷಣಿಯವರೇ ನಾಳೆ ತೆಗೆದುಕೊಳ್ಳೋಣ, ರಾತ್ರಿ 12 ಗಂಟೆಯವರೆಗೂ ಕುಳಿತುಕೊಳ್ಳೋಣ, ನಮ್ಮದು ತಕರಾರು ಇಲ್ಲ, ತಾವು ಹೆದರಬೇಡಿ, ಪೂರೈಸುತ್ತೇವೆ. ನಾನು ಯಾವ ಅರ್ಥಕ್ಕೆ ಹೇಳುತ್ತಿದ್ದೇನೆ ಎಂದರೆ, ಕುಡಿಯುವ ನೀರಿಗೆ ಬರ

ಬಂದಿದೆ. ಇದಕ್ಕೆ ಬೇಕಾದ ಸಾಮಗ್ರಿಗಳನ್ನು ಆದ್ಯತೆ ಮೇಲೆ ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಇವತ್ತಿನದಿವಸ ಈ ರೈತರ ಸಹನೆ ಏನಿದೆ, ಸಂಯಮ ಏನಿದೆ ಅದು ಕಟ್ಟೆ ಹೊಡೆದಿದೆ. ಈಗ ದೇವನಹಳ್ಳಿಯಲ್ಲಿ ಒಂದು ಪ್ರಕರಣ ಆಯಿತು. ನಾನು ಆಗಲೇ ಹೇಳಿದೆ. ಚಿತ್ರದುರ್ಗ ನಗರದಲ್ಲಿ ಕುಡಿಯುವ ನೀರಿಗೆ ತೊಂದರೆ ಆಗಿ ಅಲ್ಲಿಯ ನಾಗರೀಕರು ಪೊರಕೆ ಮತ್ತು ಇತರೆ ವಸ್ತುಗಳನ್ನು ತೆಗೆದುಕೊಂಡು ಹೋದರು. ಅಲ್ಲಿ ಅಧಿಕಾರಿಗಳು ಕೊಡುವವರೆಗೂ ಬಿಡಲಿಲ್ಲ. ಕೊನೆಗೆ ಕ್ಷಮಾಪಣೆ ಕೇಳಿ ಕೊಡುತ್ತೇವೆಂದು ಹೇಳಿ ಒಂದು ಸಮಯದಲ್ಲಿ ಕೊಟ್ಟರು. ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಇದೇ ಪರಿಸ್ಥಿತಿ ಮುಂದುವರಿದರೆ ದೇವನಹಳ್ಳಿಯಲ್ಲಿ ಏನಾಯಿತು ಅದು ರಾಜ್ಯದಲ್ಲೆಲ್ಲಾ ಆಗುತ್ತದೆ. ಇದನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ ಅಧಿಕಾರಿಗಳು ಎಚ್ಚರಗೊಳ್ಳಬೇಕು. ಇನ್ನಾದರೂ ಅವರು ಸೂಕ್ತವಾದ, ತೀವ್ರವಾದ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಇದರ ವಿರುದ್ಧ ಎಲ್ಲಾ ಶಾಸಕರೂ, ಎಲ್ಲಾ ನಾಯಕರೂ ಪಕ್ಷ ಬೇಧ ಬಿಟ್ಟು ಹೋರಾಡುವ ಒಂದು ಪ್ರವೃತ್ತಿ ಪ್ರಾರಂಭವಾಗಬಹುದು. ಅದಕ್ಕೆ ಅವಕಾಶ ಕೊಡದಹಾಗೆ ಸರ್ಕಾರ ಕೆಲಸ ಮಾಡಬೇಕೆಂಬುದನ್ನು ಹೇಳುತ್ತೇನೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಅಲ್ಲಿ ಏನು ಅವ್ಯವಹಾರ ನಡೆಯುತ್ತಿದೆ, ಅಲ್ಲಿನ ಕಾರ್ಯನಿರ್ವಹಣೆ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಒಂದು ಉನ್ನತ ಮಟ್ಟದ ಸದನ ಸಮಿತಿ ನೇಮಕ ಮಾಡುವುದರ ಮೂಲಕ ಇದನ್ನೆಲ್ಲಾ ಬಯಲಿಗೆಳೆಯಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇದಕ್ಕಿಂತ ಹೆಚ್ಚಾಗಿ ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಬೆಂಗಳೂರು ಇವು ಬಯಲುಸೀಮೆ ಜಿಲ್ಲೆಗಳಿವೆ. ರೈತರ ಸಮಸ್ಯೆಗಳು ಒಂದೇ ಆಗಿವೆ. ಈ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಅವಶ್ಯಕವಿದ್ದರೆ ತಾವು ಅಥವಾ ಮುಖ್ಯಮಂತ್ರಿಗಳು ಆಗಿರಬಹುದು ಕೆಇಬಿಯ ಅಧಿಕಾರಿಗಳ ಸಭೆಯನ್ನು ಕರೆಯಬೇಕು. ಹೆಚ್ಚಿನ ವಿವರಗಳನ್ನು ಕೊಡುತ್ತೇವೆ ಅವರಿಗೆ ಇನ್ನೂ ನಿರ್ದಿಷ್ಟವಾದ ಪ್ರಕರಣಗಳನ್ನು ತಂದು ಕೊಡುತ್ತೇವೆ. ಆಗಲೂ ಕೆಲಸ ಮಾಡದಿದ್ದರೆ ಖಂಡಿತವಾಗಿಯೂ ಸಹ ನಾವು ಬೀದಿಗಿಳಿದು ಹೋರಾಟ ಮಾಡುವುದನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲ. ಆಗುವಂತಹ ಎಲ್ಲಾ ಅನಾಹುತಗಳಿಗೆ ಮತ್ತು ಸಂಕಷ್ಟಗಳಿಗೆ ಮಾನಹಾನಿ ಪ್ರಾಣಹಾನಿಯಾದರೆ ಸರ್ಕಾರ ಮತ್ತು ಕೆಇಬಿಯವರ ದುರಾಡಳಿತವೇ ಇದಕ್ಕೆಲ್ಲಾ ಕಾರಣ ಬೇರೆ ಯಾರೂ ಅಲ್ಲವೆನ್ನುವ ಮಾತನ್ನು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್:- ಮಾನ್ಯ ಸದಸ್ಯರು ಐದು ನಿಮಿಷಗಳಲ್ಲಿ ಮುಗಿಸಿ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷಿಣಿಯವರೆ, ಕಳೆದ ನಾಲ್ಕೈದು ದಿವಸಗಳಿಂದ ರೈತರ ಸಮಸ್ಯೆಯ ಬಗ್ಗೆ ಪ್ರಸ್ತಾಪವಾಗುತ್ತಿದ್ದು ನಾನೂ ಸಹ ಆ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಕೊನೆಯ ಘಳಿಗೆಯಲ್ಲಾದರೂ ಅವಕಾಶ ಕೊಟ್ಟಿದ್ದಕ್ಕಾಗಿ, ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಭಾಷಣ ಪ್ರಾರಂಭಿಸುತ್ತಿದ್ದೇನೆ. ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಮತ್ತು ಉಳಿದ ಶಾಸಕ ಮಿತ್ರರು ವಿವರವಾಗಿ ಮಾತನಾಡಿದ್ದಾರೆ. ಕೆಇಬಿಯಿಂದ ಆಗಿರತಕ್ಕ ಅವ್ಯವಸ್ಥೆಯಿಂದ ರೈತರಲ್ಲಿ ಮತ್ತು ಜನಸಾಮಾನ್ಯರಲ್ಲಿ ಆಗಿರತಕ್ಕ ಅತೃಪ್ತಿಯನ್ನು ಹೋಗಲಾಡಿಸುವುದಕ್ಕೆ ಮತ್ತು ಅವ್ಯವಸ್ಥೆಯನ್ನು ಸರಿಪಡಿಸದಿದ್ದರೆ ಆಗಬಹುದಾದ ಒಂದು ಅನಾಹುತದ ಬಗ್ಗೆ ಮಾತ್ರ ಸಂಕ್ಷಿಪ್ತವಾಗಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇವತ್ತು ವಿದ್ಯುತ್ ಇಲ್ಲದೆ ಕುಡಿಯುವ ನೀರು ಸಿಗುವುದಕ್ಕೆ ಸಾಧ್ಯವಿಲ್ಲ. ಹಳ್ಳಿಯಲ್ಲಿ ಫ್ಲೋರ್ ಮಿಲ್ ಬಂದ್ ಆದರೆ ಹೊಟ್ಟೆಗೆ ರೊಟ್ಟಿ ಇಲ್ಲ. ವಿದ್ಯುತ್‌ನ್ನು ಕುಡಿಯುವ ನೀರಿನ ಸಲುವಾಗಿ ಅವಲಂಬಿಸಿದ್ದಾರೆ. ಹೊಟ್ಟೆಗೆ ರೊಟ್ಟಿಯ ಸಲುವಾಗಿ ವಿದ್ಯುತ್ ಇಲ್ಲದಿದ್ದರೆ

ನಡೆಯುವುದಿಲ್ಲ. ನೀರಾವರಿ ಸಲುವಾಗಿ ವಿದ್ಯುತ್ ಬೇಕಾಗಿದೆ. ಹೀಗೆ ಪ್ರತಿಯೊಂದಕ್ಕೂ ಮಕ್ಕಳು ಓದಲಿಕ್ಕೆ ವಿದ್ಯುತ್ ಬೇಕು. ಒಂದು ಗ್ರಾಮದಲ್ಲಿ ಒಂದು ಸಮಾರಂಭ ಇತ್ತು. ಅಲ್ಲಿ ವಿದ್ಯುತ್ ಇತ್ತು. ಅಲ್ಲೊಂದು ಅರ್ಜಿಯನ್ನು ನನಗೆ ಓದಿರಿಯೆಂದು ಜನರು ಕೊಟ್ಟರು. ಅದೇನು ಓದಿ ವಿಷಯ ಏನೆಂದು ಹೇಳಿಯೆಂದೆ. ಅವರು ಓದಿ ಹೇಳಿಯಾದ ಮೇಲೆ ನೀವು ಓದಿರಿ ಅಂದರು. ನೀವು ಓದಿದ್ದೀರಿ ಮತ್ತೊಂದು ಸಾರಿ ನಾನು ಏತಕ್ಕೆ ಓದಬೇಕೆಂದು ಹೇಳಿ ಅದನ್ನು ಓದಲಿಕ್ಕೆ ಹೋದರೆ ಅದನ್ನು ಓದಲಿಕ್ಕೆ ಬಾರದಷ್ಟು ವೊಲ್ಟೇಜ್ ಇತ್ತು. ಓದಲಿಕ್ಕೆ ಆಗುವುದಿಲ್ಲವೆಂದು ಆಗ ಹೇಳಿದರು. ದಿನವಹಿ ಮಕ್ಕಳು ಓದಲಿಕ್ಕೆ ಸಹ ಆಗದ ರೀತಿಯಲ್ಲಿ ವಿದ್ಯುತ್ ಸರಬರಾಜು ಆಗುತ್ತಿಲ್ಲವೆಂದು ಹೇಳಿದರು. ದಿನ ಪಂಪ್‌ಸೆಟ್ಟುಗಳು ಓಡುತ್ತಿಲ್ಲ. ಫ್ಲೋರ್ ಮಿಲ್‌ಗಳು ಓಡುತ್ತಿಲ್ಲ. ಕುಡಿಯುವ ನೀರಿಲ್ಲ, ಹೊಟ್ಟೆಗೆ ರೊಟ್ಟಿ ಇಲ್ಲ ಇಂತಹ ವ್ಯವಸ್ಥೆಯಲ್ಲಿ ಏನು ಮಾಡುತ್ತೀರಿ? ಇದು ಇವತ್ತಿನದು ನಿನ್ನೆಯದಲ್ಲ. ಬಹಳ ದಿವಸದಿಂದ ಈ ರೀತಿ ಬಂದಿದೆ. ಅದಕ್ಕೆ ಅನೇಕ ಸಲಹೆಗಳನ್ನು ಸರ್ಕಾರಕ್ಕೆ ನಾನು ಕೊಟ್ಟಿದ್ದೇನೆ. ನಮ್ಮ ತಾಲ್ಲೂಕಿನ ಹಂಸಭಾವಿ ಮತ್ತು ಚಿಕ್ಕೇರಿ ಭಾಗದಲ್ಲಿ ರೈತರ ಪಂಪ್‌ಸೆಟ್‌ಗಳು ಓಡುತ್ತಿಲ್ಲ. ಅಲ್ಲಿ ಜನಜೀವನ ಅಸ್ತವ್ಯಸ್ಥವಾಗಿದೆ. ಈಗಾಗಲೇ ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಆ ಭಾಗದ ಜನ ಕೆಇಬಿಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಫೀಸಿಗೆ ಬಂದು ರೈತರ ಹಾಗೂ ಅಧಿಕಾರಿಗಳ ನಡುವೆ ಘರ್ಷಣೆ ನಡೆದಿದೆ. ವ್ಯವಸ್ಥೆ ಸರಿ ಇಲ್ಲದಿರುವುದಕ್ಕೆ ಕೆಇಬಿಯಿಂದ ಟ್ರಾನ್ಸ್‌ಫಾರ್ಮರ್‌ಗಳು ದೊರೆಯದೇ ಇರತಕ್ಕದ್ದು ಅಲ್ಲಿ ಲೈನುಗಳ ವ್ಯವಸ್ಥೆಯನ್ನು ಸರಿಪಡಿಸದೇ ಇರುವುದು ಅಲ್ಲಿನ ವಿತರಣೆ ವ್ಯವಸ್ಥೆ ಸರಿಯಿಲ್ಲದಿರುವುದಕ್ಕೆ ದೊಡ್ಡ ದೊಡ್ಡ 11 ಕೆ.ವಿ. ಸಬ್ ಸ್ಟೇಷನ್‌ಗಳನ್ನು ಅಳವಡಿಸದೇ ಇರುವುದು ಇದು ಒಂದು ಕಾರಣ. ಆದರೆ ಈವೊಂದು ಘರ್ಷಣೆಯಿಂದ ಈಗಾಗಲೇ ಅನೇಕ ಕ್ರಿಮಿನಲ್ ಮೊಕದ್ದಮೆಗಳನ್ನು ಇವತ್ತು ರೈತರ ಮೇಲೆ ಅಧಿಕಾರಿಗಳು ಹಾಕಿದ್ದಾರೆ. ಅಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲದಿರುವ ಪರಿಸ್ಥಿತಿ ಇದೆ. ಅಧಿಕಾರಿಗಳು ಹೇಳಿದರು ಹಂಸಭಾವಿ ಮತ್ತು ಚಿಕ್ಕೇರಿಗೆ ಸಂಬಂಧಪಟ್ಟ ಹಾಗೆ 11 ಕೆ.ವಿ. ಸಬ್‌ಸ್ಟೇಷನ್ ಮಂಜೂರು ಮಾಡುತ್ತೇವೆಂದು ಹೇಳಿದ್ದರು. ಅದನ್ನು ಮಂಜೂರು ಮಾಡಲಾಗಿದೆಯೆ? ಅದು ಆಗಿದ್ದರೆ ಅತಿ ತೀವ್ರವಾಗಿ ಅದನ್ನು ಪ್ರಾರಂಭಿಸಬೇಕು. ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡಬೇಕೆಂದು ಹೇಳುವುದರ ಜೊತೆಗೆ ರೈತರು ಇವತ್ತು ಅತಿವೃಷ್ಟಿಯಿಂದ ಮನೆಗಳನ್ನು ಕಳೆದುಕೊಂಡಿದ್ದಾರೆ. ಬೆಳೆಗಳು ನಾಶವಾಗಿವೆ, ಕೊಯ್ದ ಭತ್ತದ ಪೀಕು ತೇಲಿಕೊಂಡು ಹೋಗಿದೆ. 55 ನೀರಾವರಿ ಕೆರೆಗಳು ಒಡೆದುಹೋಗಿವೆ. ತುಂಬಲಾರದ ಹಾನಿಯಾಗಿದೆ. ಸರ್ಕಾರದ ಯಾವುದೇ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಹೇಳುತ್ತಿದ್ದಾರೆ ಏನೋ ಕೆಲವು ಕಿಟ್ಸ್‌ಗಳನ್ನು ಕೊಡುತ್ತಿದ್ದಾರೆ. ಬೀಜ ಗೊಬ್ಬರ ಕೊಡುತ್ತಿದ್ದಾರೆ ಅದು ಯಾವುದಕ್ಕೂ ಸಾಲುವುದಿಲ್ಲ.

7.20 ಪಿ.ಎಂ.

ರೈತರು ಅತಿವೃಷ್ಟಿಯಿಂದ ತೊಂದರೆಗೆ ಒಳಗಾಗಿದ್ದಾರೆ. ಏನಾದರೂ ಅಲ್ಪಸ್ವಲ್ಪ ನೀರಾವರಿ ಮಾಡೋಣ ಎಂದರೆ ವಿದ್ಯುತ್ ಸರಬರಾಜು ಸರಿಯಾಗಿಲ್ಲ. ರೈತ 24 ತಾಸೂ ತನ್ನ ಜಮೀನಿನಲ್ಲಿ ಕರೆಂಟಿಗಾಗಿ ಕಾಯುತ್ತಿದ್ದಾನೆ. ಮೂರು ನಿಮಿಷದಲ್ಲಿ ಮೂರು ಸಲ ವಿದ್ಯುತ್ ಹೋಗುತ್ತದೆ. ರೈತ ಕಂಗಾಲಾಗಿದ್ದು ಇದು ಅವನ ಜೀವನ್ಮರಣದ ಪ್ರಶ್ನೆಯಾಗಿದೆ. ಇಡೀ ರಾಜ್ಯದಲ್ಲಿ ಈ ಸಮಸ್ಯೆ ಇದೆ. ನಮ್ಮನಮ್ಮ ಕ್ಷೇತ್ರದ ವಿಷಯ ನಾವು ಹೇಳಿದರೂ ಸಹಿತ, ಇದು ಸಮಗ್ರವಾಗಿ ರಾಜ್ಯದಲ್ಲಿರತಕ್ಕಂಥ ಸಮಸ್ಯೆಯಾಗಿದೆ, ಮುಖ್ಯಮಂತ್ರಿಗಳು ಇದರ ಕಡೆ ತೀವ್ರ ಗಮನಹರಿಸಿ ಈ ವಿದ್ಯುತ್ ಜಾಲ ಏನಿದೆ, ಈ ವಿತರಣಾವ್ಯವಸ್ಥೆ ಏನಿದೆ, ಇದನ್ನು ಸರಿಪಡಿಸದೇ ಹೋದರೆ ಒಳ್ಳೆಯದಾಗುವುದಿಲ್ಲ. ಶರಾವತಿಯಲ್ಲಿ ಹತ್ತು ಜನರೇಟರುಗಳು ಇವೆ, ಮಳೆ ಸಾಕಷ್ಟು ಆಗಿದೆ, ನೀರಿದೆ. ಆದರೂ ಈ ಜನರೇಟರುಗಳು ಓಡುತ್ತಿಲ್ಲ. ಹತ್ತರಲ್ಲಿ ಕೇವಲ ಒಂದೆರಡು ಮಾತ್ರ ಓಡುತ್ತಿವೆ. ಒಂದು ಫ್ರಾನ್ಸಿನಿಂದ, ಒಂದು ಜರ್ಮನ್‌ನಿಂದ, ಇನ್ನೊಂದು ಇಟಲಿಯಿಂದ ಬಂದಿದೆ. ರಿಪೇರಿ

ಮಾಡುವುದಕ್ಕೆ ಅಲ್ಲಿಂದ ಬರಬೇಕು ಎಂದು ಹೇಳುತ್ತಾರೆ. ಅಲ್ಲಿ ಇರತಕ್ಕಂಥ ಜನರೇಟರುಗಳು ಸರಿಯಾಗಿ ಓಡಿದರೆ ವಿದ್ಯುತ್ ಸಾಕಷ್ಟು ಪ್ರಮಾಣದಲ್ಲಿ ಉತ್ಪಾದನೆಯಾಗುತ್ತದೆ. ಇರತಕ್ಕಂಥ ಟಿ.ಸಿ.ಗಳು ಕೂಡ ಇವತ್ತು ಲೋಡ್ ಹೆಚ್ಚಾಗಿ ಸುಟ್ಟು ಹೋಗುತ್ತಿವೆ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ, ನನಗೆ ಗೊತ್ತಿರುವ ಹಾಗೆ 1968ನೇ ಇಸವಿಯಲ್ಲಿ ಹಾಕಿದಂಥ ಟಿ.ಸಿ. 25 ವರ್ಷಗಳಾದರೂ ಏನೂ ಆಗಿಲ್ಲ. ಇವತ್ತು ಏನು ಕೆ.ಇ.ಬಿ.ಯವರು ಸಪ್ಲೈ ಮಾಡುತ್ತಿದ್ದಾರೆ, ಅವು ಮೂರೇ ತಾಸಿನಲ್ಲಿ ಸುಟ್ಟುಹೋಗುವುದಕ್ಕೆ ಕಾರಣ ಏನು ಎಂಬುದನ್ನು ಕಂಡುಹಿಡಿಯಬೇಕು. ಇದರ ಬಗ್ಗೆ ಅಂಕಿಅಂಶಗಳನ್ನು ತರಿಸಿ ನೋಡಿ. ಹಿಂದೆ ಕೊಟ್ಟಂಥ ಟಿ.ಸಿ.ಗಳು ಕಳೆದ 25 ವರ್ಷಗಳಲ್ಲಿ ಎಷ್ಟು ಸುಟ್ಟುಹೋಗಿವೆ, ಕೆಟ್ಟು ಹೋಗಿವೆ ಎಂಬುದನ್ನು ಗಮನಿಸಿ. ನನಗೆ ಆಶ್ಚರ್ಯವಾಗುತ್ತದೆ. ಜನರು ಹೇಳುತ್ತಿದ್ದಾರೆ, ಟಿ.ಸಿ. ಸುಟ್ಟುಹೋಗಿದೆ ಎಂದು. ಇವು ಕಳಪೆ ಟಿ.ಸಿ.ಗಳಾಗಿದ್ದು ಎಲ್ಲಿ ಉತ್ಪಾದನೆ ಮಾಡುತ್ತಾರೆ? ಈ ಟಿ.ಸಿ.ಗಳನ್ನು ಕೆ.ಇ.ಬಿ.ಯವರು ಖರೀದಿ ಮಾಡಿ ಹಾಕಿರಬೇಕು. ಅದರ ಜೊತೆಗೆ ಅವು ಕಳಪೆ ಎನ್ನುವುದು ಈಗಾಗಲೇ ಗೊತ್ತಾಗಿದೆ. ಮತ್ತೆ ಟಿ.ಸಿ.ಯಲ್ಲಿರತಕ್ಕಂಥ ಆಯಿಲ್ ಏನಿದೆ, ಅದನ್ನು ಇಲಾಖೆಯವರೇ ತೆಗೆದು ಹೆಚ್ಚಿನ ಹಣಕ್ಕೆ ಮಾರಾಟ ಮಾಡುತ್ತಿದ್ದಾರೆ. ತಾವು ಕೊಟ್ಟಂಥ ಆಯಿಲ್ ಏನಿದೆ, ಅದನ್ನು ಟಿ.ಸಿ.ಗಳಿಗೆ ಅಳವಡಿಸುವುದಿಲ್ಲ. ಈ ರೀತಿಯಾಗಿ ಇಲಾಖೆಯ ಆಡಳಿತ ಹದಗೆಟ್ಟಿರುವುದರಿಂದ, ಟಿ.ಸಿ.ಗಳು ಸರಿಯಾಗಿ ನಡೆಯದೇ ಇರುವುದರಿಂದ ಈ ವ್ಯವಸ್ಥೆ ಹದಗೆಟ್ಟಿದೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ತೀವ್ರ ಗಮನಹರಿಸಿ, ತಾವೇನು ಮಾನಿಟರಿಂಗ್ ಎಂದು ಹೇಳಿದ್ದೀರಿ. ಪ್ರತಿಯೊಂದು ತಾಲ್ಲೂಕಿನಲ್ಲಿ, ಪ್ರತಿಯೊಂದು ಸ್ಟೇಷನ್‌ನಲ್ಲಿ ಇರತಕ್ಕಂಥ ಟಿ.ಸಿ.ಗಳ ಬಗ್ಗೆ, ಅಲ್ಲಿ ಇರಬಹುದಾದಂಥ ವಿದ್ಯುತ್‌ಜಾಲದ ಬಗ್ಗೆ ಸಮಗ್ರವಾದಂಥ ವರದಿಯನ್ನು ತರಸಿಕೊಂಡು ಆದಷ್ಟು ಬೇಗ ವಿದ್ಯುತ್ ವಿತರಣೆ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡದೇ ಹೋದರೆ ಈಗಾಗಲೇ ಹಿರಿಯರಾದಂಥ ಶ್ರೀ ಏಕಾಂತಯ್ಯನವರು ಹೇಳಿದ ರೀತಿಯಲ್ಲಿ ನಾವೀಗಾಗಲೇ ರೈತರಿಗೆ ಹೇಳಿದ್ದೇವೆ; ಸ್ವಲ್ಪ ಸಂಯಮದಿಂದ ಇರಿ, ಸರಿಪಡಿಸುತ್ತಾರೆ, ಟಿ.ಸಿ. ಬರುತ್ತಿವೆ, ಲೈನ್ ಸರಿಯಾಗುತ್ತದೆ, ಸಬ್‌ಸ್ಟೇಷನ್ ಮಾಡುತ್ತಿದ್ದಾರೆ ಎಂದು. ಇನ್ನು ಮುಂದೆ ನಮಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಜನ ಇವತ್ತು ನಮ್ಮ ಮೇಲೆಯೇ ತಿರುಗಿ ಬೀಳುತ್ತಾರೆ. ಅವರು ಶಾಸಕರನ್ನೂ ಕೇಳುವುದಿಲ್ಲ, ಸರ್ಕಾರವನ್ನು ಕೇಳುವುದಿಲ್ಲ. ಏಕೆಂದರೆ ಇದು ಅವರ ಜೀವನ್ಮರಣದ ಪ್ರಶ್ನೆ; ಅವರ ದುಡಿಮೆಯ ಪ್ರಶ್ನೆ. ಸಾಲ ಮಾಡಿದ ರೈತ ಬಡ್ಡಿ ಕಟ್ಟುವುದಕ್ಕೆ ಕೂಡ ಸಾಧ್ಯ ಇಲ್ಲದೇ ಇರತಕ್ಕಂಥ ಪರಿಸ್ಥಿತಿಗೆ ತಲುಪಿದ್ದಾನೆ. ಸರ್ಕಾರ ಅವರ ಯಾವುದೇ ಸಹಾಯಕ್ಕೆ ಬರಲಿಲ್ಲ. ಮಹಾಪೂರದ ಪರಿಹಾರ ಕೊಡಲಿಲ್ಲ. ಅವರ ಸಾಲ ಮನ್ನಾ ಮಾಡಲಿಲ್ಲ. ಅವರ ಬಡ್ಡಿ ಮನ್ನಾ ಮಾಡಿ ಎಂದರೂ ಮಾಡಲಿಲ್ಲ. ರೈತರ ತಾಳ್ಮೆ ಮೀರಿಹೋಗಿದೆ. ಮುಖ್ಯಮಂತ್ರಿಗಳೇ, ಈ ಸದನದ ಮೂಲಕ ತಮ್ಮ ಗಮನ ಸೆಳೆಯಬಯಸುತ್ತೇನೆ, ಮೇಟಿಯ ದಂಡು ಎದ್ದರೆ ಯಾವ ಸರ್ಕಾರವೂ ತಡೆಯಲಾರದು. ಈಗ ಅವರ ತಾಳ್ಮೆಯ ಕಟ್ಟೆ ಒಡೆದಿದೆ. ಮೇಟಿಯ ದಂಡು ಎದ್ದರೆ ಯಾವ ಸರ್ಕಾರವೂ ಅದನ್ನು ಎದುರಿಸುವುದಕ್ಕೆ ಸಾಧ್ಯವಿಲ್ಲ. ಯಾವ ಶಾಂತಿಪಾಲನೆ ಮಾಡಬೇಕಾದಂಥ ಸರ್ಕಾರ ಇವತ್ತು ವಿದ್ಯುತ್ತಿನ ಅಸಮರ್ಪಕ ವಿತರಣೆ ವ್ಯವಸ್ಥೆಯಿಂದಾಗಿ ಈ ಸರ್ಕಾರವೇ ಅಶಾಂತಿಯನ್ನು ಉಂಟುಮಾಡಲಿಕ್ಕೆ ಕಾರಣವಾದೀತು. ಅದಕ್ಕಾಗಿ ದಯವಿಟ್ಟು ಸರ್ಕಾರ ಶಾಂತಿ ಪಾಲನೆ ಮಾಡತಕ್ಕಂಥ ಕೆಲಸ ಮಾಡಬೇಕೇ ವಿನಹ ಅಶಾಂತಿಗೆ ನಾಂದಿಯನ್ನು ಹಾಕದೆ ರೈತರ ಸಮಸ್ಯೆಯನ್ನು, ಸಮಗ್ರ ರಾಜ್ಯದ ವಿದ್ಯುತ್ ಅವ್ಯವಸ್ಥೆಯನ್ನು ಸರಿಪಡಿಸತಕ್ಕಂಥ ಕಾರ್ಯಕ್ರಮವನ್ನು ಯುದ್ಧೋಪಾದಿಯಲ್ಲಿ ಹಾಕಿಕೊಂಡು ಸರಿಪಡಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್:- ಸದನ ಈಗ ಮುಂದೂಡಲ್ಪಟ್ಟು ಮತ್ತೆ 7.40ಕ್ಕೆ ಸೇರುತ್ತದೆ.

7.40 ಪಿಎಂ

(ಉಪಾಧ್ಯಕ್ಷಿಣಿಯವರು ಅಧ್ಯಕ್ಷ ಸ್ಥಾನದಲ್ಲಿ ಉಪಸ್ಥಿತರಾದರು)

ಶ್ರೀ ಸಿ. ಬೈರೇಗೌಡ:- ನಾನು ಹೆಚ್ಚು ಹೊತ್ತು ಮಾತನಾಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದ್ದರೆ ಚೆನ್ನಾಗಿರುತ್ತಿತ್ತು.

ಉಪಾಧ್ಯಕ್ಷಿಣಿಯವರು:- ಬರುತ್ತಾರೆ, ನೀವು ಪ್ರಾರಂಭ ಮಾಡಿ.

† ಶ್ರೀ ಸಿ. ಬೈರೇಗೌಡ:- ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ದಿವಸ ಬೆಳಿಗ್ಗೆ ಕೆಲವು ಸದಸ್ಯರು ದೇವನಹಳ್ಳಿಯಲ್ಲಿ ವಿದ್ಯುತ್ ಸರಬರಾಜಿನ ವ್ಯತ್ಯಾಸದ ಬಗ್ಗೆ ರೈತರು ತೋರಿಸಿದಂಥ ಆಕ್ರೋಶವನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ರೈತರ ತಾಳ್ಮೆಯ ಕಟ್ಟೆ ಒಡೆದಿದೆ. ದೇವನಹಳ್ಳಿ ಮಾತ್ರವಲ್ಲ, ಇಡೀ ರಾಜ್ಯದ್ಯಂಥ ಇವತ್ತಿನ ದಿವಸ ಈ ಪರಿಸ್ಥಿತಿ ಇದೆ. ಇದಕ್ಕೆ ಕಾರಣ, ಈ ವಿದ್ಯುತ್ ಮಂಡಳಿ ಮತ್ತು ಸರ್ಕಾರ ನೇರವಾದ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಇವತ್ತು ವಿದ್ಯುತ್ ಎಷ್ಟು ಬಳಕೆಯಾಗುತ್ತದೆಯೋ ಅದು ಒಂದು ಅಭಿವೃದ್ಧಿಯ ಸಂಕೇತ. ಪರ್ ಕ್ಯಾಪಿಟಾ ಕನ್‌ಸಂಷನ್ ಹೆಚ್ಚಿಗೆ ಇದ್ದರೆ ಅದು ಒಂದು ಅಭಿವೃದ್ಧಿಯ ಸಂಕೇತ. ಆ ಲೆಕ್ಕದಲ್ಲಿ ತೆಗೆದುಕೊಳ್ಳುವುದಕ್ಕೆ ಹೋದರೆ ನಮ್ಮ ದೇಶ ಅಂತರರಾಷ್ಟ್ರೀಯ ಮಟ್ಟದಲ್ಲಿ ಎಲ್ಲೋ ಕೊನೆಯಲ್ಲಿ ಬರುತ್ತದೆ. ಅದರಲ್ಲೂ ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ವಿದ್ಯುತ್ ಇಲ್ಲದೆ ಜೀವನವೇ ಇಲ್ಲ, ಹೊಟ್ಟೆಗೂ ಇಲ್ಲ, ಬಟ್ಟೆಗೂ ಇಲ್ಲದಂಥ ಪರಿಸ್ಥಿತಿ ನಿರ್ಮಾಣ ಆಗಿದೆ. ಇವತ್ತು ವಿದ್ಯುತ್ ಬಳಕೆ ಮತ್ತು ಉತ್ಪಾದನೆ ಏನಿದೆ ಇದಕ್ಕೆ ಅಜಗಜಾಂತರ ವ್ಯತ್ಯಾಸ ಇದೆ. ಯಾವಾಗ ಉತ್ಪಾದನೆ ಕಡಿಮೆಯಾಗುತ್ತದೆ? ಮತ್ತು ಬಳಕೆ ಹೆಚ್ಚಾಗುತ್ತದೆ? ಆಗ ನಾವು ಸರಿಯಾಗಿ ವಿತರಣೆ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕಾಗುತ್ತದೆ. ಆ ವ್ಯವಸ್ಥೆ ಇವತ್ತಿನ ದಿವಸ ಇಲ್ಲ. ಆ ವ್ಯವಸ್ಥೆ ಇಲ್ಲದೆ ಇರುವ ಕಾರಣದಿಂದ ಇವತ್ತು ಟ್ರಾನ್ಸ್‌ಫಾರ್ಮರ್ ಸುಡುತ್ತಿವೆ, ಜನ ಆಕ್ರೋಶವನ್ನು ತೋರಿಸುತ್ತಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿತಕ್ಕದ್ದು ಏನೆಂದರೆ ಮಾಜಿ ಮುಖ್ಯಮಂತ್ರಿಗಳು ಅಂತರರಾಷ್ಟ್ರೀಯ, ಗ್ಲೋಬ್ ಒಂದು ಸುತ್ತು ಬಂದರು. ನಾವು ವಿದ್ಯುತ್ತಿನ ಜನರೇಷನ್‌ನ್ನು ಖಾಸಗಿ ರಂಗದಲ್ಲೋ ಅಥವಾ ಸರ್ಕಾರಿ ರಂಗದಲ್ಲೋ ಮಾಡಬೇಕು ಅದಕ್ಕಾಗಿ ಹೋಗುತ್ತಿದ್ದೇವೆಂದು ಹೇಳಿದರು. ಅವರ ಪ್ರವಾಸಕ್ಕೆ ಸಾಕಷ್ಟು ಪ್ರಚಾರ ಕೂಡ ಸಿಕ್ಕಿತು. ಅದರ ಪ್ರತಿಫಲ ಇವತ್ತು ಏನಾಗಿದೆ ಅನ್ನತಕ್ಕಂಥಾದ್ದನ್ನು ದಯವಿಟ್ಟು ತಾವು ಈ ಸದನಕ್ಕೆ ಮಾಹಿತಿಯನ್ನು ನೀಡಬೇಕು. ಮತ್ತೆ ಈ ಜನರೇಷನ್ ಬಗ್ಗೆ ತಾವು ಏನೇನು ಕಾರ್ಯಕ್ರಮ ಹಾಕಿದ್ದೀರಿ? ಅವರ ಪ್ರವಾಸದ್ದು ಬಿಟ್ಟು; ತಾವು ಉತ್ಪಾದನೆ ಬಗ್ಗೆ ಏನೇನು ಕಾರ್ಯಕ್ರಮವನ್ನು ಹಾಕಿದ್ದೀರಿ, ಇದರ ಬಗ್ಗೆ ಕೂಡ ಮಾಹಿತಿ ನೀಡಬೇಕು. ಟ್ರಾನ್ಸ್‌ಫಾರ್ಮರ್ ಎಲ್ಲಾ ಕಡೆ ಸುಡುತ್ತಿವೆ. ಹೀಗೆ ಸುಡುತ್ತಿರುವುದಕ್ಕೆ ವೋಲ್ಟೇಜ್ ಕಡಿಮೆ ಆಗುತ್ತಿರುವುದೇ ಕಾರಣ. ನಾವು ಎಲ್ಲಿ ಕೇಳಿದರೂ ಕೂಡ ನಮಗೆ ಬರುತ್ತಿರತಕ್ಕಂಥ ವೋಲ್ಟೇಜ್ ಕಡಿಮೆ, ನಾವು ಏನು ಮಾಡುವುದಕ್ಕಾಗುತ್ತದೆಂದು ಅಧ್ಯಕ್ಷರಿಂದ ಹಿಡಿದು ಕೊನೆಯ ಅಧಿಕಾರಿವರೆಗೂ ಹೇಳುತ್ತಿದ್ದಾರೆ. ಮೊನ್ನೆ ಸ್ವಲ್ಪ ದಿವಸದ ಹಿಂದೆ ರಾಮಗೊಂಡಂನಲ್ಲಿರತಕ್ಕಂಥ ಸ್ಟೇಷನ್‌ನಲ್ಲಿ ವಿದ್ಯುತ್ ಫೇಲ್ ಆಗಿ ಮತ್ತು ತಮಿಳುನಾಡಿನಲ್ಲೂ ಕೂಡ ಗ್ರಿಡ್ ಫೇಲ್ ಆಗಿ ಸುಮಾರು 7-8 ದಿವಸ ನಮ್ಮ ಪರಿಸ್ಥಿತಿ ಏನು ಎನ್ನುವ ಭಯ ಉಂಟಾಗಿತ್ತು. ಅಂಥ ಪರಿಸ್ಥಿತಿಯನ್ನು ತಪ್ಪಿಸಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ನಾನು ಆಗಲೇ ಹೇಳಿದ ಹಾಗೆ ಉತ್ಪಾದನೆ ಮತ್ತು ಬಳಕೆಗೆ ಅಜಗಜಾಂತರ ವ್ಯತ್ಯಾಸವಿರುವುದರಿಂದ ನೀವು ಇವೊತ್ತು ವ್ಯವಸಾಯ ರಂಗಕ್ಕೆ ಆದ್ಯತೆಯನ್ನು ಕೊಡಲೇಬೇಕು. ನೀವು ಎಲ್ಲರಿಗೂ ಯಥೇಚ್ಛವಾಗಿ ವಿದ್ಯುತ್‌ನ್ನು ಕೊಡಲು ಸಾಧ್ಯವಾಗದಿರುವಾಗ ನೀವು ಕೈಗಾರಿಕಾ ರಂಗಕ್ಕೆ ಪವರ್‌ಕಟ್‌ನ್ನು ಹಾಕಲೇಬೇಕು. ಇದನ್ನು ಮಾನ್ಯ ಮುಖ್ಯಮಂತ್ರಿಯವರು ದಯಮಾಡಿ ಗಮನಿಸಬೇಕು. ಪವರ್‌ಕಟ್‌ನ್ನು ಕೈಗಾರಿಕಾ ರಂಗಕ್ಕೆ ಹಾಕಿ, ವ್ಯವಸಾಯ ರಂಗಕ್ಕೆ ವಿದ್ಯುತ್‌ನ್ನು

ಕೊಡಬೇಕು. ಕಾರಣ ಏನೆಂದರೆ, ಕೆಲವು ಪ್ರದೇಶಗಳಲ್ಲಿ ಬೆಳೆ ಅರ್ಧಕ್ಕೆ ಬೆಳೆದು ನಿಂತಿದೆ. ಅದರ ರಕ್ಷಣೆ ಮಾಡತಕ್ಕಂಥ ಅವಶ್ಯಕತೆಯೂ ಇದೆ. ಇದು ತಾತ್ಕಾಲಿಕವಾದಂಥ ಏರ್ಪಾಡು. ಜನವರಿ ತಿಂಗಳಿಂದ ಪ್ರಾರಂಭವಾಗುತ್ತದೆ, ನಮ್ಮ ಕಡೆ ಆಲೂಗಡ್ಡೆ ಹಾಕಿದ್ದೇವೆ, ಅದು ಬಹಳ ಸೆನ್ಸಿಟೀವ್ ಕ್ರಾಪ್. ಒಂದೆರಡು ದಿವಸಗಳ ಕಾಲ ನೀರು ಕೊಡುವುದು ಅದಕ್ಕೆ ಹೆಚ್ಚು ಕಡಿಮೆ ಆದರೆ ಒಬ್ಬ ರೈತನು ಸಾವಿರಾರು ರೂಪಾಯಿಗಳನ್ನು ಕಳೆದುಕೊಳ್ಳುತ್ತಾನೆ. ಅದನ್ನೇ ನಾವು ಇವತ್ತಿನ ದಿವಸ ದೇವನಹಳ್ಳಿಯಲ್ಲಿ ನೋಡಿರತಕ್ಕಂಥಾದ್ದು. ಮತ್ತೆ ವಿದ್ಯುತ್ ಮಂಡಳಿಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಕೂಡ ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ಈ ಎರಡೂ ರಂಗಗಳಿಂದ ಹಣ ಬಾಕಿ ಬರಬೇಕಾಗಿದೆ. ಕೈಗಾರಿಕಾ ರಂಗದಲ್ಲಿಯೂ ಮತ್ತು ವ್ಯವಸಾಯ ರಂಗದಲ್ಲಿಯೂ ಬಾಕಿ ಬರಬೇಕಾಗಿದೆ. ಈ ಬಾಕಿ ವಸೂಲಿಗೆ ನೀವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಈ ಎರಡೂ ರಂಗಗಳಲ್ಲಿ ಕೂಡ ಘಟಾನುಘಟಿಗಳು ಇದ್ದಾರೆ. ಈ ಬಾಕಿ ವಸೂಲಿಯನ್ನು ಕೂಡಲೇ ಮಾಡಲು ಕ್ರಮ ತೆಗೆದುಕೊಳ್ಳಬೇಕು. ವ್ಯವಸಾಯ ರಂಗದಲ್ಲಿರುವ ಬಾಕಿಯ ಬಗ್ಗೆ ಕೆ.ಇ.ಬಿ.ಯವರು ಒಂದು ಪ್ರಕಟಣೆ ಹೊರಡಿಸಿದ್ದರು. ನಾವು ಬಡ್ಡಿ ಹಣವನ್ನು ವಜಾ ಮಾಡಿದ್ದೇವೆ ಎಂಬ ಬಗ್ಗೆ ಹೇಳಿದ್ದರು. ಆದರೆ ಸರಕಾರದ ತೀರ್ಮಾನ ಮತ್ತು ಆಜ್ಞೆಯು ಯಾವ ಕಛೇರಿಗೂ ಇನ್ನೂ ಹೋಗಿಲ್ಲ. ನಾವು ಎಷ್ಟೋ ಕಛೇರಿಗಳಲ್ಲಿ ಕೇಳಿದ್ದೇವೆ. ಸರಕಾರದವರು ಹೇಳಿದ್ದಾರೆ, ಬಡ್ಡಿ ವಜಾ ಮಾಡಿದ್ದಾರೆ, ನಮ್ಮ ಅಸಲು ತೆಗೆದುಕೊಳ್ಳಿ ಎಂದು ಹೇಳಿದರೆ, ನಮಗೂ ಅದಕ್ಕೂ ಸಂಬಂಧ ಇಲ್ಲ, ನಮಗೆ ಆ ರೀತಿಯಾದ ಆಜ್ಞೆಯು ಸರಕಾರದಿಂದ ಬಂದಿಲ್ಲ ಎಂದು ಇಡೀ ರಾಜ್ಯದಲ್ಲಿ ಹೇಳುತ್ತಾ ಇದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳವರಿಗೆ ಸಲಹೆ ಕೊಡುವುದೇನೆಂದರೆ, ನಿಮಗೆ ಈ ಹಣವನ್ನು ರೈತರಿಂದ ಅಷ್ಟು ಸುಲಭವಾಗಿ ವಸೂಲಿ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನೀವು ಇನ್ಸೆಂಟೀವ್ಸ್ ಕೊಡಿ. ಯಾರ್‍ಯಾರು ಬರತಕ್ಕಂಥ ಮಾರ್ಚ್ ತಿಂಗಳೊಳಗಾಗಿ ಇರತಕ್ಕಂಥ ಬಾಕಿಯನ್ನು ಕೊಡುತ್ತಾರೆ, ಅಂಥವರಿಗೆ ಇರತಕ್ಕಂಥ ಬಡ್ಡಿಯನ್ನು ವಜಾ ಮಾಡುತ್ತೇವೆ ಎಂದು ನೀವು ಹೇಳಬೇಕು. ಹಾಗೆಯೇ ಇವೊತ್ತಿನ ದಿವಸ ಪುಕ್ಕಟೆ ಪವರ್ ಕೊಡುತ್ತಾ ಇದ್ದೀರಿ. ಇದನ್ನು ಮಾನ್ಯ ಮುಖ್ಯಮಂತ್ರಿಯವರು ಗಮನಿಸಬೇಕು. ನಿಮಗೆ ಹಾಗೆ ಯಾರಾದರೂ ಕೇಳಿದ್ದಾರೆಯೇ? ಉಚಿತವಾಗಿ ಪವರ್ ಕೊಡಿ ಎಂದು ಎಷ್ಟು ಜನರು ಅರ್ಜಿ ಕೊಟ್ಟಿದ್ದಾರೆ? ಮಾನ್ಯ ಬಂಗಾರಪ್ಪನವರು ಇದ್ದಾಗಲೂ ಇದೇ ಪ್ರಶ್ನೆಯನ್ನು ಅವರಲ್ಲಿ ಕೇಳಿದ್ದೆ. ಉಚಿತವಾಗಿ ಪವರ್ ಕೊಡಿ ಎಂಬ ಬಗ್ಗೆ ರೈತರು ನಿಮಗೆ ಅರ್ಜಿ ಕೊಟ್ಟಿದ್ದಾರೆಯೇ ಎಂದು ಅವರನ್ನು ಕೂಡ ಕೇಳಿದ್ದೆ. ನೀವು ಇವೊತ್ತು ಇಡೀ ರಾಜ್ಯದಲ್ಲಿ ರೆಫರೆಂಡಮ್ ಮಾಡಿ ಒಬ್ಬ ರೈತನು ಕೂಡ ಉಚಿತವಾಗಿ ಕರೆಂಟ್ ಕೊಡಿ ಎಂಬ ಮಾತನ್ನು ಒಪ್ಪುವುದಿಲ್ಲ. ನಾನು ಅನೇಕ ರೈತರನ್ನು ಕೇಳಿದ್ದೇನೆ. ಉಚಿತವಾಗಿ ಕರೆಂಟ್ ಕೊಡುವಂಥಾದ್ದು ಒಂದು ಬುದ್ಧಿ ಇಲ್ಲದ ಕೆಲಸ ಮಾಡಿದ ಹಾಗೆ ಆಗಿದೆ, ಇವರನ್ನು ಉಚಿತವಾಗಿ ಕರೆಂಟ್ ಕೊಡಿ ಎಂದು ಕೇಳಿದವರು ಯಾರು? ನಾವು ಕೇಳುತ್ತಿರತಕ್ಕಂಥಾದ್ದು ಉಚಿತವಾಗಿ ಅಲ್ಲ, ನಾವು ಕೇಳತಕ್ಕಂಥಾದ್ದು ಸರಿಯಾಗಿ ವಿದ್ಯುಚ್ಛಕ್ತಿಯನ್ನು ಕೊಡಿ ಎಂದು. ಎಷ್ಟು ಗಂಟೆ ಒಂದು ದಿವಸದಲ್ಲಿ ಕೊಡ್ತೀರೋ ಆ ಅವಧಿಯಲ್ಲಾದರೂ ಕೂಡ ಸರಿಯಾದ ವೋಲ್ಟೇಜ್ ಕೊಡಿ ಅಂದರೆ ಪ್ರಯೋಜನ ಇಲ್ಲದ ದೀಪ ಉರಿಯುವಷ್ಟು ಕರೆಂಟ್ ಕೊಡುತ್ತೇನೆ ಅಂದರೆ ಯಾರಿಗೆ ಬೇಕಾಗಿದೆ ಆ ಕರೆಂಟ್. ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಈ ಚೀಪ್ ಪಾಪ್ಯುಲಾರಿಟಿಯನ್ನು ಬಿಡಿ, ಈ ಚೀಪ್ ಪಾಪ್ಯುಲಾರಿಟಿಗೆ ನೀವು ಮರುಳಾಗಬೇಡಿ, ಕನಿಷ್ಟ 1 ಹೆಚ್‌ಪಿಗೆ ಒಂದು ವರ್ಷಕ್ಕೆ 50 ರೂ ಆದರೂ ಹಾಕಬೇಕಾದ ಅವಶ್ಯಕತೆ ಇದೆ. ಇಷ್ಟು ಹಾಕಿದರೆ ನಿಮಗೆ ಎಷ್ಟು ಬರುತ್ತದೆ ಎಂದು ಕೆ.ಇ.ಬಿ.ಯವರನ್ನು ಕೇಳಿದ್ದಕ್ಕೆ ಒಂದು ವರ್ಷಕ್ಕೆ 30 ಕೋಟಿ ರೂ ಬರುತ್ತದೆ ಎಂದು ಹೇಳಿದರು. ಕೆಲವು ರೈತರು 100 ರೂ ಆದರೂ ಹಾಕಲಿ, ಕೊಡುವುದಕ್ಕೆ ನಾವು ತಯಾರಿದ್ದೇವೆ ಆದರೆ ಸರಿಯಾದ ಕರೆಂಟನ್ನು ನಮಗೆ ಕೊಡಲಿ ಎಂದು ಹೇಳುತ್ತಾರೆ. ನೀವು ಸರಿಯಾಗಿ ಕರೆಂಟ್ ಕೊಟ್ಟು 50 ರೂ

ಹಾಕಿದರೆ ರೈತರು ಸಂತೋಷಪಡುತ್ತಾರೆಯೇ ವಿನಹ ನಿಮ್ಮ ಮೇಲೆ ಅಪಾದನೆ ಮಾಡುವುದಿಲ್ಲ ಎಂದು ನಾನು ವಿರೋಧಪಕ್ಷದಲ್ಲಿದ್ದು ಈ ಮಾತು ಹೇಳುತ್ತಿದ್ದೇನೆ. ದಯವಿಟ್ಟು ನೀವು ಇದನ್ನು ಆಲೋಚನೆ ಮಾಡಬೇಕು. ಮತ್ತೆ ಟ್ರಾನ್ಸ್‌ಫಾರ್ಮರನ್ನು ಕೆ.ಇ.ಬಿ.ಯಲ್ಲಿ ಒದಗಿಸಬೇಕಾದರೆ ಹಣ ಬೇಕಾಗುತ್ತದೆ. ಆದ್ದರಿಂದ ಈ ಕಾರ್ಯಕ್ರಮವನ್ನು ತಾವು ದಯವಿಟ್ಟು ಹಾಕಬೇಕು ಅಂತ ಕೇಳುತ್ತೇನೆ. ಸ್ವಾಮಿ, 89ರಿಂದ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಮೂರನೇ ಮುಖ್ಯಮಂತ್ರಿಗಳಿದ್ದಾರೆ ಇಲ್ಲಿ. ಒಬ್ಬರು ಹೈದರಾಬಾದ್ ಕರ್ನಾಟಕದಿಂದ ಬಂದವರು, ಇನ್ನೊಬ್ಬರು ಮಲೆನಾಡಿನಿಂದ ಬಂದವರು. ಹೈದರಾಬಾದ್ ಕರ್ನಾಟಕದ ಏರಿಯಾದಿಂದ ಬಂದ ಮುಖ್ಯಮಂತ್ರಿಗಳು ಹೈದರಾಬಾದ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಅಂತ ಮಾಡಿದರು, ಸಂತೋಷ, ನಾವು ಅದಕ್ಕೆ ವಿರೋಧ ಮಾಡಲಿಲ್ಲ, ಹಿಂದುಳಿದ ಪ್ರದೇಶ ಮಾಡಿರಿ ಎಂದು ಹೇಳಿದೆವು. ಆಮೇಲೆ ಮಾನ್ಯ ಬಂಗಾರಪ್ಪನವರು ಮಲೆನಾಡು ಪ್ರದೇಶದಿಂದ ಬಂದವರು, ಅವರು ಮಲೆನಾಡು ಅಭಿವೃದ್ಧಿ ಮಂಡಲಿ ಅಂತ ರಚನೆ ಮಾಡಿದರು ಅದು ಒಳ್ಳೆಯ ಕೆಲಸ, ಮಾಡಲಿ. ಸ್ವಾಮಿ, ನಾವೇನು ಮಾಡಿದ್ದೇವೆ. ಮಲೆನಾಡು ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದಿಂದ ಬಂದವರು ಹೆಂಡತಿ ಮಕ್ಕಳು, ನಾವು ಬೇರೆಯವರ ಮಕ್ಕಳಾ? ಸ್ವಾಮಿ ನಾವು ಬೇರೆಯವರ ಮಕ್ಕಳಲ್ಲ, ಅಂಕಿಅಂಶಗಳನ್ನು ತೆಗೆದುಕೊಳ್ಳಿ, ಕೋಲಾರ ಜಿಲ್ಲೆ ಎಲ್ಲಕ್ಕಿಂತ ಕೆರೆಯಲ್ಲಿರುವಂಥದ್ದು, ನೀವು ಇಷ್ಟಿಷ್ಟು ದಪ್ಪ ಪುಸ್ತಕಗಳನ್ನು ಪ್ರತಿವರ್ಷ ಅಚ್ಚು ಹಾಕಿಸಿ ಕೊಡುತ್ತೀರಿ, ಅದರಲ್ಲಿರುವ ಅಂಕಿಅಂಶ ತೆಗೆದುಕೊಂಡರೆ ಪರ್‌ಕ್ಯಾಪಿಟಾ ಇನ್‌ಕಂ ಕೋಲಾರಜಿಲ್ಲೆಯಲ್ಲಿ ಕನಿಷ್ಟ ಇರುವುದು, ಕೋಲಾರಕ್ಕೆ ಏನು ಮಾಡಿದ್ದೀರಿ? ಕೋಲಾರ ಆದಮೇಲೆ ಚಿತ್ರದುರ್ಗ ಬರುತ್ತದೆ, ಚಿತ್ರದುರ್ಗಕ್ಕೆ ಏನು ಮಾಡಿದ್ದೀರಿ? ಆಮೇಲೆ ತುಮಕೂರು ಬರುತ್ತದೆ, ತುಮಕೂರಿಗೆ ಏನು ಮಾಡಿದ್ದೀರಿ? ನಮಗೆ ಕರೆಂಟಾದರೂ ಸರಿಯಾಗಿ ಕೊಡಿ ಅಂದರೆ ಅದನ್ನು ಕೊಡುವ ಯೋಗ್ಯತೆ ನಿಮಗಿಲ್ಲ, ಇವತ್ತು ಫಾರಿನ್ ಎಕ್ಸ್‌ಚೇಂಜ್ ಯಾರಿಂದ ಹೆಚ್ಚು ಬರುತ್ತಿದೆ, ಕಾಫಿ ಬಿಟ್ಟರೆ ರೇಷ್ಮೆಯಿಂದ ಹೆಚ್ಚು ಫಾರಿನ್ ಎಕ್ಸ್‌ಚೇಂಜ್ ಬರುತ್ತಿದೆ. ಹಾಲು ಉತ್ಪಾದನೆಯಲ್ಲಿ ಇವತ್ತು ಮೊದಲನೇ ಸ್ಥಾನದಲ್ಲಿದ್ದೇವೆ, ಬೆಂಗಳೂರಿನಲ್ಲಿರುವವರಿಗೆ ಕುಡಿಯಲು ಹಾಲು ಕೊಡುತ್ತೇವೆ. ಹಾಲು ಕೊಟ್ಟ ಜನಕ್ಕೆ ಕುಡಿಯುವ ನೀರಿಗೆ ಬೇಕಾದರೂ ಕರೆಂಟ್ ಬೇಡವೆ. ಅಂಥ ಒಂದು ಪರಿಸ್ಥಿತಿಗೆ ನಮ್ಮನ್ನು ದೂಡಿದ್ದೀರಿ. ಸಾರಾಯಿ ಸಾಕಷ್ಟು ಕೊಟ್ಟಿದ್ದೀರಿ, ಆ ಕುಡುಕರ ಪರವಾಗಿ ಕಾಂಗ್ರೆಸ್ ಸರ್ಕಾರಕ್ಕೆ ಬಹಳ ಧನ್ಯವಾದಗಳು. ವೀರಪ್ಪಮೊಯಿಲಿಯವರ ಸರ್ಕಾರ ಅಂತ ಹೇಳೋದಿಲ್ಲ, ಅದನ್ನು ಎಷ್ಟು ಮಾತ್ರ ನಿಲ್ಲಿಸುತ್ತಾರೋ ನೋಡೋಣ. ಇನ್ನು ನಾಲ್ಕೈದು ದಿವಸ ನೋಡೋಣ. ಸ್ವಾಮಿ ಎರಡು ಬಜೆಟ್‌ನಲ್ಲಿಯೂ ಕೋಲಾರದಲ್ಲಿ ಡೀಸಲ್ ಜನರೇಟಿಂಗ್ ಸ್ಟೇಷನ್ ಆಗುತ್ತಿದೆ ಎನ್ನತಕ್ಕಂಥದ್ದು ಸೇರಿದೆ. ಬಜೆಟ್ ಪುಸ್ತಕ ಎಂದರೆ ಸುಮ್ಮನೆ ಪುಸ್ತಕ ಪ್ರಿಂಟ್ ಮಾಡಿ ಅಲ್ಲಿ ಲೈಬ್ರರಿಗಳಲ್ಲಿ ಇಟ್ಟಿರುವುದು ಎಂದು ತಿಳಿದುಕೊಂಡಿದ್ದೀರಾ? ಅದು ನೀವು ಈ ಸದನಕ್ಕೆ ಕೊಟ್ಟಿರತಕ್ಕಂಥ ಆಶ್ವಾಸನೆ. ಈ ಸದನ ಅದನ್ನು ಒಪ್ಪಿದೆ. ನೀವು ಇಟ್ಟಂಥ ಬಜೆಟ್‌ನ್ನು ಈ ಸದನ ಒಪ್ಪಿದೆ. ಏನು ಮಾಡಿದ್ದೀರಿ ನೀವು? ಕೋಲಾರದಲ್ಲಿ ಡೀಸಲ್ ಜನರೇಟಿಂಗ್ ಸ್ಟೇಷನ್ ಹಾಕುತ್ತೇವೆ ಎಂದು ಹೇಳಿದ್ದುದು ಏನಾಯಿತು? ಇದು ಮಲತಾಯಿ ಧೋರಣೆ ಅಲ್ಲದೆ ಮತ್ತೇನು? ಅದಕ್ಕೆ ನಾನು ಒಂದು ಹೈದರಾಬಾದ್-ಕರ್ನಾಟಕ ಪ್ರದೇಶದ ಅಭಿವೃದ್ಧಿ ಮಂಡಲಿ, ಇನ್ನೊಂದು ಮಲೆನಾಡು ಪ್ರದೇಶದ ಅಭಿವೃದ್ಧಿ ಮಂಡಲಿ ಎರಡು ಉದಾಹರಣೆಯನ್ನು ಕೊಟ್ಟಿದ್ದು. ಅದು ಎರಡುಸಾರಿ ಅಚ್ಚಾಗಿದೆ. ಈ ವರ್ಷ ಅಚ್ಚು ಹಾಕುತ್ತೀರೋ ಏನೊ ಗೊತ್ತಿಲ್ಲ. ಅದು ಏನಾಯಿತು ಎನ್ನುವುದನ್ನು ದಯವಿಟ್ಟು ತಾವು ಹೇಳಬೇಕು. ದೇವನಹಳ್ಳಿಯಲ್ಲಿ ಆದದ್ದು ಮೊದಲನೆಯದು, ರೈತರ ಆಕ್ರೋಶ ಏನು ಎನ್ನುವುದು ಗೊತ್ತಾಗಿದೆ. ಅದರಲ್ಲೂ ಪ್ರಮುಖವಾಗಿ ಮೂರು ನಾಲ್ಕು ಜಿಲ್ಲೆಗಳ ಪ್ರತಿಯೊಂದು ಹಳ್ಳಿ ಪ್ರತಿಯೊಂದು ತಾಲ್ಲೂಕು ಕೇಂದ್ರ ದೇವನಹಳ್ಳಿಯಾಗಬೇಕು ಎಂದು ನಿಮಗೆ ಇಚ್ಛೆ ಇಲ್ಲದ್ದಿದರೆ ಇದರ ಬಗ್ಗೆ ಗಮನ ಹರಿಸಬೇಕು. ಜನರನ್ನು ರಕ್ಷಣೆ

ಮಾಡಬೇಕಾಗಿರತಕ್ಕಂಥ ಜವಾಬ್ದಾರಿ ನಮ್ಮದು ಇದೆ ಎಂದು ಅನ್ನಿಸಿದರೆ ತತ್‌ಕ್ಷಣ ಗಮನ ಹರಿಸಬೇಕಾಗಿರತಕ್ಕಂಥದ್ದು ಅವಶ್ಯಕತೆ ಇದೆ. ದೇವನಹಳ್ಳಿ ವಿಚಾರದಲ್ಲಿ ನಾನು ಬೆಳಿಗ್ಗೆಯೇ ಹೇಳಿದ್ದೇನೆ. ಅವರ ಮೇಲೆ ನೀವು ಜೀಪು ಸುಟ್ಟದು, ಇನ್ನೊಂದು ಸುಟ್ಟರು ಎಂದು ಹೇಳಿ ರೈತರ ಮೇಲೆ ನೀವು ಕೇಸನ್ನು ಹಾಕಿದ್ದೀರಲ್ಲಾ, ಲಕ್ಷಾಂತರ ಪಂಪುಸೆಟ್ಟುಗಳು ಸುಟ್ಟುಹೋಗಿದೆ ಒಂದು ವರ್ಷದಲ್ಲಿ ಮೂರು ನಾಲ್ಕು ಸಾರಿ ಸುಡುತ್ತದೆ. ಅದು ನಿಮಗೆ ಗೊತ್ತಾಗಲಿಲ್ಲ. ಜೀಪನ್ನು ಸುಟ್ಟಿರತಕ್ಕಂಥ ವಿಚಾರದಲ್ಲಿ, ಅವರು ತೋರಿಸಿತಕ್ಕಂಥ ಆಕ್ರೋಶ ಏನಿದೆ, ಅದರ ಬಗ್ಗೆ ನಾನು ಸಂತೋಷಪಡುತ್ತೇನೆ. ಜನ ಇವತ್ತಿನ ದಿವಸ ಬೀದಿಗೆ ಇಳಿಯುವ ಮಟ್ಟಕ್ಕಾದರೂ ಬಂದಿದ್ದಾರೆ. ಕಾಂಗ್ರೆಸ್ ಪಕ್ಷದವರು ಹೇಳಿರತಕ್ಕಂಥವರನ್ನೇ ಅರೆಸ್ಟ್ ಮಾಡುತ್ತಾರೆ ಎಂದು ಬೆಳಿಗ್ಗೆ ಹೇಳಿದರು. ಕಾಂಗ್ರೆಸ್ ಪಕ್ಷದವರು ಅಥವಾ ಮತ್ತೊಂದು ಪಕ್ಷದವರು ಎಂದು ನಾನು ವಿಭಾಗ ಮಾಡುವುದಕ್ಕೆ ಹೋಗುವುದಿಲ್ಲ, ಅಲ್ಲಿ ಬಂದಿರತಕ್ಕಂಥವರು ರೈತರು. ವಿದ್ಯುಚ್ಚಕ್ತಿ ಮಂಡಲಿಯಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ಲೂಟಿ ಹೊಡೆದಿರುವವರನ್ನು ಅರೆಸ್ಟ್ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ. ನಮಗೆ ವಿದ್ಯುತ್ ಕೊಡಿ ಎಂದು ಹೇಳಿ ರೈತರು ಬಂದರೆ ಅವರನ್ನು ಅರೆಸ್ಟ್ ಮಾಡಿ ಒಳಗಡೆ ಹಾಕುವುದು ಸರಿಯಲ್ಲ. ಇವತ್ತು ರೈತರನ್ನು ತಡೆಯುವುದಕ್ಕೆ ಸಾಧ್ಯವಿಲ್ಲ, ಅವರ ಮೇಲೆ ಇವತ್ತಿನ ದಿವಸ ಏನೇನು ಕೇಸುಗಳನ್ನು ಹಾಕಿದ್ದೀರಿ, ಅದನ್ನು ವಾಪಸ್ ಪಡೆಯಬೇಕು. ಅವರು ಇನ್ನೂ ಜೀಪು ಸುಡುವುದಲ್ಲ, ನೀವು ಸುಡಿಸಿಕೊಳ್ಳಬೇಕು ಎನ್ನುವ ಇಚ್ಛೆ ಇದ್ದರೆ, ಅವರ ಮೇಲೆ ಕೈ ಹಾಕಿ. ನಾವು ಆ ಕೇಸುಗಳನ್ನೆಲ್ಲಾ ವಾಪಸ್ ಪಡೆಯುತ್ತೇನೆ, ಅವರ್‍ಯಾರನ್ನು ಬಂಧಿಸತಕ್ಕಂಥ ಕಾರ್ಯಕ್ರಮ ಕೂಡ ಮಾಡುವುದಿಲ್ಲ. ನೀವು ಇವತ್ತು ಹೇಳಬೇಕು ತಮ್ಮ ನೋವನ್ನು ಹೇಳುವುದಕ್ಕೆ ಬಂದ ರೈತರನ್ನು ನೀವು ಒಳಗಡೆ ಹಾಕುತ್ತೇನೆ ಎಂದರೆ ಅರ್ಥ ಇದೆಯೆ? ಈ ರೀತಿ ಅರ್ಥವಿಲ್ಲದ ಕೆಲಸವನ್ನು ತಕ್ಷಣ ನಿಲ್ಲಿಸಬೇಕು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮುನಿನರಸಿಂಹಯ್ಯ:- ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ದೇವನಹಳ್ಳಿ ಕ್ಷೇತ್ರದ ಬಗ್ಗೆ ಬೆಳಿಗ್ಗೆ ವಿಧಾನಸಭೆಯಲ್ಲಿ ಏನೊಂದು ವಿರೋಧಪಕ್ಷದ ನಾಯಕರು ಪ್ರಸ್ತಾವನೆಯನ್ನು ಮಾಡಿದ್ದಾರೆ, ಆ ವಿಚಾರದಲ್ಲಿ ಆ ಕ್ಷೇತ್ರದ ಶಾಸಕನಾಗಿ ನಾನು ಅಲ್ಲಿ ನಡೆದಂಥ ಕೆಲವು ವಾಸ್ತವಾಂಶಗಳನ್ನು ಮತ್ತು ಘಟನೆಯನ್ನು....

ಉಪಾಧ್ಯಕ್ಷರು:- ವಿದ್ಯುತ್ ಟ್ರಾನ್ಸ್‌ಫಾರ್ಮರ್ ಬಗ್ಗೆ ಹೇಳಿ.

ಶ್ರೀ ಮುನಿನರಸಿಂಹಯ್ಯ:- ವಿದ್ಯುತ್‌ಗೆ ಸಂಬಂಧಪಟ್ಟ ಹಾಗೆ. ಆ ಒಂದು ಘಟನೆಯ ಬಗ್ಗೆ ಈ ಸಂದರ್ಭದಲ್ಲಿ ಎರಡು ಮಾತನ್ನು ಇಲ್ಲಿ ಹೇಳಬೇಕಾಗಿದೆ. ಇಂದು ಬೆಳಿಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಬೈರೇಗೌಡರು, ಜೀವರಾಜ ಆಳ್ವರವರು, ಸಿಂಧ್ಯಾರವರು, ವಾಟಾಳ್ ನಾಗರಾಜ್‌ರವರು ಅಪಾದನೆಯನ್ನು ಮಾಡಿದ್ದಾರೆ. ರೈತರ ಕರೆಯನ್ನು ಕೊಟ್ಟಿದ್ದಂಥವರು ಕಾಂಗ್ರೆಸ್‌ನವರು. ಕಾಂಗ್ರೆಸ್‌ನವರೇ ಕರೆಯನ್ನು ಕೊಟ್ಟು ಜನತಾ ದಳದವರನ್ನು ಅವರು ಬಂಧನ ಮಾಡಿಸಿದ್ದಾರೆ ಎಂದು ಏನೊಂದು ಹೇಳಿಕೆಯನ್ನು ಈ ಸಭೆಯಲ್ಲಿ ಹೇಳಿದ್ದಾರೆ, ಅದು ಸತ್ಯಕ್ಕೆ ದೂರವಾದಂಥ ಒಂದು ಅಂಶ. ಈ ಒಂದು ಕರಪತ್ರವನ್ನು 13ನೇ ತಾರೀಖು ಹೊರಡಿಸಿ ವಿದ್ಯುತ್ ಕೊರತೆಯ ಬಗ್ಗೆ ನಾವು ರೈತರ ಸಭೆಯನ್ನು ಸೇರಿಸುತ್ತೇವೆ, ಎಂದು ಏನು ಪತ್ರಿಕೆಯನ್ನು ಅಚ್ಚು ಹಾಕಿಸಿದ್ದರು, ಅದು ಜನತಾ ದಳದ ಮುಖಂಡರೇ ಹಾಕಿಸಿದ್ದುದು. ಆದರೂ ಕೂಡ ರೈತರ ಸಮಸ್ಯೆ ವಿದ್ಯುತ್‌ನ ಸಮಸ್ಯೆ. ಹೆಚ್ಚಿಗೆ ಕೃಷಿ ಕ್ಷೇತ್ರದಲ್ಲಿದ್ದುದರಿಂದ ಸರ್ವಪಕ್ಷಗಳ ರೈತರೂ ಕೂಡ ಈ ಒಂದು ಸಮಾರಂಭದಲ್ಲಿ ಭಾಗವಹಿಸಿದ್ದುದೂ ವಾಸ್ತವಾಂಶ. ಪ್ರವಾಸಿ ಮಂದಿರದಲ್ಲಿ ಸಭೆಯನ್ನು ಮಾಡುತ್ತೇವೆ, ವಿದ್ಯುತ್ ಸಮಸ್ಯೆ ಬಗ್ಗೆ ಚರ್ಚೆ ಮಾಡುತ್ತೇವೆಂದು ಒಂದು ಕರಪತ್ರವನ್ನು ಮುದ್ರಣ ಮಾಡಿದ್ದರು. ಆದರ ಪ್ರಕಾರ ಕೆಲವು ರೈತರು ಅಲ್ಲಿ ಚರ್ಚೆ ಮಾಡುವುದಕ್ಕೆ ಕುಳಿತಿದ್ದಂತಹ

ಸಂದರ್ಭದಲ್ಲಿ, ಒಂದು ಗುಂಪು ನೇರವಾಗಿ ವಿದ್ಯುತ್ ಕಛೇರಿಗೆ ನುಗ್ಗಿ ಅಲ್ಲಿದ್ದಂತಹ ಜೀಪನ್ನು ಸುಡುವುದರ ಜೊತೆಗೆ ರೈತರ ಸುಮಾರು ದಾಖಲಾತಿಗಳು ಏನು ಇತ್ತು, ಅದನ್ನು ಬೀದಿಯೊಳಗೆ, ರಸ್ತೆಯೊಳಗೆ ತಂದು ಹಾಕಿ ಎಲ್ಲಾ ದಾಖಲಾತಿಗಳನ್ನು ಸುಟ್ಟು ಹಾಕಿದ್ದಾರೆ. ಈ ಒಂದು ಸಂದರ್ಭದಲ್ಲಿ ಆ ಭಾಗದಲ್ಲಿ ಇದ್ದಂಥ ನಮ್ಮ ಕರ್ನಾಟಕ ಮಿಲ್ಕ್ ಫೆಡರೇಷನ್ ಅಧ್ಯಕ್ಷರು ಆ ಒಂದು ಕೆ.ಇ.ಬಿ. ಕಛೇರಿಯಿಂದ ಸ್ವಲ್ಪವೇ ದೂರದಲ್ಲಿ ಇದ್ದ ಬಿ.ಡಿ.ಓ. ಆಫೀಸ್‌ನಲ್ಲಿ ರೈತರ ಜೊತೆಗೆ ಇದ್ದರು. ಆದರೆ ಅವರಿಗೂ ಈ ಒಂದು ಸಭೆಗೂ ಯಾವುದೇ ಸಂಬಂಧ ಇಲ್ಲ. ಡಾ|| ಜೀವರಾಜ್ ಆಳ್ವ ಅವರು ಅವರನ್ನು ಏಕೆ ಬಂಧನ ಮಾಡಲಿಲ್ಲ ಎಂದು ಹೇಳಿದ್ದಾರೆ. ಆದರೆ 14ನೇ ತಾರೀಖು ಪತ್ರಿಕೆಯಲ್ಲಿ ಬಂದ ಪ್ರಕಾರ ಆ ಒಂದು ಕೆ.ಇ.ಬಿ. ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಹಾಗೂ ಕೆಎಂಎಫ್‌ನ ಅಧ್ಯಕ್ಷರು ಸೇರಿ ಈ ಘಟನೆ ನಡೆದಂಥ ಸ್ಥಳಕ್ಕೆ ಜಿಲ್ಲಾ ಪೋಲೀಸ್ ಅಧಿಕಾರಿಗಳು ಮೂರು ಜನ ಒಟ್ಟಿಗೆ ಹೋಗಿ ಘಟನೆ ನಡೆದ ನಂತರ ಅಲ್ಲಿ ಸಾಂತ್ವನ ಮಾಡತಕ್ಕಂಥ, ಮತ್ತು ಸಮಾಧಾನ ಮಾಡತಕ್ಕಕಂಥ ಕೆಲಸವನ್ನು ಮಾಡಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಒಂದು ಘಟನೆ ನಡೆದಂಥ ಕೆ.ಇ.ಬಿ. ಕಛೇರಿಯ ಎದುರುಮುಖವಾಗಿರತಕ್ಕಂಥ ನಮ್ಮ ತಾಲ್ಲೂಕಿನಲ್ಲಿರತಕ್ಕಂಥ ಮುನ್ಸೀಫ್ ನ್ಯಾಯಾಲಯದಲ್ಲಿ ಆ ಒಂದು ಘಟನೆಗೆ ಸಂಬಂಧಿಸಿದ ದಾಖಲಾತಿಗಳನ್ನು ಸುಡತಕ್ಕ, ಜೀಪನ್ನು ಸುಡತಕ್ಕ ಸಂದರ್ಭದಲ್ಲಿ ಏನು ಒಂದು ಮೊಕದ್ದಮೆಯನ್ನು ವಿಚಾರಣೆ ಮಾಡುತ್ತಾ ಇದ್ದಂತಹ ನ್ಯಾಯಾಧೀಶರು ಆ ಮೊಕದ್ದಮೆಯನ್ನು ತಡೆ ಮಾಡಿ ಅಲ್ಲಿದ್ದಂಥ ಪೋಲೀಸ್ ಸಿಬ್ಬಂದಿಯನ್ನು ಕರೆದು ಮೊದಲು ಹೋಗಿ ನೀವು ಆ ಕಛೇರಿಯಲ್ಲಿ ನಡೆಯುತ್ತಿರತಕ್ಕಂಥ ದಾಂಧಲೆಯನ್ನು ತಡೆ ಮಾಡಿಸಿ ಎಂದು ಹೇಳಿ ಅವರೇ ಸ್ವತಃ ಕಳಿಸಿದ್ದು, ಘಟನೆಯನ್ನು ಹೊರಗಡೆ ನಿಂತು ಕಣ್ಣಾರೆ ಕಂಡಿದ್ದಾರೆ. ಆ ಒಂದು ಕಾರಣಕ್ಕಾಗಿ 13ನೇ ತಾರೀಖು ನಡೆದ ಘಟನೆಗೆ ಅಂದು ಸಂಜೆ ಕೆಲವು ರೈತರನ್ನು ಬಂಧಿಸಲಾಗಿದೆ. ಇದರಲ್ಲಿ ಪಕ್ಷಪಾತ ಇಲ್ಲ. ಕಾಂಗ್ರೆಸ್ ಪಕ್ಷದ ರೈತರು ಕೂಡ ಈ ಒಂದು ಬಂಧನದಲ್ಲಿ ಒಳಗಾಗಿದ್ದಾರೆ. ಇದರಲ್ಲಿ ಕಾಂಗ್ರೆಸ್‌ನವರು ಸೇರಿಕೊಂಡು ಹೆಸರುಗಳನ್ನು ಕೊಟ್ಟು ಬರೀ ಜನತಾ ದಳವನ್ನು ಬಂಧನ ಮಾಡಿಸಿದ್ದಾರೆಂದು ಏನು ಹೇಳಿಕೆ ಕೊಟ್ಟಿದ್ದಾರೆ, ಅದು ಸತ್ಯಕ್ಕೆ ದೂರವಾದಂತಹ ಒಂದು ಅಂಶ. ಈ ಬಂಧನ ಮಾಡಿದಂತಹ ಪಟ್ಟಿಯಲ್ಲಿ ಎಲ್ಲಾ ಪಕ್ಷದ ರೈತರು ಇದ್ದಾರೆ. ಕಾಂಗ್ರೆಸ್ ಪಕ್ಷದ ರೈತರು, ಜನತಾದಳದವರೂ, ಬೇರೆ ಪಕ್ಷದ ರೈತರೂ ಇದ್ದಾರೆ. ವಿದ್ಯುತ್ ಸಮಸ್ಯೆ ಬರೀ ಜನತಾ ದಳದವರಿಗೆ ಇರುವುದಿಲ್ಲ, ಕಾಂಗ್ರೆಸ್‌ನವರಿಗೂ ಇರುತ್ತದೆ. ವಿದ್ಯುತ್ ಎಂದರೆ ಎಲ್ಲಾ ರೈತರಿಗೂ ಕೂಡ ಸೇರುತ್ತದೆ. ಈ ಒಂದು ಘಟನೆಯ ಹಿನ್ನೆಲೆಯಲ್ಲಿ ನಮ್ಮ ರಾಜ್ಯದಲ್ಲಿ ಅತೀ ಹೆಚ್ಚಿನ ಪಂಪುಸೆಟ್ಟುಗಳನ್ನು ನೀರಾವರಿ ಕೊಳವೆ ಬಾವಿಗಳನ್ನು ಹೊಂದಿರತಕ್ಕಂಥದ್ದು ನನ್ನ ದೇವನಹಳ್ಳಿ ಕ್ಷೇತ್ರ. ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳು 5ನೇ ತಾರೀಖು ಜನವರಿ, ನಮಗೆ ಏನು 12.5 ಮೆಗಾವ್ಯಾಟ್ ಟ್ರಾನ್ಸ್‌ಫಾರ್ಮರ್ ಬೇಕಾಗಿತ್ತು ಅದು ಮತ್ತು 8 ಮೆಗಾವ್ಯಾಟ್ಸ್‌ನ ಟ್ರಾನ್ಸ್‌ಫಾರ್ಮರ್ ಎರಡೂ ಟ್ರಾನ್ಸ್‌ಫಾರ್ಮರ್‌ಗಳನ್ನು ನಮಗೆ ಮಂಜೂರು ಮಾಡಿದ್ದು, ಕೆಇಬಿ ಅಧ್ಯಕ್ಷರವರು ಮತ್ತು ಟೆಕ್ನಿಕಲ್ ಮೆಂಬರ್ ಅವರು ಅದನ್ನು ಒದಗಿಸಿದಂತಹ ಕಾರ್ಯವನ್ನು ಮತ್ತು ಆ ಟ್ರಾನ್ಸ್‌ಫಾರ್ಮರ್ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಆದೇಶವನ್ನು ಕೊಟ್ಟಿದ್ದು, ಈ ಕೆಲಸ ಪ್ರಾರಂಭ ಆಗುತ್ತದೆ ಎಂದು ಅನೇಕ ಸಂದರ್ಭದಲ್ಲಿ ರೈತರಿಗೆ ನಾನು ಮನವಿ ಮಾಡಿದರೂ ಸಹ ತಮ್ಮ ನೋವನ್ನು, ಆಕ್ರೋಶವನ್ನು ಈ ರೀತಿಯಲ್ಲಿ ತೀರಿಸಿಕೊಂಡಿದ್ದಾರೆ ಎಂದು ಹೇಳುತ್ತಾ ಈ ಒಂದು ಕೆಲಸವನ್ನು ವಿದ್ಯುತ್ ಇಲಾಖೆಯವರು ಹಾಗೂ ಮಾನ್ಯ ಮುಖ್ಯಮಂತ್ರಿಯವರು ಮಾಡಿಕೊಡಬೇಕೆಂದು ಹೇಳುತ್ತೇನೆ. ಬೆಳಿಗ್ಗೆ ಏನು ಒಂದು ಚರ್ಚೆ ಮಾಡಿದ್ದಾರೆ ಆ ಸಂದರ್ಭದಲ್ಲಿ ನಾನು ಇರಲಿಲ್ಲ, ಅವರು ಏನು ಆಪಾದನೆಯನ್ನು ವಿರೋಧ ಪಕ್ಷದವರು ಮಾಡಿದ್ದಾರೆ ಅದು ಸ್ವಲ್ಪ ಮಟ್ಟಿಗೆ ಸತ್ಯಕ್ಕೆ ದೂರವಾದುದು ಎಂದು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ಈ ವಿದ್ಯುತ್ ಅಭಾವದ ಬಗ್ಗೆ ಸದನದಲ್ಲಿ ನಿರಂತರವಾದಂಥ ಚರ್ಚೆ ನಡೆದಿದೆ. ಹಿಂದೆ ಸಂಸದೀಯ ಸಚಿವರಾಗಿದ್ದಂತಹ ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾರೆ. ಅವರು ಈ ಸದನಕ್ಕೆ ಒಂದು ಭರವಸೆಯನ್ನು ಕೊಟ್ಟಿದ್ದರು. ಎಲ್ಲಾ ರೈತರ ಮುಖಂಡರು ಹಾಗೂ ವಿರೋಧ ಪಕ್ಷದ ಮುಖಂಡರನ್ನು ಕರೆದು ಮಾತನಾಡಿ ವಿದ್ಯುತ್ ಸಮಸ್ಯೆ ಬಗ್ಗೆ ಮಾತನಾಡೋಣ, ಏನು ಮಾಡೋಣ ಎಂದು ಹೇಳಿಕೊಟ್ಟಂತಹ ಭರವಸೆ ಏನಾಯಿತೋ ಗೊತ್ತಾಗಲಿಲ್ಲ, ಯಾರನ್ನೂ ಕರೆಯಲಿಲ್ಲ, ಅವರು ಮಾತನಾಡಲಿಕ್ಕೆ ಆಗಲಿಲ್ಲ ಎಂದು ನನಗನಿಸುತ್ತದೆ. ಈಗಲಾದರೂ ಅವರು ಈ ಒಂದು ಪ್ರಯತ್ನ ಮಾಡಲಿ, ಮಾಡುವುದರಿಂದ ಒಳ್ಳೆಯದಾಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ವಿದ್ಯುಚ್ಛಕ್ತಿ ಮಂಡಲಿಯು 10 ವರ್ಷದಲ್ಲಿ ನಡೆಸಿರತಕ್ಕಂಥ ಆಡಳಿತ, ಬಗ್ಗೆ ಎಷ್ಟು ವಿಚಾರಗಳು ನಡೆದಿದೆ ಎನ್ನುವುದರ ಬಗ್ಗೆ ನ್ಯಾಯಾಂಗ ತನಿಖೆಯಾಗತಕ್ಕಂಥದ್ದು ಒಳ್ಳೆಯದು. ವಿದ್ಯುಚ್ಛಕ್ತಿ ಮಂಡಳಿಗೆ, ನೀವು ಹೊಸದಾಗಿ ಮುಖ್ಯಮಂತ್ರಿಗಳಾಗಿದ್ದೀರಿ, ಈ ವಿದ್ಯುಚ್ಛಕ್ತಿ ಮಂಡಲಿಯಿಂದಲೇ ಅಪಾರವಾದಂತಹ ಕೆಟ್ಟ ಹೆಸರು ಬರುವಂತಹ ಪರಿಸ್ಥಿತಿ ಇದೆ. ಇದಕ್ಕೆ ಹೊಸದಾಗಿ ಕಾಯಕಲ್ಪ ಮಾಡುವುದಕ್ಕೆ ಏನಾಗಬೇಕು ಎಂಬ ಬಗ್ಗೆ ಒಂದು ನಿರ್ಧಿಷ್ಟವಾದಂತಹ ತೀರ್ಮಾನಕ್ಕೆ ತಾವು ತಮ್ಮ ತಾಂತ್ರಿಕ ವರ್ಗದವರು ಸೇರಿ ಮಾಡಬೇಕಾದಂತಹ ಕೆಲಸವಾಗಿದೆ. ಇದೂ ಅಲ್ಲದೆ, ಸಮಗ್ರವಾಗಿ ಒಂದು ಶ್ವೇತ ಪತ್ರವನ್ನು ಹೊರಡಿಸಿ ನಮಗೆ ವಿದ್ಯುಚ್ಛಕ್ತಿ ಎಷ್ಟು ಉತ್ಪಾದನೆಯಾಗುತ್ತದೆ, ನಾವು ಅದರಲ್ಲಿ ಎಷ್ಟು ಖರ್ಚು ಮಾಡುತ್ತಿದ್ದೇವೆ. ಎಷ್ಟು ಬೇಡಿಕೆ ಇದೆ, ಜೊತೆಗೆ ಕಾರ್ಖಾನೆಯವರಿಗೆ ಮತ್ತು ಮಿಲ್‌ನವರಿಗೆ ಎಷ್ಟು ಕೊಡುತ್ತಿದ್ದೇವೆ, ರೈತರಿಗೆ ಎಷ್ಟು ಕೊಡುತ್ತಿದ್ದೇವೆ ಈ ಪರಿಸ್ಥಿತಿಯ ಸಮಗ್ರ ಚಿತ್ರವನ್ನೊಳಗೊಂಡ ಒಂದು ಶ್ವೇತ ಪತ್ರವನ್ನು ಹೊರಡಿಸಬೇಕೆಂದು ನಾನು ತಮ್ಮ ಮೂಲಕ ಮುಖ್ಯಮಂತ್ರಿಗಳನ್ನು ಆಗ್ರಹಪಡಿಸುತ್ತೇನೆ. ಇದರಲ್ಲಿ ಯಾವ ಪಕ್ಷ ಅನ್ನುವುದು ಇಲ್ಲ. ರಾಜ್ಯದ ಜನತೆಗೆ ಇದರ ಒಂದು ಚಿತ್ರಗೊತ್ತಾಗಲಿ. ಸುಮಾರು ಮೂರು ಕೋಟಿ ರೂಪಾಯಿಗಳ ಮೇಲೆ ಅನೇಕ ಕಾರ್ಖಾನೆಗಳವರು ಬಾಕಿಕೊಡಬೇಕಾಗುತ್ತದೆ. ಇದನ್ನು ವಸೂಲಿ ಮಾಡತಕ್ಕ ಮಾರ್ಗ ಏನು ಎನ್ನುವುದಕ್ಕೆ ಇದುವರೆಗೂ ಅದಕ್ಕೆ ಸರಿಯಾದ ಸೂತ್ರವನ್ನು ಅನುಸರಿಸಿಲ್ಲ. ಇದುವರೆಗೂ ಯಾವ ಕಾರಣದಿಂದ ಹಣವನ್ನು ಉಳಿಸಿಕೊಂಡಿದ್ದಾರೆ ಅದನ್ನು ವಸೂಲು ಮಾಡತಕ್ಕ ವ್ಯವಸ್ಥೆ ಏನು ಎಂಬುದರ ಬಗ್ಗೆ ಇದುವರೆಗೂ ಮಾತಿಲ್ಲ. ಪ್ರತಿಸಾರಿಯೂ ವಿದ್ಯುಚ್ಛಕ್ತಿ ಮಂಡಲಿ ನಷ್ಟವನ್ನು ಅನುಭವಿಸುತ್ತಿದೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆಯೇ ಹೊರತು ಹಣವನ್ನು ವಸೂಲು ಮಾಡತಕ್ಕ ವ್ಯವಸ್ಥೆ ಇದುವರೆಗೂ ಆಗಿಲ್ಲ. ಈಗಿನ ಅಧ್ಯಕ್ಷರು ಇರ್ನಿರಾಯ ಐ.ಎ.ಎಸ್, ಇವರು ಅಲ್ಲಿದ್ದಾರೆ. ಅದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಒಳ್ಳೆಯ ದಕ್ಷ ಅಧಿಕಾರಿಯನ್ನು ಅಲ್ಲಿ ಅಧ್ಯಕ್ಷರಾಗಿ ಮಾಡಿದ್ದೀರಿ. ಆದರೆ ಅವರೊಬ್ಬರು ದಕ್ಷ ಅಧಿಕಾರಿಯಾದರೆ ಆಗುವುದಿಲ್ಲ. ಇಡೀ ಸಮಗ್ರ ವಿದ್ಯುಚ್ಛಕ್ತಿ ಮಂಡಲಿಗೆ ಒಂದು ಹೊಸ ಚೈತನ್ಯ ಬರಬೇಕಾದರೆ ಅವರ ಸುತ್ತಮುತ್ತಲು ಇರತಕ್ಕದ್ದನ್ನು ನೋಡಬೇಕು. ಈಗ ತಾನೆ ಅವರು ಬಂದು ಒಂದೆರಡು ತಿಂಗಳಾಗಿರಬೇಕು. ಈ ಮಂಡಲಿಗೆ ಹೊಸ ಚೈತನ್ಯ ಬರಬೇಕಾಗುತ್ತದೆ. ನಾನು ಅನೇಕ ಬಾರಿ ಹೇಳಿದ್ದೇನೆ. ಚಾಮರಾಜನಗರ ತಾಲ್ಲೂಕಿನಲ್ಲಿ ಪ್ರತಿಸಾರಿಯೂ ಪ್ರತಿವರ್ಷ ಕನಿಷ್ಠ 1-2 ಕೋಟಿ ರೂಪಾಯಿಯ ಬೆಳೆ ವಿದ್ಯುಚ್ಛಕ್ತಿಯ ಅಭಾವದಿಂದ ನಾಶವಾಗುತ್ತಿದೆ. ಇದು ಕೇವಲ ಒಂದು ತಾಲ್ಲೂಕಿನಲ್ಲಾಗಿಲ್ಲ. ಇವತ್ತು ಬೆಳಿಗ್ಗೆ ದೇವನಹಳ್ಳಿಯ ಬಗ್ಗೆ ಮಾತನಾಡಿದ್ದೇವೆ. ದೇವನಹಳ್ಳಿಯಲ್ಲಿ ಒಂದೇ ಕಡೆ ಅಲ್ಲ. ಈ ಆಕ್ರೋಶ ಇಡೀ ಕರ್ನಾಟಕದ ಪ್ರತಿ ತಾಲ್ಲೂಕಿನಲ್ಲಿ ಬಹುತೇಕವಾಗಿ ಇದೆ. ಈ ಆಕ್ರೋಶವನ್ನು ತಪ್ಪಿಸಬೇಕಾದರೆ ಸರ್ಕಾರ ಪರಿಣಾಮಕಾರಿಯಾದಂಥ ಕ್ರಮ ಕೈಗೊಳ್ಳಲಿಲ್ಲ ಅಂದರೆ ಬಹಳ ಕಷ್ಟವಾಗುತ್ತದೆ. ಕಂಬ ಇದೆ, ತಂತಿ, ಇದೆ, ವಿದ್ಯುಚ್ಛಕ್ತಿ ಇದೆ ಆದರೆ ಬೆಳಕು ಇಲ್ಲ, ಈ ಪರಿಸ್ಥಿತಿ ಅನೇಕ ತಾಲ್ಲೂಕಿನಲ್ಲಿ ಉದ್ಭವವಾಗಿದೆ. ಇದನ್ನು ಸಮಗ್ರವಾಗಿ ಅಧ್ಯಯನಮಾಡಿ ಸರಿಪಡಿಸದೇ

ಇದ್ದರೆ ಸರಿಯಾಗುವುದಿಲ್ಲ. ಯಾವುದೋ ಒಂದು ಪಕ್ಷದ ಬಗ್ಗೆ ಮಾತನಾಡುತ್ತೇವೆಂದು ಅಲ್ಲ. ಕಾಂಗ್ರೆಸ್ ಅಥವಾ ಜನತಾದಳದವರು, ಇನ್ನೊಬ್ಬರು, ನಾವು ಮಾತನಾಡುತ್ತೇವೆಂದು ಅಲ್ಲ. ಇದು ಸಮಗ್ರವಾಗಿ ಇಡೀ ಕರ್ನಾಟಕಕ್ಕೆ ಬಂದಿರತಕ್ಕ ಒಂದು ಪಿಡುಗು. ಈ ಪಿಡುಗನ್ನು ವಿದ್ಯುಚ್ಛಕ್ತಿ ಮಂಡಲಿಯಿಂದ ತಪ್ಪಿಸಲಿಲ್ಲ ಎಂದು ಹೇಳಿದರೆ ನಿಜವಾಗಿಯೂ ಅತ್ಯಂತ ಅಪಾಯಕ್ಕೆ ನಾವು ಸಿಕ್ಕುತ್ತೇವೆ. ಈ ಅಪಾಯವನ್ನು ತಪ್ಪಿಸಬೇಕಾದರೆ ಮಾನ್ಯ ಮುಖ್ಯಮಂತ್ರಿಯವರು ಏನೊಂದು ನಾಗಾಲೋಟದಲ್ಲಿ ಹೊರಟಿದ್ದಾರೆ ತಮ್ಮ ಆಡಳಿತವನ್ನು ಏನು ಸರಿಪಡಿಸುತ್ತೇವೆಂದು ಹೊರಟಿದ್ದಾರೆ, ಆ ಆಡಳಿತದಲ್ಲಿ ಪ್ರಮುಖವಾದ ಅಂಗ ವಿದ್ಯುಚ್ಛಕ್ತಿ ಮಂಡಳಿ. ಈ ವಿದ್ಯುಚ್ಛಕ್ತಿ ಮಂಡಳಿಯ ಆಡಳಿತವನ್ನು ಸಮಗ್ರವಾಗಿ ಅವರು ಸರಿಪಡಿಸಲಿಲ್ಲ ಅಂತ ಹೇಳಿದರೆ ನಿಜವಾಗಿಯೂ ಬಹಳ ಕಷ್ಟವಾಗುತ್ತದೆ. ರೈತರದಂತು ಕಣ್ಣೀರಿನ ಕಥೆ. ನೀರಾವರಿಗೆ ಕೊಡತಕ್ಕಂಥ ವಿದ್ಯುಚ್ಛಕ್ತಿಯ ಕಾಲವನ್ನು ನಿಗದಿಮಾಡಿ ಇಂತಹ ಕಾಲದಲ್ಲಿ ಕೊಡುತ್ತೇವೆ ಎಂದು ನಿಗದಿ ಮಾಡಿ. ಈ ರೈತ ಪಡತಕ್ಕ ಕಷ್ಟ ಕಾರ್ಖಾನೆಯವರಾಗಲಿ, ಅಥವಾ ಮಿಲ್ ಮಾಲೀಕರುಗಳಾಗಲಿ ಪಡುವುದಿಲ್ಲ. ಅವರಿಗೆ ಗಂಭೀರವಾಗಿ ದೊಡ್ಡ ರೆಡ್ ಕಾರ್ಪೆಟ್ ಹಾಸಿ ವಿದ್ಯುಚ್ಛಕ್ತಿಯನ್ನು ಅವರ ಮನೆಯ ಹತ್ತಿರ ನಾವು ಕೊಡುತ್ತಿದ್ದೇವೆ ಇವತ್ತು ಈ ರೈತನಿಗೆ ಇರತಕ್ಕ ತೊಂದರೆಯ ಬಗ್ಗೆ ಸಮಗ್ರವಾಗಿ ಚಿಂತನೆ ನಡೆಯಲಿಲ್ಲ ಎಂದು ಹೇಳಿದರೆ ಪರಿಸ್ಥಿತಿ ಬೆಂಕಿಯ ಜ್ವಾಲೆಯಾಗಿ ಇಡೀ ಕರ್ನಾಟಕದಲ್ಲಿ ಆಗುತ್ತದೆ. ಇವತ್ತು ದೇವನಹಳ್ಳಿಯಲ್ಲಿ ಆಗಿದೆ, ನಾಳೆ ಇನ್ನೊಂದು ಜಿಲ್ಲೆಗೆ ಬರುತ್ತದೆ. ನಾಳೆ ಇಡೀ ರಾಜ್ಯಕ್ಕೂ ಆವರಿಸಿ ಇದರ ಪರಿಸ್ಥಿತಿ ಅತ್ಯಂತ ವಿಕೋಪಕ್ಕೆ ಹೋಗುತ್ತದೆ ಎನ್ನತಕ್ಕ ಮಾತನ್ನು ನಾನು ತಮಗೆ ಹೇಳುತ್ತಿದ್ದೇನೆ. ತಾವು ಇದರ ಬಗ್ಗೆ ಪರಿಣಿತರ ಸಭೆಯನ್ನು ಕರೆಯಿರಿ. ಒಂದು ಸಭೆಯನ್ನು ತಾವು ಕರೆದಿದ್ದೀರಿ ಎಂದು ನನಗೆ ಅನ್ನಿಸುತ್ತದೆ.

ಶ್ರೀ ಸಿ. ಬೈರೇಗೌಡ:- ಅವರು ಕಾನೂನು ಮತ್ತು ಸಂಸದೀಯ ಮಂತ್ರಿಗಳಾಗಿದ್ದಾಗ ಕರೆದು ಮಾತನಾಡುತ್ತೇವೆಂದು ಹೇಳಿದ್ದರು ಅಷ್ಟೆ, ಸಭೆಯನ್ನು ಕರೆಯಲಿಲ್ಲ ಏನೂ ಇಲ್ಲ. ರಾಮಪ್ಪನವರನ್ನು ಘೆರಾವು ಮಾಡಿದ್ದನ್ನು ಸಭೆ ಎಂದು ಅಂದುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ರಾಮಪ್ಪನವರು ವಿದ್ಯುಚ್ಛಕ್ತಿ ಮಂತ್ರಿಗಳಾಗಿದ್ದಾಗ ಅವರ ರೂಮಿಗೆ ಹೋಗಿ ಚರ್ಚೆ ಮಾಡಿದ್ದೆವು. ತಾವು ಪ್ರಾಮಾಣಿಕತೆಯಿಂದ ಒಂದು ಸಭೆಯನ್ನು ಕರೆಯಿರಿ. ಇದರ ಬಗ್ಗೆ ವ್ಯವಸ್ಥಿತವಾಗಿ ಇಡೀ ರಾಜ್ಯದ ಜನತೆಗೆ ನಮ್ಮ ಬೈರೇಗೌಡರು ಹೇಳಿದ ರೀತಿಯಲ್ಲಿ ದುಡ್ಡೇನು ವಸೂಲು ಮಾಡಬೇಕಾಗಿಲ್ಲ. ಜನಗಳಿಂದ ವಸೂಲು ಮಾಡದಿದ್ದರೂ ಚಿಂತೆಯಿಲ್ಲ. ಆದರೆ ವಿದ್ಯುಚ್ಛಕ್ತಿ ಮಾತ್ರ ಕಾಲಕ್ಕೆ ತಕ್ಕಂತೆ ನೀವು ಕೊಡುವುದನ್ನು ಕಲಿತುಕೊಂಡರೆ ಸಾಕಾಗುತ್ತದೆ. ಅದನ್ನು ಎಷ್ಟರಮಟ್ಟಿಗೆ ಸರಿಪಡಿಸುತ್ತೀರೋ ನನಗೆ ಗೊತ್ತಿಲ್ಲ. ನಿಮಗೆ ಇರತಕ್ಕ ಬೇಡಿಕೆ ಎಷ್ಟು ನಿಮ್ಮ ಉತ್ಪಾದನೆ ಎಷ್ಟು ಇದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಚಿಂತೆಯನ್ನು ಮಾಡಿ ಮುಂದೆ ಘೋಷಣೆ ಮಾಡಿ ನಾವು ಈ ವರ್ಷ 70 ಸಾವಿರ ಐ.ಪಿ. ಸೆಟ್ಟುಗಳಿಗೆ ವಿದ್ಯುತ್ ಕೊಡುತ್ತಿದ್ದೇವೆ, 80 ಸಾವಿರ ಕೊಡುತ್ತೇವೆಂದು ಘೋಷಣೆ ಮಾಡುವುದು ಬೇಡ. ಒಂದು ಪರಿಣಾಮಕಾರಿಯಾದಂಥ ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕೆಂದು ಮನವಿ ಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

8.10 ಪಿ.ಎಂ.

† ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ):- ಮಾನ್ಯ ಉಪಾಧ್ಯಕ್ಷಿಣಿಯವರೆ, ಕೆಇಬಿ ವಿಚಾರದಲ್ಲಿ ಅನೇಕ ಮಾನ್ಯ ಹಿರಿಯ ಸದಸ್ಯ ಸ್ನೇಹಿತರುಗಳು ಮಾತನಾಡಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಆದರೂ ಕೂಡ ಈ ಕೆಇಬಿ ವ್ಯವಸ್ಥೆ ಬಹಳ ಕೆಟ್ಟದಾಗಿದ್ದು, ರೈತರನ್ನು ಬಹಳ ದೊಡ್ಡ ಸಂಕಟಕ್ಕೆ ಸಿಲುಕಿಸುವಂಥ ವ್ಯವಸ್ಥೆಯಾಗಿದೆ. ನಿಜವಾಗಿಯೂ ರೈತ ಏಕೆ ಹುಟ್ಟುತ್ತಾನೆ, ಏಕೆ ಬದುಕುತ್ತಾನೆ? ಎಂದು ನನಗನಿಸುತ್ತದೆ. ರೈತರಿಗೆ ಇದು ಶಾಪವಾಗಿ ಇರಬಹುದು.

ಕಾರಣವೇನೆಂದರೆ, ಈ ವ್ಯವಸ್ಥೆ ಬಗ್ಗೆ ನಾನು ಯಾವುದೇ ಅಧಿಕಾರಿ ಮೇಲೆ ವೈಯಕ್ತಿಕವಾಗಿ ಅಥವಾ ಪರೋಕ್ಷವಾಗಿ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಕೆಇಬಿಯಲ್ಲಿ ಕೆಲವು ಒಳ್ಳೆಯ ದಕ್ಷ ಅಧಿಕಾರಿಗಳಿದ್ದಾರೆ, ಅಷ್ಟೇ ಕೆಳಮಟ್ಟದ ಹಾಗೂ ಅಷ್ಟೇ ಕೀಳು ಮನೋಭಾವದ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಈ ವ್ಯವಸ್ಥೆಯನ್ನು ಸರಿ ಮಾಡಬೇಕಾದರೆ ಬರೀ ಟ್ರಾನ್ಸ್‌ಫಾರ್ಮರ್‌ಗಳನ್ನು ಶಿಫ್ಟ್ ಮಾಡುವುದರಿಂದ ಸರಿಹೋಗಲಾರದು. ನನಗೆ ಜ್ಞಾಪಕವಿರುವಂತೆ ನನ್ನ ಊರಿನಲ್ಲಿ 1962ನೇ ಇಸವಿಯಲ್ಲಿ ಒಂದು ಟ್ರಾನ್ಸ್‌ಫಾರ್ಮರ್ ಹಾಕಿದ್ದು ಇದುವರೆವಿಗೂ ಸುಟ್ಟಿಲ್ಲ. ಆದರೆ, ಇತ್ತೀಚೆಗೆ ಸುಮಾರು 1–2 ವರ್ಷಗಳ ಹಿಂದೆ ಬಂದಿರತಕ್ಕಂಥ ಅನೇಕ ಟ್ರಾನ್ಸ್‌ಫಾರ್ಮರ್‌ಗಳನ್ನು ಬೆಳಿಗ್ಗೆ ಹಾಕಿದರೆ ಸಂಜೆ ಸುಟ್ಟುಹೋಗುತ್ತಿದೆ. ಇದಕ್ಕೆ ಕಾರಣವೇನು? ಇಲ್ಲಿ ಎಲ್ಲಿಯೋ ಒಂದು ಲೋಪವಿದೆ. ಈ ಲೋಪವನ್ನು ಕಂಡುಹಿಡಿದು ಸರಿಮಾಡುವಂಥ ಕೆಲಸ ಸರ್ಕಾರದಿಂದ ಆಗಬೇಕಾಗಿದೆ, ಅಲ್ಲದೆ, ಸರ್ಕಾರ ಅವರ ಬಗ್ಗೆ ನಿಗಾವಹಿಸದ ಹೊರತು ಕೆಲಸ ಮಾಡುವುದಕ್ಕಾಗುವುದಿಲ್ಲ. ಕೆಇಬಿಯಲ್ಲಿ ಅನೇಕ ಅವ್ಯವಸ್ಥೆಗಳೂ ಕೂಡ ಇವೆ. ಉದಾಹರಣೆಗೆ, ಕಂಟ್ರಾಕ್ಟ್ ಸಿಸ್ಟಮ್ ಎಂದು ಏನಿದೆ, ಅದನ್ನು ಮೊದಲು ರದ್ದುಪಡಿಸುವಂಥ ಕೆಲಸವಾಗಬೇಕು. ಮೊದಲು ಕೆಇಬಿಯವರು ಕ್ವಾಲಿಟಿಯನ್ನು ಮೇನ್‌ಟೇನ್ ಮಾಡುತ್ತಿದ್ದರು, ಕಂಬವನ್ನು ನೆಟ್ಟು ಲೈನನ್ನು ಎಳೆಯುವ ಅಥವಾ ವೈರ್ ಅನ್ನು ಅಥವಾ ಟ್ರಾನ್ಸ್‌ಫಾರ್ಮರ್ ಮತ್ತು ಲೈಟ್‌ನಿಂಗ್ ಅರೆಸ್ಟರ್‌ಗಳನ್ನು ಹಾಕುವ ಕೆಲಸ ಬಹಳ ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ನಡೆಯುತ್ತಿತ್ತು. ಅನೇಕರು ಹೆಸರಿಗೆ ಮಾತ್ರ ಸಹಿ ಹಾಕಿ ಕಂಟ್ರಾಕ್ಟ್ ಸಿಸ್ಟಮ್ ಕೊಟ್ಟಿದ್ದಾರೆ. ತಂತಿ ಎಳೆಯಬೇಕಾದರೆ ರೈತನೇ ಕಂಬವನ್ನು ನೆಟ್ಟುಕೊಳ್ಳಬೇಕು. 5–6 ಅಡಿಗಳಷ್ಟು ಆಳದಲ್ಲಿ ನೆಡಬೇಕಾದ ಕಂಬವನ್ನು 2–3 ಅಡಿಗಳಷ್ಟು ನೆಟ್ಟುಕೊಳ್ಳುತ್ತಾನೆ. ಅಲ್ಲದೆ, ಕೆಇಬಿ ಸಿಬ್ಬಂದಿಗಳು ಲೈನ್ ಅನ್ನು ಸರಿಯಾಗಿ ಎಳೆಯುವಂಥ ಕೆಲಸ ಮಾಡುವುದಿಲ್ಲ. ಎಲೆಕ್ಟ್ರಿಕ್ ಲೈನ್ ಮೇಲೆ ಮರ ಬೀಳುತ್ತಿರುತ್ತದೆ. ಹಸಿ ಮರ ಕತ್ತರಿಸಿ ಎಂದು ಹೇಳಿದರೆ ಯಾರೂ ಕತ್ತರಿಸುವುದಿಲ್ಲ. ಅವರು ಇವೊತ್ತು ಯಾವುದೇ ಲೈನಿನಲ್ಲಿ ಕೆಲಸ ಮಾಡುತ್ತಿಲ್ಲ. ಲೈನ್ ಜಂಪ್ ಆಗಿದೆ, ಎಲ್ಲಿ ಸರಿಮಾಡಬೇಕು ಎಂಬ ಕೆಲಸವನ್ನು ಸಹ ಮಾಡುತ್ತಿಲ್ಲ. ಇತ್ತೀಚೆಗೆ ತಂದು ಹಾಕಿದಂಥ ಟ್ರಾನ್ಸ್‌ಫಾರ್ಮರ್‌ಗಳು ಸುಡಬೇಕಾದರೆ ಅನೇಕ ಲೋಪದೋಷಗಳಿವೆ. ಅನಂತರ, ಟ್ರಾನ್ಸ್‌ಫಾರ್ಮರ್‌ಗಳನ್ನು ಚೆಕ್ ಮಾಡಬೇಕಾದಂಥ ಜಾಗದಲ್ಲಿ ಪಿವಿಸಿಯವರದು ಒಂದು ವ್ಯವಸ್ಥೆ ಇತ್ತು. ಆದರೆ, ಇವೊತ್ತು ಚಿಕ್ಕ ಹುಡುಗನಿಂದ ಹಿಡಿದು ದೊಡ್ಡವರು, ಯಾವು ಬೇಕಾದರೂ ಫ್ಯೂಸ್ ಹಾಕುವುದು, ತೆಗೆಯುವುದು ನಡೆಯುತ್ತಿದೆ. ಅಲ್ಲದೆ, ಟ್ರಾನ್ಸ್‌ಫಾರ್ಮರ್ ಅನ್ನು ಬರಿ ವೈರಿನಲ್ಲಿ ಸುತ್ತತಕ್ಕಂಥ ವ್ಯವಸ್ಥೆ ಇದೆ. ಏತಕ್ಕೆ ಇದನ್ನು ತಮ್ಮ ಮುಂದೆ ಹೇಳುತ್ತಿದ್ದೇನೆಂದರೆ, ಕೆಇಬಿಯಲ್ಲಿ ಸುಮಾರು 15–20–25 ವರ್ಷಗಳಿಂದ ಒಂದೇ ಜಾಗದಲ್ಲಿ ಕೆಲಸ ಮಾಡುತ್ತಿರುವಂಥ ಅಧಿಕಾರಿಗಳಿದ್ದಾರೆ. ಇವರನ್ನು ಕನಿಷ್ಠ 5–10 ವರ್ಷಗಳ ಕಾಲ ಬೇರೆ ಕಡೆಗೆ ಶಿಫ್ಟ್ ಮಾಡುವಂಥ ಕೆಲಸವಾಗಬೇಕು. ಇವರಿಗೆ ಯಾವುದೇ ಲೈನ್‌ಮೆನ್ ಮೇಲೆ ಕಂಟ್ರೋಲ್ ಮಾಡುವ ಶಕ್ತಿ ಇಲ್ಲ. ರೈತರುಗಳೆಲ್ಲಾ ಒಂದಾದರೆ ಲೈನ್‌ಮೆನ್‌ಗಳೆಲ್ಲರೂ ಯೂನಿಯನ್ ಇದೆಯೆಂದು ತೋರಿಸುತ್ತಾರೆ. ಈ ಯೂನಿಯನ್ ಅನ್ನು ಕಿತ್ತುಹಾಕುವಂಥ ಕೆಲಸವಾಗಬೇಕು. ನಾನು ಆ ಯೂನಿಯನ್‌ಗೆ ವಿರೋಧ ಇಲ್ಲ. ಆ ಯೂನಿಯನ್‌ನಲ್ಲಿರತಕ್ಕಂಥ, ಅವರ ಯೋಗ್ಯತೆಗೆ ತಕ್ಕಂತೆ ಏನಾದರೂ ಅನ್ಯಾಯವಾದಾಗ ಹೋರಾಟ ಮಾಡಿ ನ್ಯಾಯ ಒದಗಿಸತಕ್ಕಂಥ ಕೆಲಸವಾಗಬೇಕು. ಆದರೆ, ಆ ಕೆಲಸ ಮಾಡದೆ ಬರೀ ಯೂನಿಯನ್ ಇದೆಯೆಂದರೆ ಅರ್ಥ ಎಲ್ಲಿದೆ? ಆದಕ್ಕೆ, ಕೆಇಬಿಯಲ್ಲಿ ಅನೇಕ ಲೋಪದೋಷಗಳಿವೆ. ಆ ವ್ಯವಸ್ಥೆಯನ್ನು ಮೇಲಿನಿಂದ ಕೆಳಗಿನವರೆವಿಗೂ ಸರಿಮಾಡತಕ್ಕ ಕೆಲಸವಾಗಬೇಕು. ಮತ್ತೆ ಈ ಕಂಟ್ರಾಕ್ಟ್ ಸಿಸ್ಟಮ್ ಬಗ್ಗೆ ನಾನು ಮೊದಲಿನಿಂದಲೂ ವಿರೋಧಿಸುತ್ತಿದ್ದೇನೆ. ಮೊದಲು ಗ್ಯಾಂಗ್‌ಮೆನ್ಸ್ ಎಂದು ಇದ್ದರು. ಲೇಬರ್ ಕಂಟ್ರಾಕ್ಟ್ ಅನ್ನು ಕಿತ್ತುಹಾಕಬೇಕು ಮತ್ತು ಯಾರಿಗೋ ಗುತ್ತಿಗೆ ಕೊಡತಕ್ಕಂಥ ಕೆಲಸವಾಗ ಕೂಡದು. ಅದು

ಕೆಇಬಿಯಿಂದಲೇ ನಡೆಯಬೇಕು. ಏಕೆಂದರೆ, ಗುತ್ತಿಗೆದಾರರ ಮೇಲೆ ಯಾವುದೇ ರೀತಿಯ ಒಂದು ಕಡಿವಾಣವಿರುವುದಿಲ್ಲ. ಗುತ್ತಿಗೆದಾರರ ಮೇಲೆ ನಾವು ಏನೇ ಕಂಟ್ರೋಲ್ ಮಾಡಿದರೂ ಕೂಡ ಸಾಧ್ಯವಾಗುವುದಿಲ್ಲ. ಒಬ್ಬ ಅಧಿಕಾರಿ ಮೇಲೆ ಕಂಟ್ರೋಲ್ ಇದ್ದರೆ ಸರ್ಕಾರಕ್ಕೂ ಒಂದು ಹಿಡಿತ ಸಿಗುತ್ತದೆ. ಆದುದರಿಂದ, ಈ ಒಂದು ಲೇಬರ್ ಕಂಟ್ರಾಕ್ಟ್ ಸಿಸ್ಟಂನ್ನು ಕಿತ್ತುಹಾಕಬೇಕು. ಕೆಇಬಿ ಇಲಾಖೆ ಆ ಕೆಲಸ ಮಾಡಬೇಕು. ಬಂಗಾರಪೇಟೆ ತಾಲ್ಲೂಕಿನಲ್ಲಿ 1991ರ ಏಪ್ರಿಲ್ ತಿಂಗಳಿನಲ್ಲಿ ಕೊಟ್ಟಿರುವ ಟ್ರಾನ್ಸ್‌ಫಾರ್ಮರ್ ಬಿಟ್ಟರೆ, ಇದುವರೆವಿಗೂ ಯಾವುದೇ ಟ್ರಾನ್ಸ್‌ಫಾರ್ಮರ್ ಕೊಟ್ಟಿಲ್ಲ. 1990ರಲ್ಲಿ ಟೆಕ್ನಿಕಲ್ ಕಮಿಟಿಯವರು ಕ್ಯಾಸಮಳ್ಳಿ ಮತ್ತು ಕಾಮಸಮುದ್ರಕ್ಕೆ ಬಂದು ಎಲ್ಲೆಲ್ಲಿ ಫೀಸಬಿಲಿಟಿ ಇದೆ, ಅಲ್ಲೆಲ್ಲಾ ಹೊಸ ಸ್ಟೇಷನ್‌ಗಳನ್ನು ಸ್ಥಾಪಿಸಬೇಕೆಂದು ಹೇಳಿದರೂ, ಇವೊತ್ತಿನವರೆವಿಗೂ ಸ್ಟೇಷನ್ ಆಗಿಲ್ಲ. ಅದಕ್ಕಾಗಿ 3 ಎಕರೆ 8 ಗುಂಟೆ ಜಮೀನು ಕೊಟ್ಟಿದ್ದೇವೆ. ಡೆಪ್ಯೂಟಿ ಕಮೀಷನರ್‌ರವರಿಗೆ 6-1 ನೋಟಿಫಿಕೇಷನ್ ಮಾಡಿಸಿಕೊಟ್ಟಿದ್ದೇವೆ. ಆದರೆ, ಇವೊತ್ತಿನವರೆವಿಗೂ ಆ ಕೆಲಸ ಆಗಿಲ್ಲ. ಆದುದರಿಂದ, ಈ ಕೆಲಸ ತುರ್ತಾಗಿ ಆಗಬೇಕು. ಅನಂತರ, ಒದಗಿಸಲಾಗಿರುವ ಟ್ರಾನ್ಸ್‌ಫಾರ್ಮರ್‌ಗಳು ಎಲ್ಲಿ ತಯಾರಾದವು? ಅವುಗಳಲ್ಲಿರುವ ಲೋಪದೋಷಗಳೇನು? ನನ್ನ ಕ್ಷೇತ್ರದಲ್ಲಿ ಸುಮಾರು 30 ವರ್ಷಗಳ ಹಿಂದೆ ಹಾಕಿರುವ ಟ್ರಾನ್ಸ್‌ಫಾರ್ಮರ್‌ಗಳು ಸುಡದಿರುವಾಗ, ಇತ್ತೀಚೆಗೆ ಹಾಕಿರುವ ಟ್ರಾನ್ಸ್‌ಫಾರ್ಮರ್‌ಗಳು ದಿನನಿತ್ಯ ಸುಡಬೇಕಾದರೆ ಕಾರಣವೇನು? ಟ್ರಾನ್ಸ್‌ಫಾರ್ಮರ್‌ಗಳು ಗುಣಮಟ್ಟದಿಂದ ಕೂಡಿವೆಯೇ ಎಂಬುದರ ಬಗ್ಗೆ ತನಿಖೆಯಾಗಬೇಕು. ಹಿಂದೆ ಅಧ್ಯಕ್ಷರಾಗಿದ್ದವರು ಅನೇಕ ಅವ್ಯವಹಾರಗಳನ್ನು ಮಾಡಿದ್ದು ಸಂಬಂಧಪಟ್ಟ ವರದಿ ಇವೊತ್ತು ಸರ್ಕಾರದ ಮುಂದಿದೆ. ಸದರೀ ಅಧ್ಯಕ್ಷರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಅಲ್ಲದೆ, ರಾಯಚೂರು ಥರ್ಮಲ್ ಕೇಂದ್ರದ ಬೂದಿ ಸಾಗಾಣಿಕೆ ವಿಚಾರದಲ್ಲಿ ಒಂದು ಹೇಳಿಕೆ ಕೂಡ ಕೊಟ್ಟಿದ್ದಾರೆ. ಆದುದರಿಂದ, ಈ ಕೆಇಬಿ ಇಲಾಖೆ ಒಳ್ಳೆಯ, ದಕ್ಷ ಅಧಿಕಾರಿಗಳಿಗೆ ಪ್ರೋತ್ಸಾಹ ಕೊಡತಕ್ಕಂಥ ಕೆಲಸವಾಗಬೇಕು, ಕೀಳು ಮನೋಭಾವದ ಕೆಳಮಟ್ಟದ ಅಧಿಕಾರಿಗಳನ್ನು ಕಿತ್ತೆಸೆಯತಕ್ಕಂಥ ಕೆಲಸವಾಗಬೇಕು. ಆ ಇಲಾಖೆಯಲ್ಲಿ 15-20 ವರ್ಷಗಳಿಂದ ಕೆಲಸ ಮಾಡುತ್ತಿರುವಂಥ ಲೈನ್‌ಮೆನ್‌ಗಳ ಮೇಲೆ ಕಂಟ್ರೋಲ್ ಮಾಡತಕ್ಕಂಥ ಕೆಲಸವಾಗಬೇಕು, ಲೇಬರ್ ಕಂಟ್ರಾಕ್ಟ್ ಅನ್ನು ರದ್ದುಮಾಡತಕ್ಕಂಥ ಕೆಲಸ ಸರ್ಕಾರದಿಂದಾಗಬೇಕು. ಆದುದರಿಂದ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳುವುದಿಷ್ಟೆ. ದಯಮಾಡಿ ರೈತರ ಬಗ್ಗೆ ವಿಶೇಷ ಕಾಳಜಿ ವಹಿಸಿ ಅವರಿಗೆ ಸರಿಯಾಗಿ ವಿದ್ಯುತ್ ಕೊಡತಕ್ಕಂಥ ಕೆಲಸ ಮಾಡಿ ಅವರ ಪ್ರಶಂಸೆಗೆ ಪಾತ್ರರಾಗಬೇಕು. ಮುಂದಿನ ಚುನಾವಣೆಯಲ್ಲಿ ನೀವು ಗೆದ್ದು ಪುನಃ ಮುಖ್ಯಮಂತ್ರಿಗಳಾಗಬೇಕೆಂದು ಕಳಕಳಿಯಿಂದ ಕೋರುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಶಫಿ ಅಹಮದ್ (ತುಮಕೂರು):- ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗ ತಾನೆ ವಿದ್ಯುಚ್ಛಕ್ತಿ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ನಮ್ಮ ಜಿಲ್ಲೆಗೆ ಹೆಚ್ಚಿನ ವಿದ್ಯುಚ್ಛಕ್ತಿ ಅತಿ ಅವಶ್ಯಕವಾಗಿ ಬೇಕಾಗಿದೆ. ಕಳೆದ ವರ್ಷ ವಿಶ್ವ ಬ್ಯಾಂಕಿನ ಸಹಾಯದಿಂದ ಮೊದಲನೆಯದಾಗಿ ಅಂತರಸನಹಳ್ಳಿ Kamasamudra ಸ್ಟೇಷನ್ ನಿಟ್ಟೂರ್, ಕೆ.ಬಿ.ಕ್ರಾಸ್, ಚೇಳೂರುಗಳಲ್ಲಿ ಸ್ಟೇಷನ್‌ಗಳನ್ನು ಸ್ಥಾಪಿಸುವ ಕೆಲಸ ಪ್ರಾರಂಭಿಸಿದ್ದರೂ ಇನ್ನೂ ಪೂರ್ತಿಗೊಳಿಸಿಲ್ಲ. ಈ ಸ್ಟೇಷನ್‌ಗಳನ್ನು 40 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸ್ಥಾಪಿಸಲುದ್ದೇಶಿಸಿದ್ದು Kamasamudra ಸ್ಟೇಷನ್ ಇಡೀ ಜಿಲ್ಲೆಯಲ್ಲಿಯೇ ಬಹಳ ಮಹತ್ವವಾದ ಸ್ಟೇಷನ್ ಆಗಿದೆ. ಈ ಸ್ಟೇಷನ್ ಸ್ಥಾಪನೆಯಾದರೆ ಇಡೀ ಜಿಲ್ಲೆಗೆ ಪವರ್ ಸಪ್ಲೈ ಸರಿಯಾದ ರೀತಿಯಲ್ಲಿ ಆಗುತ್ತದೆ. ಇದರ ಬಗ್ಗೆ ಮೊನ್ನೆ ಕರೆದ ಟೆಂಡರ್‌ಗಳನ್ನು ಇವೊತ್ತಿನವರೆವಿಗೂ ಸಹ ಬಿಚ್ಚಿಲ್ಲ. ಅದಕ್ಕೆ ಬೇಕಾಗಿರತಕ್ಕಂಥ ಕಚ್ಚಾ ಮಾಲನ್ನು ಸರಬರಾಜು ಮಾಡಿಲ್ಲ, ಶಂಕುಸ್ಥಾಪನೆ ಮಾಡಿ 2 ವರ್ಷವಾದರೂ ಯಾವುದೇ ಸ್ಟೇಷನ್ ತನ್ನ ಕೆಲಸವನ್ನು ಪ್ರಾರಂಭಿಸಿಲ್ಲ. ಇಂತಹ ಒಂದು ತುರ್ತು ಪರಿಸ್ಥಿತಿಯಲ್ಲಿ ಸ್ಟೇಷನ್ ಸ್ಥಾಪಿಸುವ ಕೆಲಸವನ್ನು ಏನು ಪ್ರಾರಂಭಿಸಿದ್ದಾರೆ, ಅದನ್ನು ಪೂರ್ಣಗೊಳಿಸಿದರೆ, ನಮ್ಮ

ಜಿಲ್ಲೆಯಲ್ಲಿರುವ ಪವರ್ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಹಿರಿಯ ಸದಸ್ಯರಾದಂಥ ಸನ್ಮಾನ್ಯ ಬೈರೇಗೌಡರು ಐ.ಪಿ. ಸೆಟ್‌ಗಳ ಬಗ್ಗೆ ಮಾತನಾಡುತ್ತಾ ''ಈಗ ಏನು ಪವರ್ ಸಪ್ಲೈ ಮಾಡುತ್ತಿದ್ದೀರಿ, ಅದನ್ನು ಸರಿಯಾದ ರೀತಿಯಲ್ಲಿ ಮಾಡಿದರೆ ಸಾಕು, ರೈತರು ಹಣವನ್ನು ಕೊಡುವುದಕ್ಕೆ ತಯಾರಾಗಿದ್ದಾರೆ'' ಎಂದು ಹೇಳಿದರು. ಅಡಿಕ್ವೇಟ್ ಪವರ್ ಕೊಡದೆ ಸರಿಯಲ್ಲದ ರೀತಿ ಫ್ರೀ ವಿದ್ಯುತ್ ಕೊಟ್ಟರೂ ಸಹ ಸಾಧ್ಯವಾಗುವುದಿಲ್ಲ. ಆ ದಿಸೆಯಲ್ಲಿ ಕನಿಷ್ಠ ಟಾರಿಫ್ ಹಾಕಿ, ಈಗ ಏನು ತಾವು ಪವರ್ ಕೊಡುತ್ತಿದ್ದೀರಿ, ಅದನ್ನು 4 ಗಂಟೆ, 6 ಗಂಟೆ ಅಥವಾ 10 ಗಂಟೆಗಳ ಕಾಲ ಪವರ್ ಕೊಡುವುದಕ್ಕೆ ಒಂದು ಟೈಮ್‌ಬಾಂಡ್ ಪ್ರೋಗ್ರಾಂ ಹಾಕಿಕೊಂಡರೆ ಐ.ಪಿ. ಸೆಟ್‌ಗಳು ಉಳಿಯುತ್ತವೆ. ಇಂಡಸ್ಟ್ರಿಯಲ್ ಪವರ್ ಮೋಟಾರ್ ಸೆಟ್‌ಗಳೇನಿವೆ, ಅವುಗಳಿಗೆ ಒಂದು ಸಲ ಫ್ಲಕ್ಚುಯೇಷನ್ ಆಫ್ ಪವರ್ ಆದರೆ, ಕೆಇಬಿಗೆ ಇದರಿಂದ ಸಾವಿರಾರು, ಲಕ್ಷಾಂತರ ರೂಪಾಯಿಗಳ ನಷ್ಟವಾಗುತ್ತದೆ. ಆದರೆ, ಇನ್‌ಸ್ಯೂರೆನ್ಸ್ ಕವರ್ ಆಗುವುದಿಲ್ಲ. ಆದುದರಿಂದ, ಯಾವ ರೀತಿಯಲ್ಲಿ ಪವರ್ ಸಪ್ಲೈ ಆಗುತ್ತಿದೆ, ಅದು ಸರಿಯಾದ ರೀತಿಯಲ್ಲಿ ವಿತರಣೆಯಾಗಬೇಕು ಮತ್ತು ಕೆಇಬಿ ವತಿಯಿಂದ ಲೈನ್‌ಗಳನ್ನು ಏನು ಡ್ರಾ ಮಾಡಿದ್ದಾರೆ, ಆ ಲೈನ್‌ಗಳೆಲ್ಲವೂ ಔಟ್ ಡೇಡ್ ಆಗಿವೆ, ಅವುಗಳನ್ನೂ ಸಹ ರಿಪ್ಲೇಸ್ ಮಾಡಬೇಕಾಗಿದೆ. ಎಕ್ಸಿಸ್ಟಿಂಗ್ ಕೈಪಾಸಿಟಿಯಲ್ಲಿ ಲೈನ್‌ಗಳು ಸರಿಯಾದ ರೀತಿಯಲ್ಲಿ ಇಲ್ಲದಿರುವುದರಿಂದ ಆ ರೀತಿ ತೊಂದರೆಯಾಗುತ್ತಿದೆ. ಅಲ್ಲದೆ, ಕರ್ನಾಟಕ ವಿದ್ಯುಚ್ಛಕ್ತಿ ಕಾರ್ಖಾನೆ ಮತ್ತು ಎನ್‌ಜಿಇಎಫ್, ಈ ಎರಡು ಸಂಸ್ಥೆಗಳಿಂದ ಟ್ರಾನ್ಸ್‌ಫಾರ್ಮರ್‌ಗಳು ಸರಬರಾಜಾಗುತ್ತಿವೆ. ಇವೊತ್ತು ನಮ್ಮ ಜಿಲ್ಲೆಗೆ, 100 ಕೆವಿಎಯಲ್ಲಿ 160 ಟ್ರಾನ್ಸ್‌ಫಾರ್ಮರ್‌ಗಳು, 60 ಕೆವಿಎನಲ್ಲಿ 125 ಟ್ರಾನ್ಸ್‌ಫಾರ್ಮರ್‌ಗಳು ಮತ್ತು 25 ಕೆವಿಎನಲ್ಲಿ 130 ಟ್ರಾನ್ಸ್‌ಫಾರ್ಮರ್‌ಗಳು ಬೇಕಾಗಿದೆ. ಲಾರಿ ಕಳುಹಿಸಿ ಅದು ವಾಪಸ್ಸು ಬರಬೇಕಾದರೆ ಒಂದು ವಾರಗಳ ಕಾಲ ಬೇಕಾಗುತ್ತದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಕರ್ನಾಟಕದ ಹೊರಗಡೆಯಿರುವ ಸಂಸ್ಥೆಯಿಂದ ಟ್ರಾನ್ಸ್‌ಫಾರ್ಮರ್‌ಗಳನ್ನು ತರಿಸಿಕೊಂಡು ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ಪವರ್ ಸಪ್ಲೈ ಸರಿಯಾಗಿದ್ದರೆ ಮಾತ್ರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲದೆ, ಕನ್‌ಸ್ಯೂಮಿಂಗ್ ಮೆಟೀರಿಯಲ್ಸ್ ಸಹ ಸರಿಯಾದ ರೀತಿಯಲ್ಲಿ ವಿತರಣೆಯಾಗುತ್ತಿಲ್ಲ. ಕೆಲವೇ ಕೆಲವು ಮೊನಾಪಲೈಸ್ ಸಂಸ್ಥೆಗಳು ಸರಬರಾಜು ಮಾಡುವ ಇನ್‌ಫೀರಿಯರ್ ಮೆಟೀರಿಯಲ್ಸ್‌ನಿಂದ ಸರಕಾರಕ್ಕೂ ನಷ್ಟವಾಗುವುದಲ್ಲದೆ ರೈತರಿಗೂ ಸಹ ತೊಂದರೆಯಾಗುತ್ತದೆ. ಆದ್ದರಿಂದ, ಅತಿ ಮುಖ್ಯವಾಗಿ ಪವರ್ ಅನ್ನು ವಿಕೇಂದ್ರಿಕರಣಗೊಳಿಸುವುದು ಬಹಳ ಸೂಕ್ತವಿದೆ. ಆ ದಿಶೆಯಲ್ಲಿ ಇವತ್ತು ಡೀಸೆಂಟ್ರಲೈಸ್ ಮಾಡಿ ಈ ಪವರ್ ಅನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡಿದರೆ ನಮ್ಮ ಆರ್ಥಿಕ ಪರಿಸ್ಥಿತಿ ಒಳ್ಳೆಯದಾಗುತ್ತದೆ. ಇಂಡಸ್ಟ್ರಿ ಮತ್ತು ಅಗ್ರಿಕಲ್ಚರ್ Two sectors are the backbone of the economy. ಈ ದೃಷ್ಟಿ ಇಟ್ಟುಕೊಂಡು ಇದನ್ನು ಸರಿಪಡಿಸುತ್ತೀರಿ ಎಂದು ತಿಳಿದುಕೊಂಡು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):- ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಒಳ್ಳೆಯ ಸೂಚನೆ ಕೊಟ್ಟು ಹೋಗಿದ್ದಾರೆ. ಅದು ಏನೆಂದರೆ ಶಾಸಕರನ್ನು ಕರೆಯಿಸಿ ಸಮಾಲೋಚನೆ ಮಾಡಿ ಮಾತನಾಡುವ ಮಾತನ್ನು ನೀವು ಹಿಂದೆ ಹೇಳಿದ್ದೀರಿ, ಆ ಕೆಲಸ ಈಗ ಮಾಡಿ ಎಂದು ಹೇಳಿದ್ದಾರೆ. ಈಗ ಆ ಕೆಲಸ ಮಾಡೋಣವೆ ಅಥವಾ ಈಗ ಎಲ್ಲವನ್ನೂ ವಿಶ್ಲೇಷಣೆ ಮಾಡಿ ಉತ್ತರ ಕೊಡೋಣವೆ?

ಶ್ರೀ ಜೆ.ಸಿ. ಮಾಧುಸ್ವಾಮಿ:- ಎರಡೂ ಬೇಡ ಟ್ರಾನ್ಸ್‌ಫಾರ್ಮರ್ಸ್ ಸಾಕಷ್ಟು ಕೊಡುತ್ತೇವೆಂದು ಹೇಳಿ ಸಾಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ತಾವು ಏನು ಹೇಳಿದ್ದೀರಿ ಅದನ್ನು ಉಚ್ಚಾರ

ಮಾಡಿದೆ. ಈ ವಿಭಾಗದ ಶಾಸಕರೆಲ್ಲರನ್ನೂ ಕರೆದು ಆದಷ್ಟು ಬೇಗ ಮಾತನಾಡಿ ಎಂದು ತಾವು ಹೇಳಿದ್ದೀರಿ ಆ ಕೆಲಸ ಮಾಡುವುದಿದ್ದರೆ ಬಹುಶಃ ಈ ಉತ್ತರವನ್ನು ಬಹಳ ವಿವರವಾಗಿ ಕೊಡಬೇಕಾದಂತಹ ಅವಶ್ಯಕತೆ ಇಲ್ಲವೆಂದು ನಾನು ಭಾವಿಸಿದ್ದೇನೆ. ಸಭೆಯನ್ನು ಕರೆಯುವಂತಹ ವ್ಯವಸ್ಥೆ ಮಾಡುತ್ತೇನೆ, ಇದು ಒಂದು. ಎರಡನೆಯದು ಬೈರೇಗೌಡರು ಒಂದು ಮಾತನ್ನು ಹೇಳಿದರು, ಹೈದಾರಾಬಾದ್ ಕರ್ನಾಟಕ ಬೋರ್ಡ್ ಆಯಿತು, ಆ ಭಾಗದ ಮುಖ್ಯಮಂತ್ರಿಯವರೂ ಇದ್ದರು, ಮಲೆನಾಡು ಬೋರ್ಡ್ ಆಯಿತು ಆ ಭಾಗದ ಮುಖ್ಯಮಂತ್ರಿಯವರೂ ಇದ್ದರು ಎಂದು. ನಾನು ನಿಮ್ಮ ಪ್ರತಿನಿಧಿ ಎಂದು ತಿಳಿದುಕೊಳ್ಳಿ ನಾನು ಖಂಡಿತವಾಗಿಯೂ ನಿಮ್ಮ ವಿಭಾಗಕ್ಕೆ ಸೂಕ್ತವಾದಂತಹ ನ್ಯಾಯ ದೊರಕಿಸಿಕೊಡುತ್ತೇನೆ. ಇನ್ನೂ ಅನೇಕ ವಿಚಾರಗಳನ್ನು ಸನ್ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಏಕಾಂತಯ್ಯನವರು, ದೇಶಪಾಂಡೆಯವರು ಬನ್ನಿಕೋಡ್‌ರವರು, ವಾಟಾಳ್ ನಾಗರಾಜ್, ಬೈರೇಗೌಡರು, ನಾರಾಯಣಸ್ವಾಮಿ, ಮಾಧುಸ್ವಾಮಿಯವರು, ರುದ್ರಪ್ಪನವರು, ಷಫಿ ಅಹಮದ್, ಮುನಿಸ್ವಾಮಯ್ಯನವರು ಬಹಳ ವಿವರವಾಗಿ ಹೇಳಿದ್ದಾರೆ. ನಿಜವಾದ ಸಮಸ್ಯೆ ಇದ್ದು, ಇದು ಗಂಭೀರವಾಗಿದೆ ಕ್ಲಿಷ್ಟವಾಗಿದೆ ಮತ್ತು ರೈತನನ್ನು ದಿನನಿತ್ಯ ಕ್ಷಣ ಕ್ಷಣಕ್ಕೂ ಕೂಡ ಭಾದಿಸತಕ್ಕಂತಹ ವಿಚಾರವಾಗಿದೆ. ಇಲ್ಲಿ ಕೆ.ಇ.ಬಿ.ಯನ್ನಾಗಲೀ, ಸರಕಾರವನ್ನಾಗಲೀ ರಕ್ಷಣೆ ಮಾಡತಕ್ಕಂತಹ ಪ್ರಶ್ನೆ ಇಲ್ಲಿ ಬಂದಿಲ್ಲ. ಈ ಜ್ವಲಂತ ಸಮಸ್ಯೆ ಈಗ ನಮ್ಮ ಮುಂದಿದೆ. ಇದು ಬೆಳೆದುಕೊಂಡು ಬಂದಿದೆ. ಇದರಲ್ಲಿ ಯಾರದು ಎಷ್ಟು ಪಾಲು ಮತ್ತೆ ಯಾವ ವ್ಯವಸ್ಥೆಯಲ್ಲಿ ಬಂದಿದೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಅನೇಕ ಬಾರಿ ಈ ಸಮಸ್ಯೆಗಳು ಕೆಲವು ಸಾರಿ ಸ್ವಯಂಕಲ್ಪಿತ ಸಮಸ್ಯೆಗಳಾಗಿವೆ ಇದನ್ನು ನಾವೇ ಸೃಷ್ಠಿ ಮಾಡುತ್ತೇವೆ. ಇಲ್ಲಿ 2 ವಿಧ ಇದೆ ಒಂದು ಹೆಚ್ಚಾಗಿ ಈ ವ್ಯವಸ್ಥೆಗಳಲ್ಲಿ ಒಂದು ರೀತಿಯ ಪ್ರೊಫೆಷನ್ ಇರಬೇಕು, ಇನ್ನೊಂದು ಪರಿಣತರ ಮಾತು ನಡೆಯಬೇಕು. ಕೆಲವು ಸಾರಿ ಪರಿಣಿತರ ಮಾಡು ನಡೆಯುವುದಿಲ್ಲ. ನಾವು ಏನು ಮಾಡುತ್ತೇವೆ ನಮಗೆ ಹುಚ್ಚು ಅಂದರೆ ಓಟು ಪಡೆಯಬೇಕು ಎಂದು, ಓಟು ಪಡೆಯುವುದಕ್ಕೆ ಏನು ಮಾಡುವುದು ಸಾಕಷ್ಟು ಅಂಕಿ ಸಂಖ್ಯೆಯನ್ನು ಕೊಟ್ಟು ವರ್ಷಕ್ಕೆ 1 ಲಕ್ಷ 1 1/2 ಲಕ್ಷ ಪಂಪ್‌ಸೆಟ್ಸ್ ಮಾಡಿದ್ದೇವೆಂದು ಹೇಳುವುದು, ನಮಗೆ ಅದೇ ದೃಷ್ಟಿ, ನಮಗೆ ಒಂದು ಸಂತೋಷದ ವಿಚಾರವೆಂದು ಹೇಳುವುದು ಈ ಸದನದಲ್ಲಿ None of you have gone on populism. ಇವತ್ತು ಕ್ವಾಲಿಟಿ ಆಫ್ ಪವರ್ ಏನು ಇದೆ, ಅದರ ಬಗ್ಗೆ ಹೆಚ್ಚು ಒತ್ತು, ಚಿಂತನೆ ರೈತನಲ್ಲಿ ನಡೆಯುತ್ತಿದೆ ರೈತನ ಪ್ರತಿನಿಧಿಗಳಲ್ಲಿ ಇದನ್ನು ನೋಡುತ್ತಿದ್ದೇವೆ ಇದು ಒಳ್ಳೆಯ ಸೂಚನೆ ಏಕೆಂದರೆ ಈ ಸಮಸ್ಯೆ ಒಂದು ತರಹ ಪಿರಮಿಡ್ ರೀತಿ ಬೆಳೆದಿದೆ ಈ ಪಿರಮಿಡ್‌ನ ತುತ್ತ ತುದಿಯಲ್ಲಿ ಇದೆ ಎಂದು ನಾವು ಹೇಳಬಹುದು. ಈ ಪಿರಮಿಡ್ ರೀತಿಯಲ್ಲಿ ಬೆಳೆದಾಗ ಬಹುಶಃ ಕೆ.ಇ.ಬಿ.ಯಾಗಲೀ ಸರಕಾರವಾಗಲೀ ಈ ಸಮಸ್ಯೆ ಕ್ಲಿಷ್ಟಕರವಾಗಿ ಕಾಣುತ್ತದೆ. ಇಲ್ಲಿ ರೈತರ ದೋಷ, ಬರಬಹುದು ರೈತರ ಕ್ರೋಧ ಬರಬಹುದು, ಇದು ಒಂದು ಜ್ವಾಲಾಮುಖಿಯಾಗಿ ಒಡೆಯಬಹುದು ಎಂದು ತಾವು ಹೇಳಿದಿರಿ. ಇದು ಸಾಧ್ಯ. ಆ ಪಿಚ್‌ಗೆ ಆ ಒಂದು ಹಂತಕ್ಕೆ ನಮ್ಮನ್ನೇ ನಾವು ಕೊಂಡು ಹೋಗಿಬಿಟ್ಟಿದ್ದೇವೆ. ಅದಕ್ಕೆ ಸರಕಾರವೂ ಪಾಲುಗಾರರು, ಕೆ.ಇ.ಬಿ. ಪಾಲುಗಾರರು, ಜನರ ಪ್ರತಿನಿಧಿಗಳು ಪಾಲುಗಾರರು, ರೈತರು ಪಾಲುಗಾರರು, ಅವರದ್ದು ಇಷ್ಟಿಷ್ಟು ಪಾಲು ಎಂದು ವಿಭಜನೆ ಮಾಡಬೇಕು. ಯಾರ್‍ಯಾರದ್ದು ಎಷ್ಟು ಪಾಲು ಎಂದು ವಿಭಜನೆ ಮಾಡಬೇಕು. ಈ ರೀತಿ ಒಂದು ಸ್ಫೋಟನೆಯಾಗತಕ್ಕಂತಹ ಪರಿಸ್ಥಿತಿಗೆ ನಮ್ಮನ್ನು ನಾವು ತಂದು ಇಡಲಿಕ್ಕೆ ಯಾರು ಕಾರಣರೆಂದು ವಿಮರ್ಶೆ ಮಾಡಬೇಕಾಗಿದೆ. ಅದಕ್ಕೆ ಎಲ್ಲರೂ ಪಾಲುಗಾರರಿದ್ದಾರೆ. ಒಬ್ಬೊಬ್ಬರದ್ದು ಸ್ವಲ್ಪ ಹೆಚ್ಚು ಸ್ವಲ್ಪ ಕಡಿಮೆ ಇರಬಹುದು. ಯಾವಾಗಲೂ ಈ ಪ್ರಮಾಣ ಹೆಚ್ಚಾದಾಗ, ಗಾತ್ರ ಹೆಚ್ಚಾದಾಗ ಅಲ್ಲಿ ಕ್ವಾಲಿಟಿ ಕಡಿಮೆಯಾದಾಗ ಏತನ್ಮಧ್ಯೆ ಅದಕ್ಷತೆ ಹೆಚ್ಚಾಗುತ್ತದೆ, ಅಲ್ಲಿ ಭ್ರಷ್ಟಾಚಾರ ಬರುತ್ತದೆ. ಏಕೆಂದರೆ ಒಂದು ಸಿಸ್ಟಂ ಇಲ್ಲದಿದ್ದರೆ ಅಲ್ಲಿ ಲೂಪ್ ಹೋಲ್ಸ್ ಬರುತ್ತದೆ ಅಲ್ಲಿ ಲೋಪದೋಷಗಳು ತೂತುಗಳು ಎಲ್ಲಾ

ಬಂದಾಗ ಆ ತೂತುಗಳನ್ನು ಈ ಭ್ರಷ್ಟಾಚಾರ ಅಧಕ್ಷತೆ ಇದೆಲ್ಲಾ ತುಂಬಿ ಹಲ್ಲು ನೋವು ಬರುತ್ತದೆ ವಾಟಾಳ್ ನಾಗರಾಜ್‌ರವರೇ, ಆಗ ಹಲ್ಲು ನೋವು ಒಂದು ಕಡೆ ಪ್ರಾರಂಭವಾದರೆ ಕೂಡಲೇ ರಿಪೇರಿ ಮಾಡಿದರಿ ಸರಿ ಹೋಗುತ್ತದೆ ಇಲ್ಲದಿದ್ದರೆ ಅದು ಎಲ್ಲಾ ತುಂಬಿ ಬಿಡುತ್ತದೆ. ತುಂಬಿ ಬಿಟ್ಟು ಎಲ್ಲಾ ಹಲ್ಲನ್ನೂ ತೆಗೆಯಬೇಕಾದ ಪರಿಸ್ಥಿತಿಗೆ ನೀವು ಬರುತ್ತೀರಿ. ಕೆ.ಇ.ಬಿ. ಅಥವಾ ವಿದ್ಯುತ್‌ನ ವ್ಯವಸ್ಥೆ ಕೂಡ ಒಂದು ರೀತಿಯಲ್ಲಿ ಆ ಹಂತಕ್ಕೆ ಇವತ್ತು ಬಂದಿದೆ. ಏಕೆಂದರೆ ತಾವು ಇಲ್ಲಿ ಈ ಒಂದು ವಿಚಾರ ಮಾಡಿದಾಗ ನಾವು ವಿದ್ಯುತ್ ಒದಗಿಸುವಿಕೆಯನ್ನು ಆಲೋಚನೆ ಮಾಡಿದಾಗ ನಾವು ಇನ್ನೂ ಢಫಿಸಿಟ್‌ನಲ್ಲಿ ಇದ್ದೇವೆ. ಒಂದು ಕಾಲದಲ್ಲಿ ಐ.ಪಿ. ಸೆಟ್‌ನವರು ಹೆಚ್ಚು ವಿದ್ಯುತ್ತನ್ನು ಉಪಯೋಗ ಮಾಡುತ್ತಿರಲಿಲ್ಲ. ಇಂಡಸ್ಟ್ರಿಯಲ್ ಸೆಕ್ಟಾರ್‌ಗೆ ಜಾಸ್ತಿಯಾಗುತ್ತಿತ್ತು. ವಿದ್ಯುತ್‌ನ ಉತ್ಪಾದನೆಯಲ್ಲಿ ಐ.ಪಿ. ಸೆಟ್ಸ್‌ಗೆ, 35 ಪರ್ಸೆಂಟ್ ನಾವು ಉಪಯೋಗ ಮಾಡುತ್ತಿದ್ದೇವೆ. ಕೈಗಾರಿಕೆಗಳಿಗೆ 45 ಪರ್ಸೆಂಟ್ ಉಪಯೋಗ ಮಾಡುತ್ತಿದ್ದೇವೆ. ಇದು ಒಂದು ಕಾಲದಲ್ಲಿ 80ಪರ್ಸೆಂಟ್ ಇತ್ತು. ಕೈಗಾರಿಕೆಯಲ್ಲಿ ನಮ್ಮ ರಾಜ್ಯ ಬಹಳ ಹಿಂದೆ ಉಳಿದಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈಗ ಬರೀ 45 ಪರ್ಸೆಂಟ್ ವಿದ್ಯುತ್ ಉಪಯೋಗ ಮಾಡುತ್ತಾ ಇರುವಂಥ ಕೈಗಾರಿಕಾ ಕ್ಷೇತ್ರ ಮುಂದೆ ಬರಲಿಕ್ಕೆ ಸಾಧ್ಯವೇ ಇಲ್ಲ. ಮತ್ತೊಂದು ಪಂಪ್ ಸೆಟ್‌ಗೆ ಕನ್ಸ್‌ಂಪ್‌ಷನ್ 20 ಪರ್ಸೆಂಟ್ ಮತ್ತು ಪಬ್ಲಿಕ್ ಯುಟಿಲಿಟಿ ಸುಮಾರು 10 ಪರ್ಸೆಂಟ್ ಈ ರೀತಿಯಲ್ಲಿ ನಮ್ಮ ವಿದ್ಯುತ್ ಉತ್ಪಾದನೆಯನ್ನು ನಾವು ಉಪಯೋಗ ಮಾಡುತ್ತಿದ್ದೇವೆ. ಈ ಸಮಸ್ಯೆ ಏನು ಇದೆ, ಇದು ಬಹಳ ವರ್ಷಗಳಿಂದ ಒಂದು ರೀತಿಯಲ್ಲಿ ಅದು ಹೆಪ್ಪು ಕಟ್ಟಿ ಹೋಗಿದೆ. ಆ ಹೆಪ್ಪುಕಟ್ಟಿದಂತಹ ಸಮಸ್ಯೆಗಳನ್ನು ಇವತ್ತು ಒಡೆದು ನಾವು ಬಹಳ ಆಳಕ್ಕೆ ಹೋಗಿ ಇದನ್ನು ಪರಿಹಾರ ಮಾಡಬೇಕಾಗಿದೆ. ನಮ್ಮ ರಾಜ್ಯದ ಅನಿರ್ಬಂಧಿತ ವಿದ್ಯುತ್ ಬೇಡಿಕೆ ಒಂದು ದಿನಕ್ಕೆ ಸುಮಾರು 57.68 ದಶಲಕ್ಷ ಯೂನಿಟ್‌ಗಳು, ಇದರಲ್ಲಿ ಸಧ್ಯಕ್ಕೆ ಸರಾಸರಿ 39.56 ಲಕ್ಷ ಯೂನಿಟ್‌ಗಳ ವಿದ್ಯುತ್ ಅನ್ನು ರಾಜ್ಯದ ಎಲ್ಲಾ ಉತ್ಪಾದನಾ ಕೇಂದ್ರಗಳಿಂದ ಉತ್ಪತ್ತಿ ಮಾಡುತ್ತಿದ್ದೇವೆ. ಕೇಂದ್ರದಿಂದ ರಾಜ್ಯ ತನ್ನ ಪಾಲು ಸುಮಾರು 86 ದಶಲಕ್ಷ ಯೂನಿಟ್ ಅನ್ನು ಪಡೆಯುತ್ತಿದೆ. ಹೀಗೆ ಒಂದು ದಿನಕ್ಕೆ ಲಭ್ಯತೆ ಇರುವ ವಿದ್ಯುತ್ ಪ್ರಮಾಣ 47.56 ಲಕ್ಷ ಯೂನಿಟ್‌ಗಳಾಗಿದ್ದು ರಾಜ್ಯವು ಪ್ರತಿದಿನ 10.6 ಲಕ್ಷ ವಿದ್ಯುತ್ ಕೊರತೆಯನ್ನು ಎದುರಿಸುತ್ತಿದೆ. ಈ ಬಗ್ಗೆ ಸ್ವಲ್ಪ ಕೊರತೆಯನ್ನು ತುಂಬಲಿಕ್ಕೆ ನಾವು ಏನು ಮಾಡುತ್ತಿದ್ದೇವೆ ಎಂದು ಹೇಳುತ್ತೇನೆ. ಹೈಟೆನ್‌ಷನ್‌ನಲ್ಲಿ ಸುಮಾರು 25 ರಿಂದ 40 ಪರ್ಸೆಂಟ್ ವಿದ್ಯುತ್ ಕಡಿತ ಕೂಡ ನಾವು ವಿಧಿಸಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿ 6 ಗಂಟೆಗಳ ಕಾಲ ಅವಧಿಯ ನಿಯಮಿತ ವಿದ್ಯುತ್ ನಿಲುಗಡೆಯನ್ನು ಸೆಪ್ಟೆಂಬರ್ 92 ರಿಂದ ಜಾರಿಗೊಳಿಸಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ಮಾಡುವ ಫೀಡರ್‌ಗಳಿಗೆ ಎರಡು ಭಾಗಗಳಾಗಿ ವಿಂಗಡಿಸಿ ಒಂದು ಭಾಗಕ್ಕೆ 6 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಇನ್ನೊಂದು ಭಾಗಕ್ಕೆ ಮಧ್ಯಾಹ್ನ 12 ಗಂಟೆಯಿಂದ 6 ಗಂಟೆಯವರೆಗೆ ವಿದ್ಯುತ್ ಸರಬರಾಜನ್ನು ಮಾಡಿ ಅದನ್ನು ಸಮತೋಲನ ಮಾಡುವುದಕ್ಕೆ ಇದು ಒಂದು ಕಡೆ ಪ್ರಯತ್ನ ನಡೆಯುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 8.50 ಲಕ್ಷ ಐ.ಪಿ. ಸೆಟ್ಟುಗಳು ಕೆಲಸ ಮಾಡುತ್ತಿವೆ. ಈ ಮೂರು ವರ್ಷ ಏನಾಗಿದೆ ಎಂದರೆ, ಪ್ರತಿವರ್ಷ ಸರಾಸರಿ 65ರಿಂದ 70 ಸಾವಿರ ಐ.ಪಿ. ಸೆಟ್ಟುಗಳು ಹೊಸದಾಗಿ ಸೇರ್ಪಡೆಯಾಗುತ್ತಿವೆ. ಈ ಐ.ಪಿ. ಸೆಟ್ಟುಗಳು ಹೆಚ್ಚಾಗಿ ಉಪಯೋಗಿಸತಕ್ಕಂಥ ಗ್ರಾಮಾಂತರ ಪ್ರದೇಶಗಳು ಅಂದರೆ ಕೋಲಾರ, ಚಿತ್ರದುರ್ಗ, ತುಮಕೂರು, ಬೀದರ ಬೆಳಗಾಮ್, ಬಳ್ಳಾರಿ, ಬಿಜಾಪುರ, ಮತ್ತು ಗುಲ್ಬರ್ಗಾ ಜಿಲ್ಲೆಗಳು. ಈ ಐ.ಪಿ. ಸೆಟ್ಟುಗಳನ್ನು ಕೊಡುವಾಗ ಏನು ಮಾಡುತ್ತೇವೆಂದರೆ ವಿದ್ಯುತ್ ಸಿಸ್ಟಮ್‌ಗೆ ಅನುಗುಣವಾಗಿ ಕೊಡುವುದಿಲ್ಲ ವಿದ್ಯುತ್ತಿನ ಪೂರೈಕೆಗೆ ಅನುಗುಣವಾಗಿ ಈ ಐ.ಪಿ. ಸೆಟ್ಟುಗಳನ್ನು ಕೊಡುತ್ತ ಇಲ್ಲ. ಈ ವ್ಯವಸ್ಥೆ ಅನೇಕ ಬಾರಿ ತಾಳಮೇಳವಿಲ್ಲದೆ ಅಸ್ತವ್ಯಸ್ಥವಾಗಿ ಸಂಪೂರ್ಣವಾಗಿ ರೈತರುಗಳು ಬಾಧೆಪಡತಕ್ಕಂಥ ಪರಿಸ್ಥಿತಿ ಬಂದಿದೆ. ನಾನು ಒಪ್ಪುತ್ತೇನೆ ಆದಕ್ಷತೆ ಒಂದು ಭಾಗ ಇದೆ, ಈ ದಾಕ್ಷಿಣ್ಯ ಪ್ರವೃತ್ತಿ ಇದು

ಸರ್ಕಾರದ್ದು ಇರಬಹುದು ಅಥವಾ ಅಧಿಕಾರಗಳದ್ದು ಇರುವವರದು ಇರಬಹುದು. ಆ ದಾಕ್ಷಿಣ್ಯ ಪ್ರವೃತ್ತಿಯಿಂದ ಇಡೀ ವಿದ್ಯುತ್ತಿನ ವ್ಯವಸ್ಥೆಯನ್ನು ಅದಕ್ಕೆ ಬಲಿಯಾಗಿ ಕೊಟ್ಟಿದ್ದೇವೆ. ಯಾವರೀತಿಯ ತಾಳಮೇಳವೂ ಕೂಡ ಅದಕ್ಕೆ ಇಲ್ಲ. ಇಡೀ ರಾಜ್ಯದಲ್ಲಿ ಸುಮಾರು 82,200 ಟ್ರಾನ್ಸ್‌ಫಾರ್ಮಸ್ ಇವೆ. ಇದರಲ್ಲಿ 13 ಪರ್ಸೆಂಟ್‌ನಿಂದ 15 ಪರ್ಸೆಂಟ್ ಟ್ರಾನ್ಸ್‌ಫಾರ್ಮಸ್ ಓವರ್ ಲೋಡಿಂಗ್‌ನಿಂದ ಪ್ರತಿವರ್ಷ ವಿಫಲವಾಗುತ್ತಿವೆ. ಈಗ ಕೆ.ಇ.ಬಿ.ಯವರು ಅವುಗಳನ್ನು ರಿಪ್ಲೇಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಂದರೆ 1992-93ರ ಡಿಸೆಂಬರ್ ಅಂತ್ಯದವರೆಗೆ ಸುಮಾರು 11 ಸಾವಿರ ಟ್ರಾನ್ಸ್‌ಫಾರ್ಮರ್‌ಗಳನ್ನು ಬೇರೆ ಬೇರೆ ಜಿಲ್ಲೆಗಳಿಗೆ ಒದಗಿಸಿದ್ದಾರೆ. ನನ್ನ ಹತ್ತಿರ ಬೇರೆ ಬೇರೆ ವಿಭಾಗಕ್ಕೆ ಎಷ್ಟೆಷ್ಟು ಒದಗಿಸಲಾಗಿದೆ ಎನ್ನುವ ಒಂದು ಪಟ್ಟಿ ಕೂಡ ಇದೆ. ಬಹುಶಃ ಆ ಪಟ್ಟಿಯನ್ನು ಓದಲಿಕ್ಕೆ ಹೋದರೆ ಬಹಳ ಸಮಯವಾಗುತ್ತದೆ. ಅದನ್ನು ಈಗ ಓದಲಿಕ್ಕೆ ಹೋಗುವುದಿಲ್ಲ. ನನ್ನ ಹತ್ತಿರ ಈ ಟ್ರಾನ್ಸ್‌ಫಾರ್ಮಸ್ ಯಾವ ರೀತಿ ಫೆಲ್ಯೂರ್ ಆಗಿವೆ ಎಂಬುದನ್ನು ನೋಡಿದರೆ ಸುಮಾರು 1989-90ರಲ್ಲಿ 13.8 ಪರ್ಸೆಂಟ್, 1990-91ರಲ್ಲಿ ಸುಮಾರು 13.49 ಪರ್ಸೆಂಟ್, 1991-92ರಲ್ಲಿ 18.1 ಪರ್ಸೆಂಟ್ ಇದು ಈ ರೀತಿ ಫೆಲ್ಯೂರ್ ಆಗಿದೆ. 1992-93ನೇ ನವೆಂಬರ್ ಅಂತ್ಯದವರೆಗೆ 11.87 ಪರ್ಸೆಂಟ್. ಏತಕ್ಕೆಂದರೆ ಹಿಂದೆ ನೀರಾವರಿ ಪಂಪ್‌ಸೆಟ್‌ಗಳು ಗುರಿ 60 ಸಾವಿರಕ್ಕೂ ಹೆಚ್ಚು ಸರಾಸರಿ ಇದ್ದು ಆ ಗುರಿಸಾಧನೆ ಮಾಡಲಿಕ್ಕೆ ಏನು ಮಾಡಿದರು ಎಂದರೆ ವಿತರಣಾ ಪ್ರವೃತ್ತಿ ಡೈವರ್ಸಿಟಿ ಫ್ಯಾಕ್ಟರನ್ನು 1:1 ಇದ್ದುದನ್ನು 1:5 ಮಾಡಿದರು. ಇದರಿಂದ ಒಂದು ರೀತಿಯ ತೊಂದರೆ ಪ್ರಾರಂಭವಾಯಿತು. 1:5 ಏರಿಸಿದ್ದರಿಂದ ಓವರ್ ಲೋಡಿಂಗ್ ಜಾಸ್ತಿಯಾಯಿತು. ಇದನ್ನು 1:1 ಗೆ ನಾವು ಕ್ರಮಬದ್ಧವಾಗಿ ಇಳಿಸಿದರೆ ಮಾತ್ರ ಬಹುಶಃ ಪ್ರತಿವರ್ಷ ಇರತಕ್ಕ ಸಮಸ್ಯೆಗಳಿಗೆ ಮತ್ತಷ್ಟು ಸಮಸ್ಯೆಗಳು ಸೇರುವುದು ನಿಲ್ಲುತ್ತದೆ. ಒಂದು ಕಡೆ 1:1 ಮೆಂಟೈನ್ ಮಾಡಬೇಕಾಗುತ್ತದೆ. ಮತ್ತು ಹಿಂದಿನ ಅಸ್ತವ್ಯಸ್ಥೆಯನ್ನು ಸರಿಪಡಿಸುವುದಕ್ಕೆ ಸರ್ಕಾರ ಏನು ಕಾರ್ಯಕ್ರಮ ಕೈಗೊಂಡಿದೆ ಎನ್ನುವುದು ಪ್ರಮುಖವಾಗಿ ಈಗ ಬಂದಿರತಕ್ಕಂಥ ಒಂದು ಪ್ರಶ್ನೆ. ನಮಗೆ ಸುಮಾರು 707 ಕೋಟಿ ರೂಪಾಯಿಗಳ ಒಂದು ವಿಶ್ವಬ್ಯಾಂಕ್ ಯೋಜನೆ ಬಂದಿದೆ. ಇದರಲ್ಲಿ ಮೂರನೆಯ ಒಂದು ಅಂಶ ಈಗಾಗಲೇ ಖರ್ಚಾಗಿದೆ. ಈ ಯೋಜನೆಯನ್ನು ಅನುಷ್ಠಾನಕ್ಕೆತರತಕ್ಕಂಥ ಒಂದು ವ್ಯವಸ್ಥೆಯನ್ನು ನಾವು ಈಗಾಗಲೇ ಮಾಡಿದ್ದೇವೆ. ಇನ್ನು ಉಳಿದಂಥ ಕೆಲವು ಯೋಜನೆಗಳನ್ನು ನಾವು ಸುಮಾರು 1994ರ ಡಿಸೆಂಬರ್ ಅಂತ್ಯದ ಒಳಗೆ ಮಾಡಿದಾಗ ಈ ಸಿಸ್ಟಮ್ ಇಂಪ್ರೂವ್‌ಮೆಂಟ್‌ನಲ್ಲಿ ಬಹಳ ಅಗಾಧವಾದಂಥ ಒಂದು ಬದಲಾವಣೆ ಆಗುತ್ತದೆ. ಈ ಬದಲಾವಣೆಯನ್ನು ಮಾಡಬೇಕಾದರೆ ಪ್ರತಿವರ್ಷ ಈ ಸಮಸ್ಯೆಗಳನ್ನು ಸೇರಿಸಬಾರದು; ಆ ಗಾತ್ರದಲ್ಲಿ ನಾವು ಈ ಒಂದು ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಖಂಡಿತವಾಗಿಯೂ ಸಾಧ್ಯವಿದೆ. ಬರೀ 707 ಕೋಟಿ ರೂಪಾಯಿಗಳ ಹಣವನ್ನು ವಿಶ್ವಬ್ಯಾಂಕ್ ಪೂರೈಸುವುದರ ಜೊತೆಗೆ ಪ್ರತಿ ವರ್ಷವೂ ಕೂಡ ಕೆ.ಇ.ಬಿ. ಬೋರ್ಡ್ ಇದಕ್ಕೆ ಹಣವನ್ನು ಒದಗಿಸುತ್ತಿದೆ. ಮುಖ್ಯವಾಗಿ ನಮಗೆ ಈ ಲೋ ಓಲ್ಟೇಜ್ ಬರಲಿಕ್ಕೆ ಪ್ರಮುಖ ಕಾರಣ, ಎನ್.ಟಿ.ಪಿ.ಸಿ.ಯಲ್ಲಿ ಏನು ವಿದ್ಯುತ್ ಬರುತ್ತದೆ ಆ ವಿದ್ಯುತ್ 600 ಮೆಗಾವ್ಯಾಟ್ ಬರುವಾಗ ಅದು ರಿಯಾಕ್ಟೀವ್ ಪವರ್ ಆಗುತ್ತದೆ. ವಿದ್ಯುತ್ ಬಾಕಿ ಕಡೆ ಹೋಗಿ ಬರುವಾಗ ರೀಸೈಕ್ಲಿಂಗ್ ಆಗಿ ಬರುವ ವಿದ್ಯುತ್ ಆದುದರಿಂದ ಲೋ ಓಲ್ಟೇಜ್ ಆಗುತ್ತದೆ. ತುಮಕೂರು, ಕೋಲಾರ, ಚಿತ್ರದುರ್ಗ ಈ ಭಾಗಗಳಿಗೆ ರೀ-ಸೈಕಲ್ ಆಗಿ ರೀಯಾಕ್ಟೀವ್ ಪವರ್ ಬರುವ ಕಾರಣ ಲೋ ಓಲ್ಟೇಜ್ ಆಗಲಿಕ್ಕೆ ವಿಶೇಷವಾದ ಕಾರಣ. ಇದನ್ನು ತಗ್ಗಿಸಲಿಕ್ಕೆ ರಾಯಚೂರು ಥರ್ಮಲ್ ಸ್ಟೇಷನ್ನಿನ ವಿದ್ಯುತ್ ಪವರನ್ನು ಮತ್ತು ನೈವೇಲಿ ಲಿಗ್ನೈಟ್ ಕಾರ್ಪೊರೇಷನ್ನಿನ ವಿದ್ಯುತ್ ಪವರನ್ನು ಕೋಲಾರ, ಚಿತ್ರದುರ್ಗ, ತುಮಕೂರು, ನಾರ್ತ್ ಕೆನರಾ ಈ ಭಾಗಗಳಿಗೆ ಒದಗಿಸಲಿಕ್ಕೆ ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಮತ್ತು ಇದರಿಂದ ಒಂದು ರೀತಿಯ stabilization will definitely take place. ಇದು ಮಾತ್ರವಲ್ಲದೆ ಶರಾವತಿ ಜನರೇಷನ್ ಕೂಡ, ಅದು 7 ಯೂನಿಟ್ಸ್ ಕೆಲಸ

ಮಾಡುತ್ತಿತ್ತು. ಅದನ್ನು 9-10 ಯೂನಿಟ್ ಕೆಲಸ ಮಾಡಲಿಕ್ಕೆ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಅದೂ ಕೂಡ ಇದಕ್ಕೆ ಸೇರಿದಾಗ ಮತ್ತಷ್ಟು ಪವರ್ ಸ್ಟೆಬಿಲೈಸ್ ಆಗುತ್ತದೆ. ಲೋ ಓಲ್ಟೇಜ್ ಅದರಿಂದ ಖಂಡಿತ ಕಡಿಮೆ ಆಗುತ್ತದೆ. ಇಂಥ ಕೆಲವು ಕಾರ್ಯಕ್ರಮಗಳನ್ನು ತ್ವರಿತ ಗತಿಯಿಂದ ಅನುಷ್ಠಾನ ಮಾಡಬೇಕು. ಅದಕ್ಕೆ ನೀವು ಹೇಳಿದ ಹಾಗೆ ಕೆ.ಇ.ಬಿ.ಗೆ ಈಗಾಗಲೇ ಆದೇಶ ಕೊಟ್ಟಿದ್ದೇವೆ. ಕೆ.ಇ.ಬಿ.ಯಲ್ಲಿ ಉನ್ನತ ಮಟ್ಟದ ಸಮಿತಿ ಇರುತ್ತದೆ, ಎಲ್ಲೆಲ್ಲಿ ಇಂಥ ಇರಿಟೆಂಟ್ಸ್ ಜಾಸ್ತಿ ಇದೆ ಅದನ್ನು ಗುರುತಿಸಿ ಪರಿಹಾರ ಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತಿದ್ದೇವೆ. ಟ್ರಾನ್ಸ್‌ಫಾರ್ಮರ್ ಸಪ್ಲೈ ಸಮಸ್ಯೆ ಇದೆ, ಕ್ವಾಲಿಟಿ ಟ್ರಾನ್ಸ್‌ಫಾರ್ಮರ್ ಕೊಡುವ ಸಮಸ್ಯೆ ಕೂಡ ಇದೆ. ಇದರ ಜೊತೆ ಜೊತೆಯಲ್ಲಿ ಸರಿದೂಗಿಸಿಕೊಂಡು ಕೆಲಸ ಮಾಡಬೇಕಾಗಿದೆ. 1993-94ರ ಆರ್ಥಿಕ ವರ್ಷದಲ್ಲಿ ಸಿಸ್ಟಂ ಇಂಪ್ರೂವ್‌ಮೆಂಟ್‌ಗೆ ಮುಖ್ಯವಾಗಿ ಹೆಚ್ಚು ಹಣ ಒದಗಿಸಬೇಕೆಂದು ಸರ್ಕಾರ ವಿಶೇಷ ಕಾರ್ಯಕ್ರಮ ಹಾಕಿಕೊಂಡಿದೆ. ಮಾನ್ಯ ಬೈರೇಗೌಡರು ಡೀಸಲ್ ಜನರೇಟರ್ ಅನ್ನು ಕೋಲಾರಕ್ಕೆ ಒದಗಿಸುತ್ತೇವೆಂದು ಹೇಳಿದ್ದೇವೆ ಎಂದು ಹೇಳಿದರು. ಆ ಪ್ರೊಪೋಸಲ್ ಇದೆ. ಅದಕ್ಕೆ 1993-94ರಲ್ಲಿ 50 ಕೋಟಿ ರೂಪಾಯಿ ಇಡುತ್ತಿದ್ದೇವೆ. ಇದು ಪ್ರತಿ ವರ್ಷವೂ ಬರುತ್ತಿದೆ. ತಮಗೆ ಗೊತ್ತಿದೆ, ಫ್ಯೂಯಲ್ ಲೀಕೇಜನ್ನು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮಿನಿಸ್ಟ್ರಿ ಒದಗಿಸದಿದ್ದರೆ, ಮತ್ತು ಅದಕ್ಕೆ ಒಪ್ಪಿಗೆ ಕೊಡದಿದ್ದರೆ ಅದನ್ನು ಅನುಷ್ಠಾನ ಮಾಡಲಿಕ್ಕೆ ಕಷ್ಟ ಇದೆ. ಅದಕ್ಕೆ ಕೇಂದ್ರ ಸರ್ಕಾರವಾಗಲಿ, ನಾವಾಗಲಿ ಸ್ವಲ್ಪ ಹಿಂದುಮುಂದು ನೋಡುತ್ತಿದ್ದೇವೆ. ಏಕೆಂದರೆ ಪವರ್ ಕಾಸ್ಟ್ ಬೆನಿಫಿಟ್ ರೇಷಿಯೋ 3 ರಿಂದ 4 ರೂಪಾಯಿ ಒಂದು ಯೂನಿಟ್‌ಗೆ ಆಗುತ್ತದೆ. ಇದು ಎಷ್ಟರಮಟ್ಟಿಗೆ ಸಾಧುವಾಗುತ್ತದೆಂದು ಆಲೋಚಿಸತಕ್ಕ ವಿಚಾರವಾಗಿದೆ. In the best interest of stabilizing the power, we will have to do it. ಆದರೆ ಪವರ್ ಸ್ಟೆಬಿಲೈಸ್ ಮಾಡತಕ್ಕದ್ದನ್ನು ಬೇರೆ ರೀತಿಯಲ್ಲಿಯೂ ಮಾಡಬಹುದು. ಅದು ಶರಾವತಿ ಇರಬಹುದು, ರಾಯಚೂರು ಥರ್ಮಲ್ ಪ್ಲಾಂಟ್ ಇರಬಹುದು, ನೈವೇಲಿ ಲಿಗ್ನೈಟ್ ಕಾರ್ಪೊರೇಷನ್ ಇರಬಹುದು, ಎಲ್ಲಾ ದೃಷ್ಟಿಯಿಂದ ಪವರನ್ನು ಈ ಭಾಗಕ್ಕೆ ಒದಗಿಸಿದಾಗ ಈ ಸಮಸ್ಯೆ ಬಗೆಹರಿಯುತ್ತದೆ. ಈ ಸಮಸ್ಯೆ ತೀವ್ರವಾಗಿ ಇರುವುದು ಕೋಲಾರ, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ, ತುಮಕೂರು ಭಾಗಗಳಲ್ಲಿ. ಅಲ್ಲದೆ ಬಾಕಿ ಕಡೆಗೂ ಕೂಡ ಇದೆ, ದಯವಿಟ್ಟು ಯಾರೂ ತಪ್ಪು ಭಾವಿಸಬಾರದು. ನಾನು ಏತಕ್ಕೆ ಹೇಳಿದೆ ಎಂದರೆ ಈ ಕೆಲವು ಜಿಲ್ಲೆಗಳಲ್ಲಿ ವಿಪರೀತ ಪಂಪುಸೆಟ್ಟುಗಳನ್ನು ಮಂಜೂರ್ಮಾಡಿಕೊಟ್ಟು ಅಲ್ಲಿ ಅದಕ್ಕೆ ಸರಿಸಮಾನವಾದ ವ್ಯವಸ್ಥೆ ಮಾಡದೆ ಅಸಮತೋಲನವಾದುದರಿಂದ ಈ ಸಮಸ್ಯೆ ಅಲ್ಲಿ ತೀವ್ರವಾಗಿದೆ. ಬಾಕಿ ಕಡೆಯ ಕೂಡ ಇದೆ. ಇಲ್ಲಿ ಸ್ಟೆಬಿಲೈಸ್ ಆಗತಕ್ಕ ರೀತಿಯಲ್ಲಿ ಎಲ್ಲಾ ಕಾರ್ಯಕ್ರಮ ನಾವು ಮಾಡಿದ್ದೇವೆ. ಏಕೆಂದರೆ ಕೋಲಾರದಲ್ಲಿ ಕೂಡ ತಮಗೆ ಗೊತ್ತಿದೆ, ಈಗಾಗಲೇ ಅನೇಕ ರೀತಿಯ ಕೆಲಸಗಳು ಅಲ್ಲಿ ಪ್ರಗತಿಯಲ್ಲಿವೆ; ಕೆಲವು ಕೆಲಸಗಳು ಆಗಿವೆ. 1992ರಲ್ಲಿ ಆ ಮಂಡಲಿ ಕೋಲಾರ ಜಿಲ್ಲೆಯಲ್ಲಿ ವಿವಿಧ ವಿದ್ಯುತ್ ಪ್ರಸರಣಾ ಮಾರ್ಗ ಮತ್ತು ಉಪವಿದ್ಯುತ್ ಕೇಂದ್ರ ನಿರ್ಮಾಣಕ್ಕೆ ಈಗಾಗಲೇ 18 ಕೋಟಿ ರೂಪಾಯಿ ವೆಚ್ಚ ಮಾಡಿದ್ದು, ಇನ್ನೂ ಸುಮಾರು 8 ಕೋಟಿ 90 ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ.

8.40 ಪಿ.ಎಂ

ಆದರಿಂದ ನಮಗೆ ತೃಪ್ತಿಪಟ್ಟುಕೊಳ್ಳುವುದು ಏನಿಲ್ಲ. ಈ ಕೆಲಸ ಕ್ರಮವಾಗಿ, ವ್ಯವಸ್ಥಿತವಾಗಿ ಆಗಬೇಕಾಗಿದೆ. ಸಮರೋಪಾದಿಯಲ್ಲಿ ಕೆಲಸ ಕಾರ್ಯಗಳನ್ನು ನಾವು ಜೋಡಿಸಿಕೊಂಡು ಹೋಗಬೇಕಾಗಿದೆ. ತಾವು ಹೇಳುತ್ತಿರುವುದು ಸರಿ. ರೈತರ ತಾಳ್ಮೆಯನ್ನು ಪರೀಕ್ಷೆ ಮಾಡತಕ್ಕ ಹಂತದಲ್ಲಿ ನಾವು ಇದ್ದೇವೆ. ರೈತರು ಬಹಳ ಸಮಯ ಸಹಿಸಿಕೊಳ್ಳುವುದಕ್ಕೆ ಆಗದೇ.... ಕಾನೂನನ್ನು ಕೈಯ್ಯಲ್ಲಿ ಎತ್ತಿಕೊಂಡು ಜೀಪನ್ನು ಸುಡುವುದು ಅಥವಾ ಆಸ್ತಿಪಾಸ್ತಿ ನಷ್ಟ ಮಾಡಿದರೆ, ಇನ್ನೊಂದು ಜೀಪನ್ನು ನಾವು ಕೊಡಬೇಕಾಗುತ್ತದೆ. ಆದರೆ ಅದೇ ಹಣವನ್ನು ನಾವು ಟ್ರಾನ್ಸ್‌ಫಾರ್ಮರ್‌ಗೆ ಖರ್ಚು ಮಾಡಿದರೆ, ಆ ಮಟ್ಟಿಗೆ ನಮ್ಮ ರೈತರಿಗೆ ಪ್ರಯೋಜನ

ಆಗುತ್ತದೆ. ಆದುದರಿಂದ ತಾಳ್ಮೆಯ ಮಿತಿಯಲ್ಲಿ ಇದ್ದರೆ ಒಳ್ಳೆಯದು. ರೋಷ, ಕ್ರೋಧ ಸರಿ. ಆದರೆ ಕಾನೂನನ್ನೇ ಕೈಗೆ ತೆಗೆದುಕೊಂಡು ಈ ರೀತಿಯಾಗಿ ಪರಿಸ್ಥಿತಿಯನ್ನು ಉಲ್ಬಣಗೊಳಿಸುವುದರಿಂದ ಸಮಸ್ಯೆ ಪರಿಹಾರ ಆಗುವುದಿಲ್ಲ, ಸಮಸ್ಯೆ ಇನ್ನೂ ಉಲ್ಬಣವಾಗುತ್ತದೆ. ಇದನ್ನು ಪರಿಹಾರ ಮಾಡುವುದಕ್ಕೆ ಖಂಡಿತವಾಗಿ ವಿಶೇಷ ಕಾರ್ಯಕ್ರಮ, ಕ್ಷಿಪ್ರವಾದಂಥ ಕಾರ್ಯಕ್ರಮದ ಬಗ್ಗೆ ಎಲ್ಲಿಂದಲಾದರೂ ಕೂಡ ಹಣ ತಂದು ಪವರ್ ಜನರೇಷನ್‌ಗೆ ಎಷ್ಟು ಪ್ರಾಮುಖ್ಯತೆ ಕೊಡುತ್ತೇವೋ ಅಷ್ಟೇ ಪ್ರಾಮುಖ್ಯತೆಯನ್ನು ಸಿಸ್ಟಮ್ ಇಂಪ್ರೂವ್‌ಮೆಂಟ್‌ಗೆ ಕೊಡದಿದ್ದರೆ, ಸಮಸ್ಯೆ ಪರಿಹಾರ ಆಗುವುದಿಲ್ಲ. ಇದು ಆದ್ಯತೆಯ ಕಾರ್ಯಕ್ರಮ ಆಗಬೇಕಾಗುತ್ತದೆ. ವಿದ್ಯುತ್ ಉತ್ಪಾದನೆಯ ಶೇಕಡ 1 ಭಾಗದಷ್ಟು ಹಣವನ್ನೂ ಕೂಡ ಸಿಸ್ಟಮ್ ಇಂಪ್ರೂವ್‌ಮೆಂಟ್‌ಗೆ ಖರ್ಚು ಮಾಡದಿರುವುದು ಒಂದೊಂದು ಸಾರಿ ಕಂಡುಬರುತ್ತದೆ. ಈ ಚಿತ್ರ ಇವತ್ತು ಬದಲಾವಣೆ ಆಗಬೇಕಾಗಿದೆ. ಇದು ಬದಲಾವಣೆ ಆಗದೇ ನಾವು ಬರೀ ಪಂಪುಸೆಟ್ಟುಗಳನ್ನು ಕೊಡುವುದು ಸರಿಯಲ್ಲ. ಈ ವರ್ಷ 1 ಲಕ್ಷ ಪಂಪುಸೆಟ್ಟು ಕೊಡುತ್ತೇವೆಂದು ಅಂಕಿಸಂಖ್ಯೆ ಕೊಟ್ಟಾಗ ಬಹುಶಃ ಮೇಜು ಕುಟ್ಟುತ್ತೇವೆ. ಆದರೆ ಆದರಿಂದ ಆಗತಕ್ಕ ದುಷ್ಪರಿಣಾಮ ಅಗಾಧವಾದದ್ದು. ಆ ದುಷ್ಪರಿಣಾಮವನ್ನು ತಡೆಯತಕ್ಕ ರೀತಿಯಲ್ಲಿ ಏನು ಇವತ್ತು ಚರ್ಚೆ ಆಗಿದೆ ಅದನ್ನು ನಾನು ಅಭಿನಂದಿಸುತ್ತೇನೆ. ಈ ಸದನದಲ್ಲಿ ಮೊದಲ ಬಾರಿಗೆ ನಾನು ಇಂತಹ ಒಳ್ಳೆಯ ಚರ್ಚೆಯನ್ನು ಕೇಳಿದೆ, 1 ಲಕ್ಷ ಪಂಪುಸೆಟ್ಟುಗಳನ್ನು ಕೊಡಿ ಎಂದು ಇವತ್ತು ನನಗೆ ಯಾರೂ ಕೇಳಲೇ ಇಲ್ಲ. ಕೊಡತಕ್ಕ ವಿದ್ಯುತ್‌ನ್ನು ಸರಿಯಾಗಿ ಕೊಡಿ, ಸಿಸ್ಟಮ್ ಇಂಪ್ರೂವ್‌ಮೆಂಟ್ ಮಾಡಿ ಎಂದು ಏನು ಹೇಳುತ್ತಿದ್ದೀರಿ ಬಹುಶಃ for the first time we are removing a major component of hypocracy from our minds. ಇದಕ್ಕಾಗಿ ನಾನು ವಿಶೇಷವಾಗಿ ಅಭಿನಂದನೆ ಮಾಡುತ್ತೇನೆ. ಇದು ಆಗಬೇಕು, ನಮ್ಮ ದೇಶದಲ್ಲಿ 86 ಕೋಟಿ ಜನಸಂಖ್ಯೆ ಇದೆ, ನಮ್ಮಲ್ಲಿನ ಕ್ಯಾಟಲ್ ವೆಲ್ತ್ ಇಡೀ ಪ್ರಪಂಚದಲ್ಲಿ ಇಲ್ಲ, ಎಂದು ಒಂದು ರೀತಿ ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಬಹುಶಃ ನಮ್ಮ ಈ ಜನಸಂಖ್ಯೆಯ ಭಾರದಿಂದಾಗಿ ನಮ್ಮ ಇಡೀ ಸಮಾಜ, ಇಡೀ ದೇಶದ ಆರ್ಥಿಕ ಸ್ಥಿತಿ ಕುಗ್ಗತಕ್ಕ ಪರಿಸ್ಥಿತಿಯ ಅರಿವು ಎಲ್ಲಿಯವರೆಗೆ ಸಮಾಜದಲ್ಲಿ ಬರುವುದಿಲ್ಲ, ಅಲ್ಲಿಯವರೆಗೆ quality of life in the society or country will not improve. ಮಾನ್ಯ ಬೈರೇಗೌಡರು ಒಳ್ಳೆಯ ಸೂಚನೆಯನ್ನು ಕೊಟ್ಟರು. ತಾವು ಮುಫತ್ತಾಗಿ ವಿದ್ಯುತ್ ಕೊಡುತ್ತೀರಿ, ಅದು ಪೇಪರ್‌ನಲ್ಲಿ ಬರುತ್ತದೆ, ಯಾರಿಗೆ ಏನು ಕೊಡುವುದು, ವಿದ್ಯುತ್ತನ್ನೇ ಕೊಡದೇ ಇದ್ದರೆ ಇವತ್ತು ವಿದ್ಯುತ್ ಒದಗಿಸುವುದಕ್ಕೆ ಅಸಾಧ್ಯವಾಗಿರತಕ್ಕ ಒಂದು ಪರಿಸ್ಥಿತಿಯಲ್ಲಿ ನಾವು ಇವತ್ತು ಮುಫತ್ತಾಗಿ ಕೊಡುತ್ತೇವೆಂದು ಹೇಳಿದರೆ ಅರ್ಥ ಇಲ್ಲ. ತಾವು ವಿದ್ಯುತ್ ಕೊಟ್ಟು ಬೇಕಾದರೆ ಚಾರ್ಜ್ ಮಾಡಿ ಎಂದು ಅತ್ಯಂತ ಜವಾಬ್ದಾರಿಯುತವಾದ ಮಾತನ್ನಾಡಿದರು. ಇಂತಹ ಜವಾಬ್ದಾರಿಯುತವಾದ ಮಾತು ನಮ್ಮಲ್ಲಿ ಇಲ್ಲಿಂದ ಪ್ರಾರಂಭವಾಗಬೇಕೇ ಹೊರತು ರೈತರಿಂದ ಪ್ರಾರಂಭವಾಗುವುದಲ್ಲ. ಈ ಸದನದಲ್ಲಿ ಮಾತುಗಳು ಬಂದಾಗ ಮಾತ್ರ ಬಹುಶಃ ನಮ್ಮ ಈ ಸಮಾಜದಲ್ಲಿರತಕ್ಕ ಸಮುದಾಯದ ಒಂದು ಜೀವನದ ಗುಣಮಟ್ಟ ಜಾಸ್ತಿಯಾಗುತ್ತದೆ. ಇವತ್ತು ನಾವು ಸಮಾಜದ ಸಮುದಾಯದ ಗುಣಮಟ್ಟವನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಿದಾಗ ಮಾತ್ರ ಸಮಾಜದಲ್ಲಿ ನೆಮ್ಮದಿ ಬರುತ್ತದೆ. ಇಲ್ಲದಿದ್ದರೆ ಈ ಸಮಾಜದಲ್ಲಿ ನೆಮ್ಮದಿ ಬರುವುದಿಲ್ಲ. ಅದು accumulated frustration will ultimately explode the whole society. ಇವತ್ತು ಆ ಸ್ಥಿತಿಗೆ ವಿದ್ಯುತ್ ಸರಬರಾಜಿನ ವ್ಯವಸ್ಥೆ ಬಂದಿದೆ ಎಂದರೆ ಅದರ ಅರಿವು, ಪ್ರಜ್ಞೆ ನನಗೆ ಸಂಪೂರ್ಣವಾಗಿದೆ. ಅದನ್ನು ಇವತ್ತು ನಾವು ಪರಿಹಾರ ಮಾಡತಕ್ಕ ಸಮರೋಪಾದಿ ಕಾರ್ಯಕ್ರಮಗಳನ್ನು ನಾವು ಖಂಡಿತವಾಗಿಯೂ ಕರ್ನಾಟಕ ವಿದ್ಯುತ್ ಮಂಡಲಿ ಹಾಗೂ ಕರ್ನಾಟಕ ವಿದ್ಯುತ್ ನಿಗಮದಿಂದ ಮಾಡುತ್ತೇವೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಂದರೆ ತಕ್ಷಣ ನಾನು ಮೀಟಿಂಗ್ ಕರೆಯುವುದಿಲ್ಲ. ಆದರಿಂದ

ನಿಮಗೆ ಏನೂ ಲಾಭ ಬರುವುದಿಲ್ಲ. 15 ದಿವಸಗಳ ಮೇಲೆ ನಾನು ಇದಕ್ಕೆ ಸಮರ್ಪಕವಾದ ಒಂದು ಸ್ವರೂಪವನ್ನು ಮತ್ತು ಪರಿಹಾರವನ್ನು ಸೂಚಿಸಿ ತಮ್ಮನ್ನು ಸಭೆಗೆ ಕರೆಯಿಸಿ ತಮ್ಮ ಸಲಹೆಗಳನ್ನು ಕೂಡ ಇದರಲ್ಲಿ ಜೋಡಿಸಿ ಆಮೇಲೆ ಸೂಕ್ತವಾದಂಥ ರೀತಿ ಎಲ್ಲಾ ರೈತರಿಗೆ ನೆಮ್ಮದಿಯಾಗತಕ್ಕ ಒಂದು ಕಾರ್ಯಕ್ರಮವನ್ನು ಖಂಡಿತವಾಗಿಯೂ ಕೊಡಲಿಕ್ಕೆ ಎಲ್ಲಾ ರೀತಿಯ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡುತ್ತವೆಂದು ತಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ದೇವನಹಳ್ಳಿಯಲ್ಲಿ 5ನೇ ಕಾರೀಖು ನಡೆದಂತಹ ಘಟನೆಯ ಬಗ್ಗೆ ಮಾನ್ಯ ಮುನಿನರಸಿಂಹಯ್ಯನವರು ಬಂದಿದ್ದರು, ಅಲ್ಲಿ ಏನೇನು ಸಮಸ್ಯೆಗಳು ಇವೆ ಅವನ್ನೆಲ್ಲಾ ನಾವು ಗ್ರಹಿಸಿ ಕೆ.ಇ.ಬಿ. ಅಧ್ಯಕ್ಷರ ಜೊತೆಯಲ್ಲಿ ಮಾತುಕತೆ ಮಾಡಿ ಈಗಾಗಲೇ ನಾವು ಟ್ರಾನ್ಸ್‌ಫಾರ್ಮರ್ ಕೊಟ್ಟಿದ್ದೇವೆ. ಆದರೆ ಅದರ ಕ್ಯಾಪಾಸಿಟಿ ಸಾಲದು. ಅದಕ್ಕೆ ನಾವು ಒತ್ತಡವನ್ನು ಕಡಿಮೆ ಮಾಡುವುದಕ್ಕೆ ಮತ್ತು ವಿದ್ಯುತ್ ಸರಬರಾಜನ್ನು ಉತ್ತಮಗೊಳಿಸುವುದಕ್ಕೆ ವಿಜಯಪುರದಲ್ಲಿ 8 ಎಂ.ಇ.ಎ. ಟ್ರಾನ್ಸ್‌ಫಾರ್ಮರ್ ಅನ್ನು ಅಳವಡಿಸಲು ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಒಂದೆರಡು ವಾರದಲ್ಲಿ ಪರಿಸ್ಥಿತಿ ಆ ಭಾಗದಲ್ಲಿ ಸುಧಾರಿಸುತ್ತದೆ. ಸಂಪೂರ್ಣವಾಗಿ ಸುಧಾರಿಸುತ್ತದೆಂದು ಹೇಳುವುದಿಲ್ಲ. ಸಾಧಾರಣವಾಗಿ ಸಮಾಧಾನಕರವಾದ ಒಂದು ಪರಿಸ್ಥಿತಿಯಲ್ಲಿ ಇದನ್ನು ಕೊಂಡೊಯ್ಯಲಿಕ್ಕೆ ಖಂಡಿತಾ ಸಾಧ್ಯವಾಗುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ದೇವನಹಳ್ಳಿಯ ರೈತರಾಗಲೀ ಬೇರೆ ಭಾಗದ ರೈತರಾಗಲೀ ತಮ್ಮ ಸಲಕರಣೆಗಳನ್ನು ತಮ್ಮ ವ್ಯವಸ್ಥೆಯನ್ನು ತಾವೇ ನಾಶಮಾಡಲಿಕ್ಕೆ ಹೋದರೆ ಹೇಗೆ? ಅದು ಸರ್ಕಾರದ್ದು ಅಲ್ಲ, ಅದು ನಿಮ್ಮದು, ಸಾರ್ವಜನಿಕ ಆಸ್ತಿ, ಸಾರ್ವಜನಿಕರ ಆಸ್ತಿಯನ್ನು ನೀವೇ ಹೊಡೆಯಲಿಕ್ಕೆ ಹೋದರೆ ಪರಿಸ್ಥಿತಿ ಏನಾಗಬಹುದು? ಒಂದು ಮಾತನ್ನು ಒಪ್ಪುತ್ತೇನೆ, ನಿಮ್ಮ ಐ.ಪಿ. ಸೆಟ್ಟುಗಳು ಸುಟ್ಟು ಭಸ್ಮವಾಗುತ್ತಿರುವಾಗ ಈ ರೀತಿಯ ಒಂದು ಹಠ ಒಂದು ಸೇಡು ಯಾರ ಮೇಲೆ? ನಿಮ್ಮ ಮೇಲೆ ನೀವು ಏರಿದ ಹಾಗೆ ಆಗುತ್ತದೆ. ಆದ್ದರಿಂದ ಕರ್ನಾಟಕ ರಾಜ್ಯದ ರೈತರಿಗೆ ಈ ಸದನದ ಮುಖೇನ ತಮ್ಮ ಮೂಲಕ ನಾನು ಮನವಿ ಮಾಡಿಕೊಳ್ಳುವುದೇನೆಂದರೆ ನಿಮ್ಮ ಸಮಸ್ಯೆಗಳ ಅರಿವು ನಮಗೆ ಇದೆ ಅದನ್ನು ಪರಿಹಾರ ಮಾಡುವುದಕ್ಕೆ ಸಮರೋಪಾದಿಯಲ್ಲಿ ನಾವು ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಇದು ಬಾಯಿ ಮಾತಿನಲ್ಲಿ ಅಲ್ಲ, ಈಗಾಗಲೇ ಹೇಳಿದ್ದೇನೆ. ಜನರೇಷನ್ ಯಾವರೀತಿಯಲ್ಲಿ ಪ್ರಾಮುಖ್ಯವೋ ಸರಿಯಾಗಿ ಮತ್ತು ದಕ್ಷತೆಯಿಂದ ವಿದ್ಯುತ್ ಸರಬರಾಜು ಮಾಡುವುದೂ ಕೂಡ ಅಷ್ಟೇ ಆದ್ಯತೆಯ ಒಂದು ಕಾರ್ಯಕ್ರಮವೆಂದು ತಿಳಿದುಕೊಂಡು ನಾವು ಮುಂದೆ ಹೆಜ್ಜೆ ಇಡುತ್ತೇವೆ. ಎಲ್ಲಿ ಅಸಮತೋಲನೆ ಇದೆ ಅದನ್ನು ಪರಿಹಾರ ಮಾಡಲಿಕ್ಕೆ ಈ ಒಂದು ಸಮಸ್ಯೆಯ ಸುಳಿಯಿಂದ ರೈತರನ್ನು ಪಾರು ಮಾಡಲಿಕ್ಕೆ ಎಲ್ಲಾ ರೀತಿಯಲ್ಲೂ ನಮ್ಮ ಸರ್ಕಾರ ಮತ್ತು ಕೆಇಬಿ ಮಾಡಲಿಕ್ಕೆ ಸಜ್ಜುಗೊಳಿಸುತ್ತೇವೆಂದು ಹೇಳುತ್ತೇನೆ. ಕೆಇಬಿಯಲ್ಲಿ ಟ್ರಾನ್ಸ್‌ಫಾರ್ಮರ್ ತಯಾರು ಮಾಡುವುದಕ್ಕೆ ನಾವೇ ಹಣ ಕೊಡಬೇಕಾಗಿದೆಯೆಂದು ತಾವು ಹೇಳಿದ್ದೀರಿ. ಕೆಇಬಿಯಲ್ಲಿ ಭ್ರಷ್ಟಾಚಾರ ಇದ್ದರೂ ಕೂಡ ಅದನ್ನು ಗುರುತಿಸಿ, ನಿಗ್ರಹಿಸುವುದಕ್ಕೆ ನಾವು ಖಂಡಿತವಾಗಿಯೂ ಎಲ್ಲಾ ಪ್ರಯತ್ನವನ್ನು ಮಾಡುತ್ತೇವೆಂದು ಅಧ್ಯಕ್ಷರ ಮುಖೇನ ತಮಗೆ ಹೇಳಿ, ಅತ್ಯುತ್ತಮವಾದ ಚರ್ಚೆ ಅತ್ಯಂತ ಶ್ರೇಷ್ಠ ಗುಣಮಟ್ಟದ ಚರ್ಚೆಯನ್ನು ಮಾಡಿ ನಮಗೆ ಬೇಕಾದಂತಹ ಸಲಹೆಗಳನ್ನು ಕೊಟ್ಟಿದ್ದೀರಿ, ನಾನು ವಿವರವಾಗಿ ಎಲ್ಲಾ ಪಾಯಿಂಟ್ಸ್‌ಗಳಿಗೆ ಉತ್ತರ ಹೇಳಿದ್ದೇನೆಂದು ಹೇಳುವುದಿಲ್ಲ. 15-20 ದಿವಸಗಳ ಮೇಲೆ ತಮ್ಮನ್ನೆಲ್ಲ ಕರೆದು ಮಾತನಾಡಿ ಬಹುಶಃ ಸಮಾಧಾನಕರವಾದಂತಹ ಉತ್ತರ ಕೊಡತಕ್ಕ ಪ್ರಯತ್ನವನ್ನು ಖಂಡಿತವಾಗಿಯೂ ನಾನು ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ:- ನಾನು ಬಾಕಿ ವಸೂಲಿ ಮಾಡುವ ಬಗ್ಗೆ ಹೇಳಿದ್ದೇನೆ. ತಕ್ಷಣ ಪವರ್ ಕಟ್‌ನ್ನು ಇಂಡಸ್ಟ್ರೀಸ್‌ಗಳಿಗೆ ಜಾಸ್ತಿ ಮಾಡಿ ವ್ಯವಸಾಯಕ್ಕೆ ಪವರ್ ಕೊಡಿಯೆಂದು ಹೇಳಿದ್ದೇನೆ. ಅದು ತಕ್ಷಣ ಆಗಬೇಕಾಗಿದೆ ಅದರ ಬಗ್ಗೆ ಹೇಳಿ.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಅಧ್ಯಕ್ಷರೆ, ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೆ. ಎಲ್ಲಾ ವಿಚಾರಗಳಿಗೂ ತಾವು ಸಮರ್ಪಕವಾದ ಉತ್ತರ ಕೊಡದಿದ್ದರೂ ಸಹ ಒಂದು ಮಾತನ್ನು ಹೇಳಿದರು. ದೇವನಹಳ್ಳಿ ಪ್ರಕರಣದಲ್ಲಿ ತಾವೇನು ಕಾನೂನು ಕೈಗೆತ್ತಿಕೊಂಡಿದ್ದು ಸರಿಯಲ್ಲ ಅದು ತಪ್ಪೆಂದು ಹೇಳಿದ್ದಾರೆ, ಅದನ್ನು ನಾನು ಒಪ್ಪುತ್ತೇನೆ. ಆದರೆ ನಮ್ಮ ಪರಿಪಾಠ ಮತ್ತು ಪ್ರವೃತ್ತಿ ಮುಖ್ಯವಾಗಿ ಕೆಇಬಿಯ ಮೇಲೆ ಏನಿದೆ ಅಂದರೆ ಕೆಇಬಿಯವರು ಇಂತಹ ಪ್ರಕರಣಗಳು ಆದಾಗ ಮಾತ್ರ ಅವರು ಪರಿಹಾರವನ್ನು ಕೊಟ್ಟಿದ್ದಾರೆ. ಇವತ್ತು ಸಹ ತಾವು ತಮ್ಮ ಭಾಷಣದಲ್ಲಿ ಹೇಳಿದ ಧಾಟಿಯನ್ನು ನೋಡಿದರೆ, ದೇವನಹಳ್ಳಿಯಲ್ಲಿ ಆದಂತಹ ಪ್ರಕರಣದಿಂದ ಅಲ್ಲಿಯ ಜನರಿಗೆ ಪರಿಹಾರವನ್ನು ಕೊಟ್ಟಿದ್ದೀರಾ, ಹಾಗಾಗಿ ನಮಗೆ ಏನು ಅನಿಸುತ್ತದೆ ಅಂದರೆ ನಾವು ಉಚಿತವಾದ ಮತ್ತು ಯೋಗ್ಯವಾದಂತಹ ಪರಿಹಾರಗಳನ್ನು ಪಡೆಯಬೇಕಾದರೆ ನಾವು ಆ ರೀತಿಯ ಆಂದೋಳನವನ್ನು ಮಾಡಬೇಕಾ? ಕಳೆದ ವಾರಗಳಿಂದ ಚಿತ್ರದುರ್ಗ ನಗರದಲ್ಲಿ ಕುಡಿಯಲಿಕ್ಕೆ ನೀರಿಲ್ಲ. ಕುಡಿಯುವ ನೀರು ಸರಬರಾಜು ಮಾಡಲಿಕ್ಕೆ ಸಮರ್ಪಕವಾದ ವಿದ್ಯುತ್ ಕೊಡುವುದಕ್ಕೆ ನಾವು ಕೇಳಿಕೊಂಡಿದ್ದೇವೆ. ದೇವನಹಳ್ಳಿ ಪ್ರಕರಣವನ್ನು ಏತಕ್ಕೋಸ್ಕರ ಪುನರಾವರ್ತನೆ ಮಾಡಬಾರದು? ಅದೇ ರೀತಿಯಾಗಿ ಗ್ರಾಮಾಂತರ ಪ್ರದೇಶದ ಜನರಿಗೆ ನೀರನ್ನು ಕೊಡಲಿಕ್ಕೆ ವಿದ್ಯುತ್ ಕೊಡಿಯೆಂದು ಕೇಳಿದೆ. ಆದ್ಯತೆಯ ಮೇಲೆ ತಾವು ಕೊಡಬೇಕೆಂದು ಹೇಳಿದರೂ ಸಹ ನಾನು ತಮ್ಮನ್ನು ಕೇಳುತ್ತೇನೆ ಇವತ್ತಿನವರೆಗೆ ಎಷ್ಟು ದಿವಸಗಳಾದ ಮೇಲೆ ವಿದ್ಯುತ್ ಕೊಟ್ಟಿದ್ದಾರೆ ಅದನ್ನು ಪರಿಶೀಲನೆ ಮಾಡಿ. ಅದನ್ನು ಮಾಡದೆ, ಕೇವಲ ಕಾನೂನನ್ನು ಕೈಗೆತ್ತಿಕೊಳ್ಳಬೇಡಿಯೆಂದು ಹೇಳುವ ಮುಖಾಂತರ ನೀವು ಆಕ್ರೋಶ ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ. ಒಂದಲ್ಲ ಎರಡು ವಾರ ಆಗಬಹುದೆಂದು ತಾವು ಹೇಳಿದಿರಿ. ಇದರ ಬಗ್ಗೆ ನೀವು ಸಂಬಂಧಪಟ್ಟ ಕೆ.ಇ.ಬಿ. ಅಧಿಕಾರಿಗಳಿಗೆ ತಿಳಿಸಿ, ಏನು ಭ್ರಷ್ಟಾಚಾರದಿಂದ, ಅದಕ್ಷತೆಯಿಂದ ತೊಂದರೆಯಾಗುತ್ತಿದೆ. ಸ್ವಾಮಿ, ನಮಗೆ ಕುಡಿಯುವ ನೀರಿಗೆ ಟ್ರಾನ್ಸ್‌ಫಾರ್ಮರ್ ಕೊಡುವುದಿಲ್ಲ, ಆದರೆ ಬೇರೆಯವರಿಗೆ, ಐ.ಪಿ. ಸೆಟ್‌ನವರಿಗೆ ದುಡ್ಡು ತೆಗೆದುಕೊಂಡು ಕೊಡುತ್ತಿದ್ದೀರಲ್ಲ; ನಾನು ಕೇಳುತ್ತಿದ್ದೇನೆ ನನಗೆ ಉತ್ತರ ಕೊಡಿ. ಇವತ್ತಿನ ದಿವಸ ಚಿತ್ರದುರ್ಗ ಜಿಲ್ಲೆಯಲ್ಲಿ ನೀವು ಯಾವ ಆದ್ಯತೆ ಆಧಾರದ ಮೇಲೆ ಟ್ರಾನ್ಸ್‌ಫಾರ್ಮರ್ ಕೊಟ್ಟಿದ್ದೀರಿ? ತಮಗೆ ಬೇಕಾದ ರೀತಿಯಲ್ಲಿ ಪ್ರಭಾವಕ್ಕೆ ಒಳಗಾಗಿ ಟ್ರಾನ್ಸ್‌ಫಾರ್ಮರ್ ಕೊಟ್ಟಿದ್ದೀರಿ. ಇದರ ಬಗ್ಗೆ ವಿಚಾರಣೆ ಮಾಡಬೇಕು. 2-3 ತಿಂಗಳಾದರೂ ಕೊಡುವುದಿಲ್ಲ, ಕೆಲವರಿಗೆ 3 ದಿವಸಕ್ಕೆ ಕೊಡುತ್ತೀರಲ್ಲ, ಇದರ ಅರ್ಥವೇನು?

ಶ್ರೀ ಎಂ. ವೀರಪ್ಪ ಮೊಯಿಲಿ:- ತಾವು ಹೇಳಿದಂಥ ವಿಚಾರಗಳನ್ನು ಗಮನಿಸಿ ಉತ್ತರಿಸಿದ್ದೇನೆ. ನಾವು ಕೆ.ಇ.ಬಿ.ಯಲ್ಲಿ ಉನ್ನತ ಮಟ್ಟದ ಅಧಿಕಾರಿಗಳ ಸಮಿತಿ ಮಾಡಿಕೊಂಡು ಮಾನಿಟರ್ ಮಾಡಬೇಕೆಂದಿದ್ದೇವೆ. ತಾವು ಹೇಳಿದ್ದುದು ಸರಿ. ಏಕೆಂದರೆ ಎಲ್ಲೆಲ್ಲಿ ಇರಿಟೇಂಟ್ ಪಾಯಿಂಟ್ಸ್ ಜಾಸ್ತಿ ಇವೆ ಅಲ್ಲಿ ಆದ್ಯತೆ ಕೊಡಬೇಕು. ಏಕೆಂದರೆ 3-4 ತಿಂಗಳುಗಳಿಂದ ಟ್ರಾನ್ಸ್‌ಫಾರ್ಮರ್ ಇಲ್ಲದಿರತಕ್ಕದ್ದು. ಇದರಿಂದಾಗಿ ಅತೃಪ್ತಿ ಜಾಸ್ತಿಯಾಗುತ್ತದೆ, ಜನರು ಹತಾಶರಾಗುತ್ತಾರೆ. ಇದನ್ನೆಲ್ಲಾ ನಿವಾರಣೆ ಮಾಡುವುದಕ್ಕೆ ನಾವು ಒಂದು ಆದ್ಯತೆ ಪಟ್ಟಿಯನ್ನು ತಯಾರಿಸಿ ಒಂದೊಂದು ವಿಭಾಗದಲ್ಲಿ ಯಾವುದು ಆದ್ಯತೆ ಇರಬೇಕಾಗುತ್ತದೆ, ಎಲ್ಲೆಲ್ಲಿ ಟ್ರಾನ್ಸ್‌ಫಾರ್ಮರ್‌ಗಳನ್ನು ತಕ್ಷಣ ಒದಗಿಸಬೇಕಾಗುತ್ತದೆ ಎಲ್ಲೆಲ್ಲಿ ಕೆಪಾಸಿಟಿ ಲೋಡ್ ಫ್ಯಾಕ್ಟರ್ ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಬೇಕು ಅದನ್ನು ಹೇಳಿದೆ. ಅದು ವರ್ಕ್‌ಔಟ್ ಆಗಿದೆ. ಯಾವುದೇ ವಿಭಾಗಗಳಲ್ಲಿ ಅಧಿಕಾರಿಗಳು ಆದ್ಯತೆ ತಪ್ಪಿಸಿ ಅವರು ಅವ್ಯವಸ್ಥಿತವಾದ ಪರಿಸ್ಥಿತಿಯಲ್ಲಿ ಕೆಲಸ ಮಾಡಿದರೆ ಅಂಥ ಒಂದು ಅಪರಾಧವನ್ನು ಗುರುತಿಸಿ ಅವರನ್ನು ಶಿಕ್ಷೆಗೆ ಒಳಪಡಿಸತಕ್ಕ ಕೆಲಸ ಅಥವಾ ಶಿಸ್ತು ಕ್ರಮಕ್ಕೆ ಒಳಪಡಿಸತಕ್ಕ ಕೆಲಸವನ್ನು ಖಂಡಿತವಾಗಿ ಮಾಡಬೇಕಾಗುತ್ತದೆ. ತಾವು ಹೇಳಿದ ಹಾಗೆ ಯಾರು ಹೆಚ್ಚು ಪ್ರಭಾವ ಬೀರುತ್ತಾರೆ ಅಥವಾ ಭ್ರಷ್ಟಾಚಾರ ಇದ್ದರೆ ಹೆಚ್ಚು ಹಣ ಯಾರು ಕೊಡುತ್ತಾರೆ, ಅವರಿಗೆ ಕೊಡುವಂಥಾದ್ದು ಆಗಬಾರದು. ಯಾವುದಕ್ಕಾದರೂ there

must be a system evolved, by which a priority is fixed and the demand is responded to by the respective authorities. This is what I have said, Of course I do not think I could make you understand. I think I must have generally said. ಆದುದರಿಂದ ತಾವು ಏನು ಹೇಳಿದಿರಿ, ಚಿತ್ರದುರ್ಗ ಇರಬಹುದು, ಅನೇಕ ಭಾಗಗಳಲ್ಲಿ ತಾವು ಹೇಳಿದ ಹಾಗೆ ತಾಳ್ಮೆಯ ಮೇರೆ ಮೀರಿದ ಮೇಲೆ ಆದ್ಯತೆ ಅರಿವು ಸರ್ಕಾರಕ್ಕೆ ಆಗಬಾರದು, ಕೆ.ಇ.ಬಿ.ಗೆ ಆಗಬಾರದು, ತಾಳ್ಮೆಯ ಮೇರೆ ಮೀರುವ ಮೊದಲೇ ಆದ್ಯತೆಯನ್ನು ಗ್ರಹಿಸಿ ಸ್ಪಂದಿಸತಕ್ಕ ಒಂದು ಮನೋಭೂಮಿಕೆಯನ್ನು ಕೆ.ಇ.ಬಿ.ಯಲ್ಲಿ ನಿರ್ಮಾಣ ಮಾಡುವುದಕ್ಕೆ ನಾನು ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆಂದು ಈಗಾಗಲೇ ಹೇಳಿದ್ದೇನೆ, ಅದನ್ನು ಪುನರುಚ್ಚಾರ ಮಾಡುತ್ತೇನೆ. ವಾಟರ್ ಸಪ್ಲೈ ಬಗ್ಗೆ ಅಥವಾ ಮಿನಿವಾಟರ್ ಸಪ್ಲೈ ಸ್ಕೀಂ ಏನಾದರೂ ಇದ್ದರೆ ಅದನ್ನು ನಾವು ತಕ್ಷಣ ಕಮಿಷನ್ ಮಾಡುತ್ತೇವೆ. ಇಂಥ 400 ಯೋಜನೆಗಳು ಇವೆ, ಅವನ್ನು ಮಾಡುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ:- ನೀವು ಟ್ರಾನ್ಸ್‌ಫಾರ್ಮರ್ ಕೊಡುವಾಗ ಇವುಗಳಿಗೆ ಆದ್ಯತೆಕೊಡದೆ ಕೇವಲ ಬೇರೆ ಬೇರೆ ಕಾರಣಕ್ಕೋಸ್ಕರ ಕೊಟ್ಟಿದ್ದೀರಿ. ಅದಕ್ಕಿಂತ ಹೆಚ್ಚಾಗಿ ಕೇಂದ್ರದಲ್ಲಿ ನಿಮ್ಮದೊಂದು ಸ್ಟೋರ್ಸ್ ಇದೆ. ಇಲ್ಲಿಂದ ನೀವು ಟ್ರಾನ್ಸ್‌ಫಾರ್ಮರ್‌ಗಳನ್ನು ಯಾವ ಆದ್ಯತೆ ಮೇಲೆ ಬೇರೆ ಬೇರೆ ವಿಭಾಗಗಳಿಗೆ ಕಳುಹಿಸುತ್ತೀರಿ? ಅದರ ವಿವರ ಕೊಡಿ. ಇಷ್ಟಬಂದ ಹಾಗೆ ಯಾರು ಫೋನ್ ಮಾಡುತ್ತಾರೆ ಅವರಿಗೆ ಬೇಕಾದಂತ ರೀತಿಯಲ್ಲಿ ಕೊಡುವುದು, 3-4 ತಿಂಗಳಿಂದ ಟ್ರಾನ್ಸ್‌ಫಾರ್ಮರ್ಸ್‌ಗಾಗಿ ಕಾದವರಿಗೆ ಅದನ್ನು ಕೊಡುವುದಿಲ್ಲ.

ಅಧ್ಯಕ್ಷರು:- ಅದನ್ನೆಲ್ಲ ಸ್ಟ್ರೀಮಲೈನ್ ಮಾಡುತ್ತೇನೆಂದು ಹೇಳುತ್ತಿದ್ದಾರಲ್ಲ.

ಶ್ರೀ ಹೆಚ್. ಏಕಾಂತಯ್ಯ:- ಮಾಡಲಿ, ಅದಕ್ಕೆ ಒಂದು ಕಾಲಮಿತಿ ಬೇಕು.

Mr.SPEAKER:- Give the Government sometime.

ಶ್ರೀ ಹೆಚ್. ಏಕಾಂತಯ್ಯ:- ನಾವು ಖಂಡಿತವಾಗಿ ಕೊಡುತ್ತೇವೆ. ಆದರೆ ದೇವನಹಳ್ಳಿಯಲ್ಲಿ ಆದಂಥ ಪ್ರಕರಣಗಳು ಇನ್ನು ಮೇಲೆ ಆಗುವುದು ಜಾಸ್ತಿ, ಏಕೆಂದರೆ ಬೇಸಿಗೆ ಕಾಲ ಬರುತ್ತಿದೆ. ಪೈರುಗಳಿಗೆ ನೀರು ನೀಡಲು ಹೆಚ್ಚು ಸಮಯ ಬೇಕಾಗುತ್ತದೆ. ಆ ದೃಷ್ಟಿಯಿಂದ ಸಾಧ್ಯವಾದಷ್ಟು ಜಾಗ್ರತೆ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು. ತಾವು ಏನು ಸಭೆ ಕರೆಯುತ್ತೇವೆಂದು ಹೇಳಿದಿರಿ, ಮುಖ್ಯವಾಗಿ ರೈತರು ಏನು ಬಯಲು ನಾಡಿನಲ್ಲಿದ್ದಾರೆ ಚಿತ್ರದುರ್ಗದಿಂದ ಕೋಲಾರದವರೆಗೆ ಇವರು ಬಹಳ ಗಂಭೀರವಾದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇವರ ಬಗ್ಗೆ ತೀವ್ರವಾಗಿ ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಮುನಿನರಸಿಂಹಯ್ಯ:- ಹಿರಿಯ ಸದಸ್ಯರು ಮಾತನಾಡುತ್ತಾ ಅನೇಕ ವಿಚಾರಗಳನ್ನು ಹೇಳಿದರು. ದೇವನಹಳ್ಳಿ ಘಟನೆ ನಡೆದ ಮೇಲೆ ಮುಖ್ಯಮಂತ್ರಿಗಳು ನಾನು ಕ್ರಮ ಕೈಗೊಳ್ಳುತ್ತೇನೆಂದು ಹೇಳಿದ್ದಾರೆ. ಇಡೀ ರಾಜ್ಯದಲ್ಲಿ ನಾವು ಗಲಾಟೆ ಶುರು ಮಾಡಬೇಕಾಗುತ್ತದೆಂದು ಹೇಳುತ್ತಿದ್ದಾರೆ. ನಾನು ಹಿರಿಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಹಿಂದೆ ಮಾತನಾಡಿದಾಗ ಕೂಡ ನಾನು ಹೇಳಿದ್ದೇನೆ. ಮುಖ್ಯಮಂತ್ರಿಗಳು ಜನವರಿ 5ನೇ ತಾರೀಖು ನಮಗೆ ಆದೇಶ ಕೊಟ್ಟು ಆ ಟ್ರಾನ್ಸ್‌ಫಾರ್ಮರ್‌ಗಳನ್ನು ವಿಜಯಪುರ 66 ಕೆ.ವಿ. ಸ್ಟೇಷನ್ನಿಗೆ ಒದಗಿಸತಕ್ಕ ಕಾರ್ಯಕ್ರಮ ಕೈಗೆತ್ತಿಕೊಂಡಿದ್ದಾರೆ. ಈಗಾಗಲೇ ಟ್ರಾನ್ಸ್‌ಫಾರ್ಮರ್ ಸಾಗಿಸತಕ್ಕ ಕೆಲಸ ಪ್ರಾರಂಭವಾಗುವ ಮಟ್ಟಕ್ಕೆ ಬಂದಿದ್ದರೂ ಕೂಡ ನಾನು ಆ ಸಂದರ್ಭದಲ್ಲಿ ನನ್ನ ರೈತರಲ್ಲಿ ಮನವಿ ಮಾಡಿಕೊಂಡೆ. ಇದರ ಬಗ್ಗೆ ನಾವು ಆತುರಪಡತಕ್ಕಂತಾದ್ದಾಗಲೀ, ಮತ್ತು ವಿಕೋಪಕ್ಕೆ ಹೋಗುವಂಥ ಕೆಲಸ ಮಾಡಬಾರದು ಎಂದು ಹೇಳಿದರೂ, ಯಾವುದೋ ಒಂದು ರೀತಿಯಲ್ಲಿ

ಈ ಘಟನೆ ನಡೆದುಹೋಯಿತು. ನಾನಂತೂ ಈ ಸಂದರ್ಭದಲ್ಲಿ ಮನವಿ ಮಾಡುವುದು, ಇವರು ಒಂದು ಪತ್ರಿಕೆಯನ್ನೂ ಸಹ ಅಚ್ಚು ಹಾಕಿಸಿ, ಹೊಸಕೋಟೆ ಮತ್ತು ದೊಡ್ಡಬಳ್ಳಾಪುರದಲ್ಲಿ ಹೆಚ್ಚು ವಿದ್ಯುತ್ ಉಪಯೋಗವಾಗುತ್ತದೆ ಎಂದು ಪ್ರಚೋದನೆ ಮಾಡಿ, ರೈತರನ್ನು ಕರೆತಂದರು. ಮಾನ್ಯ ಹಿರಿಯ ಸದಸ್ಯರು ಈಗ ಏನು ಮನವಿ ಮಾಡಿದರು. ದೇವನಹಳ್ಳಿಯಲ್ಲಿ ಗಲಾಟೆ ಮಾಡಿದ್ದಕ್ಕೆ, ಟ್ರಾನ್ಸ್‌ಫಾರ್ಮರ್ ಅಥವಾ ವಿದ್ಯುತ್ ಸಿಕ್ಕಿಬಿಟ್ಟಿತು ಎನ್ನುವ ತರದಲ್ಲಿ ಹೋಗುವುದಾದರೆ, ಇಡೀ ರಾಜ್ಯದಲ್ಲೇ ನಾಳೆ ಬೆಳಿಗ್ಗೆ ಇದೊಂದು ಸಮಸ್ಯೆಯಾಗಬಹುದು ಎಂದು ತಮ್ಮ ಮುಖೇನ ಮಾನ್ಯ ಹಿರಿಯ ಸದಸ್ಯರಲ್ಲಿ ಮನವಿ ಮಾಡಿಕೊಂಡು ನನ್ನ ಈ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– 7 ಜಿಲ್ಲೆಗಳಲ್ಲಿ ಪ್ರವಾಹ ಬಂದಿದ್ದು ತಮಗೂ ಗೊತ್ತಿದೆ. ಅಲ್ಲೆಲ್ಲಾ we had to divert 400 transformers. ಆ ಏರಿಯಾಕ್ಕೆ ನಾವು ಒದಗಿಸಬೇಕಾಗಿ ಬಂತು. ಇಲ್ಲದಿದ್ದರೆ ಇಂತಹ ಏರಿಯಾಗಳಲ್ಲಿ ಕೊಡಬಹುದಿತ್ತು. 400 ಟ್ರಾನ್ಸ್‌ಫಾರ್ಮರುಗಳು ಪ್ರವಾಹದಲ್ಲಿ ಸಂಪೂರ್ಣ ಕೊಚ್ಚಿಕೊಂಡು ಹೋಗಿ, ಮತ್ತೆ ಮಗುಚಿ ಬಿದ್ದು, ಎಲ್ಲಾ ಸಮಸ್ಯೆಗಳು ಬಂದಿದ್ದರಿಂದ, 400 ಟ್ರಾನ್ಸ್‌ಫಾರ್ಮರುಗಳನ್ನು ಅಲ್ಲಿ ಡೈವರ್ಟ್ ಮಾಡಬೇಕಾಗಿ ಬಂತು.

ಶ್ರೀ ಸಿ. ಬೈರೇಗೌಡ:– ಪವರ್ ಮಿನಿಸ್ಟರುಗಳ ಸಮ್ಮೇಳನದಲ್ಲಿ ಮೊನ್ನೆ ಒಂದು ಯೂನಿಟ್ಟಿಗೆ 50 ಪೈಸೆ ಹಾಕಬೇಕೆಂದು ತೀರ್ಮಾನವಾಗಿದೆ. ಒಂದು ವಿದ್ಯುತ್ ಪಂಪ್‌ಸೆಟ್ಟಿಗೆ 50 ಪೈಸೆ ಹಾಕಬೇಕೆಂದು ತೀರ್ಮಾನವಾಗಿದೆ. ನಮ್ಮ ರಾಜ್ಯದ ಮೂಲಕ ಸಂಬಂಧಪಟ್ಟ ಮಂತ್ರಿಗಳೂ ಅಲ್ಲಿಗೆ ಹೋಗಿದ್ದರೋ ಅಥವಾ ನಿಮ್ಮ ಅಧಿಕಾರಿಗಳು ಹೋಗಿದ್ದರೋ ಗೊತ್ತಿಲ್ಲ. ನೀವೂ ಸಹ ಅದರಲ್ಲಿ ಭಾಗವಹಿಸಿರತಕ್ಕಂಥಾದ್ದು ಇದೆ. ಅದಕ್ಕೆ ನೀವು ಭಾಗಿಯಾಗಿದ್ದರೆ, ನೀವು ಏನು ಹೇಳುತ್ತೀರಿ. ತಾವು ಅಲ್ಲಿಯ ತೀರ್ಮಾನ ಕೇಳಿದ್ದೀರಿ. It is not binding on the entire nation, that 50 paise per unit must be collected from the farmers. Are you going to levy if you have accepted that proposal of 50 paise per unit for IP sets? ಇದರ ಬಗ್ಗೆ ಸ್ವಲ್ಪ ದಯವಿಟ್ಟು ಹೇಳಿ. ಆಮೇಲೆ ನಾನು ಇರತಕ್ಕ ಬಾಕಿ ಬಗ್ಗೆಯೂ ಹೇಳಿದ್ದೆ. ಸರ್ಕಾರಕ್ಕೆ, ಕೆ.ಇ.ಬಿ.ಗೆ ಹಣ ಬರುತ್ತದೆ. ಇದನ್ನು ಸ್ವಲ್ಪ ದಯವಿಟ್ಟು ಆಲೋಚನೆ ಮಾಡಿ. ಬಡ್ಡಿ ವಜಾ ಮಾಡುತ್ತೇವೆಂದು ಹೇಳಿ. ಆಮೇಲೆ ಪವರ್ ಕಟ್, ಟೆಂಪರರಿ ಮೆಷರ್ ಆಗಿ, ಇಂಡಸ್ಟ್ರೀಸ್‌ಗೆ ಏಪ್ರಿಲ್, ಮೇವರೆಗೂ ಪವರ್ ಕಟ್‌ನ್ನು ಜಾಸ್ತಿ ಮಾಡಿ, ನಮಗೆ ಕೊಡಿ, ವ್ಯವಸಾಯಕ್ಕೆ ವಿದ್ಯುತ್ ಕೊಡಿ. ಇದರಿಂದ ರೈತರ ಆಕ್ರೋಶವೂ ಕಡಿಮೆಯಾಗುತ್ತದೆ. ದಯವಿಟ್ಟು ಮುಖ್ಯವಾದ ಈ ಮೂರು ಅಂಶಗಳಿಗೆ, ಉತ್ತರ ಕೊಡಬೇಕೆಂದು, ಅಧ್ಯಕ್ಷರ ಮೂಲಕ ತಮ್ಮನ್ನು ವಿನಂತಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಬಡ್ಡಿ ವಿನಾಯಿತಿ ಬಗ್ಗೆ ತಾವು ಸೂಚನೆ ಕೊಟ್ಟಿದ್ದೀರಿ, ಅದರ ಬಗ್ಗೆ ಸರ್ಕಾರ ಗಮನಕೊಟ್ಟು ತೀರ್ಮಾನ ಮಾಡುತ್ತದೆ. ಇನ್ನು ತಾವು 50 ಪೈಸೆ ಬಗ್ಗೆ ಏನು ಹೇಳಿದ್ದೀರಿ. ಅದು ಒಂದು ಶಿಫಾರಸ್, ತಾವು ಬೈಂಡಿಂಗ್ ಎಂದು ಹೇಳಿದ್ದೀರಿ, ಅದು ಸರಿಯಲ್ಲ. ಅದು, ಆ ಸಭೆಯಲ್ಲಿ ಮಾಡಿದಂಥ ಶಿಫಾರಸ್. ಆ ಶಿಫಾರಸ್ಸಿನ ಬಗ್ಗೆ ಸರ್ಕಾರ ಸೂಕ್ತವಾದ ನಿರ್ಣಯವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಸಿ. ಬೈರೇಗೌಡ:– ಇಂಡಸ್ಟ್ರೀಸ್‌ಗೆ ಪವರ್ ಕಟ್ ಜಾಸ್ತಿ ಮಾಡಿ, ವ್ಯವಸಾಯಕ್ಕೆ ಜಾಸ್ತಿ ವಿದ್ಯುತ್ ಕೊಡಿ ಎಂದು ಹೇಳಿದೆ. ಇದರ ಬಗ್ಗೆ ತಾವು ಉತ್ತರ ಹೇಳಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಕಿಬ್ಬನಹಳ್ಳಿಯಲ್ಲಿ ರಿಸೀವಿಂಗ್ ಸ್ಟೇಷನ್ ಆಗಿದೆ, ಫೈನಲ್ ಸ್ಟೇಜ್‌ನಲ್ಲಿದೆ; just because of batteries ಅದು ಕಮೀಷನ್ ಆಗಿಲ್ಲ. ಇದನ್ನು ತಾವು ಕಮೀಷನ್ ಮಾಡಿದರೆ, 4 ತಾಲ್ಲೂಕುಗಳ ಸಮಸ್ಯೆ ಬಗೆಹರಿಯುತ್ತಿತ್ತು. ಮತ್ತು ಎರಡು ಸಬ್ ಸ್ಟೇಷನ್ಸ್ ನಿಮ್ಮ ಕೆ.ಇ.ಬಿ. ಮುಂದೆ ಪೆಂಡಿಂಗ್ ಇವೆ. ಮತ್ತೆ ಸೂಪರ್‌ವಿಷನ್ ಆಫ್ ಲೈನ್

ಇಲ್ಲವೇ ಇಲ್ಲ. ಎಲ್ಲಾ ಕಡೆ ನೀವು ಸೆಕ್ಷನ್ ಆಫೀಸನ್ನು ಮಂಜೂರ್ಮಾಡಿದ್ದೀರಿ. ಎಲ್ಲಿಗೂ ಸ್ಟಾಫ್ ಕೊಡಲಿಲ್ಲ, ಪೋಸ್ಟನ್ನು ಕ್ರಿಯೇಟ್ ಮಾಡಲಿಲ್ಲ. ಇಂತಹ ಟೆಕ್ನಿಕಲ್ ಪ್ರಾಬ್ಲಮ್ ನಿವಾರಣೆ ಮಾಡಿದ್ದರೆ, ಈ ಬೇಸಿಗೆಯಲ್ಲಿ ನಾವು ಹೇಗೋ ನಿಭಾಯಿಸುತ್ತಿದ್ದೆವು. ಅದಕ್ಕೆ ಏನಾದರೂ ಹೇಳಬೇಕು. ಮತ್ತೆ ತುಮಕೂರು ಬಗ್ಗೆ ಎನ್.ಟಿ.ಪಿ.ಸಿ. ಪವರ್ ಕೊಡುತ್ತೇವೆಂದು ಹೇಳಿದ್ದುದು ನನಗೆ ಅಷ್ಟು ಸಮಾಧಾನ ತರಲಿಲ್ಲ. ನಮಗೆ ಶರಾವತಿ ಫೀಡರ್ ಮೇಲೆ ಪವರ್ ಬರುತ್ತಾ ಇರುವುದು. 11-12 ತಾಲ್ಲೂಕುಗಳು ಶಿವಮೊಗ್ಗದಿಂದ ಪೀಣ್ಯವರೆಗೆ ಇವೆ. ಶಿವಮೊಗ್ಗದಲ್ಲಿ ನಿಮ್ಮ ಸ್ಟೇಷನ್ ಬಿಟ್ಟರೆ, ಪೀಣ್ಯದಲ್ಲಿ ರಿಸೀವಿಂಗ್ ಸ್ಟೇಷನ್ ಇರುವುದು. ಈ ಮಧ್ಯೆ ಇರುವವರಿಗೆ ಎಲ್ಲಾರಿಗೂ ವೋಲ್ಟೇಜ್ ಪ್ರಾಬ್ಲಮ್ ಇದೆ. ನಮ್ಮ ಸ್ಟೇಷನ್ನಿಗೆ ಬರುವುದೇ 8.5 ಎಂ.ಎ ಪವರ್ 10 ಎಂ.ಎ. ಸ್ಟೇಷನ್ ಎಂದು ಹೇಳಿದರೆ, ಇದರಲ್ಲಿ ಒಂದು ಎಂ.ಎ. ರೆಡ್ಯೂಸ್ ಆದರೆ, 40 ವೋಲ್ಟ್ಸ್ ರೆಡ್ಯೂಸ್ ಆಗುತ್ತದೆ. ಒಟ್ಟು 60 ವೋಲ್ಟ್ಸ್, ಸ್ಟೇಷನ್‌ಗೇ ಕಡಿಮೆಯಾಗಿ ಬರುತ್ತಿದೆ. ಆದರಿಂದ, ನಮ್ಮದು ಎನ್.ಟಿ.ಪಿ.ಸಿ. ಪ್ರಾಬ್ಲಮ್ ಅಲ್ಲ. ಶರಾವತಿ ಪ್ರಾಬ್ಲಮ್ It is prevailing upto Gubbi. ಕಡೇ ಪಕ್ಷ ಮಲ್ಲಸಂದ್ರದವರೆಗೆ ನಮಗೆ ಪ್ರಾಬ್ಲಮ್ ಇದೆ. ಅದನ್ನು ರೆಕ್ಟಿಫೈ ಮಾಡಬಹುದಾಗಿತ್ತು. ಸಣ್ಣ ಕೆಲಸ ನಿಂತಿದೆ, ಬ್ಯಾಟರಿ ಬಗ್ಗೆ ವೆಸ್ಟ್ ಬೆಂಗಾಲ್‌ಗೆ ಆರ್ಡರ್ ಹಾಕಿದ್ದೀರಿ. ಅಲ್ಲಿಂದ ಬ್ಯಾಟರಿ ತರಿಸುವುದಕ್ಕಾಗದೇ, ರಿಸೀವಿಂಗ್ ಸ್ಟೇಷನ್ ಟೆಂಪರರಿ ಕಮೀಷನ್ ಆಗಿಲ್ಲ. ಆದಕ್ಕಾದರೂ ತುರ್ತು ಗಮನ ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಬರುವ ತಿಂಗಳಲ್ಲಿ ಆ ಕೆಲಸ ಮಾಡಿ ಮುಗಿಸುತ್ತಿದ್ದೇವೆ.

ಅಧ್ಯಕ್ಷರು:- ವಾಟಾಳ್ ನಾಗರಾಜ್

ಶ್ರೀ ವಾಟಾಳ್ ನಾಗರಾಜ್:- ದಯವಿಟ್ಟು ಸ್ವಾಮಿ ನನ್ನದು.

ಶ್ರೀ ಸಿ. ಬೈರೇಗೌಡ:- ಅವರು ಸುಸ್ತಾಗಿದ್ದಾರೆ, ಇವತ್ತು

ಶ್ರೀ ಬಿ.ಹೆಚ್. ಬನ್ನಿಕೋಡ್:- ನಾಗರಾಜ್ ಎಂದರೂ ಸುಮ್ಮನೆ ಕುಳಿತಿದ್ದಾರೆ ಆ ಪರಿಸ್ಥಿತಿ ಬಂದಿದೆ.

ಶ್ರೀ ಸಿ. ಬೈರೇಗೌಡ:- ಅವರು ಎಷ್ಟು ಸುಸ್ತಾಗಿದ್ದಾರೆ ಎಂದರೆ ಹಾರೆ ಹಾಕಿ ಎತ್ತಿದರೂ ಏಳುವ ಮಟ್ಟದಲ್ಲಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಆ ಪರಿಸ್ಥಿತಿ ಇಲ್ಲ, ತಾವು ಈ ವಿಚಾರ ತೆಗೆದುಕೊಳ್ಳುವುದಾದರೆ 12 ಘಂಟೆಯವರೆಗೂ ಕುಳಿತುಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ಬೇರೆ ವಿಚಾರ ತೆಗೆದುಕೊಳ್ಳುವುದಕ್ಕೆ ತಾವು ಒಪ್ಪುವುದಾದರೆ ನಾನು ಸಿದ್ಧನಾಗಿದ್ದೇನೆ.

ಅಧ್ಯಕ್ಷರು:- ನಾವು ಎಲ್ಲಿಯವರೆಗೆ ಕೂಡಬೇಕೆನ್ನುವುದು ವಿಚಾರದ ಗಹನತೆಯ ಮೇಲೆ ಇದೆ. ಗಹನವಾದ ವಿಚಾರ ಯಾವುದಾದರೂ ಎತ್ತಿ ಕೂರೋಣ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು:- ಮೀಟಿಂಗ್ ಕರೆಯುತ್ತಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ನನ್ನ ಕ್ಷೇತ್ರದಲ್ಲಿರುವ ಚಿಕ್ಕೆರೂರು ಮತ್ತು ಹಂಸಭಾವಿ ಎರಡು ಸಬ್‌ಸ್ಟೇಷನ್ ಮಂಜೂರಾಗಿದೆ. ಅಲ್ಲಿ ಕೆಲಸ ಪ್ರಾರಂಭವಾಗದೇ ಇದ್ದರೆ ಈಗಾಗಲೇ ಅಲ್ಲಿ ಅನೇಕ ಸತ್ಯಾಗ್ರಹ, ಗಲಾಟೆಗಳು ಪ್ರಾರಂಭವಾಗಿದೆ, ಆದಷ್ಟು ಬೇಗ ಪ್ರಾರಂಭ ಮಾಡಿ ಇದನ್ನು ಪೂರ್ಣಗೊಳಿಸಬೇಕೆಂದು ಹೇಳಿದೆ. ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಏನೂ ಹೇಳಲಿಲ್ಲ. ಅಲ್ಲಿ ಬಹಳ ಗಂಭೀರ ಪರಿಸ್ಥಿತಿ ಇದೆ. ಪ್ರಾರಂಭ ಯಾವಾಗ ಮಾಡುತ್ತೀರಿ, ಯಾವಾಗ ಮುಗಿಸುತ್ತೀರಿ ದಯಮಾಡಿ ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಅದು ಎರಡೂ ಕಾರ್ಯಕ್ರಮ ಬರುವ ವರ್ಷದ ಕಾರ್ಯಕ್ರಮದಲ್ಲಿ ಇದೆ. ಬರುವ ವರ್ಷ ಮಾಡೋಣ.

ಪ್ರಕಟಣೆ

ಜಂಟಿ ಪರಿಶೀಲನಾ ಸಮಿತಿಯ ಅವಧಿಯ ವಿಸ್ತರಣೆ

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, 1991ನೇ ಸಾಲಿನ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯಾ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿ ವರದಿಯನ್ನು ಒಪ್ಪಿಸಲು 31ನೇ ಮಾರ್ಚ್ 1993ರವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ''1991ನೇ ಸಾಲಿನ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯಾ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿ ವರದಿಯನ್ನು ಒಪ್ಪಿಸಲು 31ನೇ ಮಾರ್ಚ್ 1993ರವರೆಗೆ ಕಾಲಾವಧಿಯನ್ನು ವಿಸ್ತರಿಸಲು ಅನುಮತಿ ನೀಡುವುದು''.

(ಪ್ರಸ್ತಾವವನ್ನು ಅಂಗೀಕರಿಸಲಾಯಿತು)

ಕಾಲಾವಧಿಯನ್ನು ವಿಸ್ತರಿಸಲು ಸಭೆಯು ಒಪ್ಪಿಗೆ ನೀಡಿತು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಈ ಸದನವನ್ನು

ಅಧ್ಯಕ್ಷರು:- ರೆಸಲ್ಯೂಷನ್ ಇದೆ ಅದನ್ನು ಮುಗಿಸಿಬಿಡೋಣ

ಶಾಸನಾತ್ಮಕ ನಿರ್ಣಯ

Sri Blasius M D'Souza (Labour Minister):- Mr.Speaker sir, I beg to move the following Resolution:-

WHEREAS this Assembly considers that it is desirable to have an uniform law throughout India for the regulation of Veterinary training and practice and for all matters connected therewith or ancillary and incidental thereto.

AND WHEREAS the subject matter of such a law is relatable mainly to matters enumerated in entries 15 and 32 of List II and entry 26 of List III in the Seventh Schedule of the Constitution of India;

AND WHEREAS Parliament has no power to make such a law for the States with respect to the matters enumerated in entries 15 and 32 of List II aforesaid except as provided in article 249 and 250 of the Constitution of India;

AND WHEREAS by virtue of the powers under Clause(1) of article 252 of the Constitution and in pursuance of the resolutions passed by all the Houses of the Legislatures of the States of Haryana, Bihar, Orissa, Himachal Pradesh and Rajasthan, Parliament has passed the Indian Veterinary Council Act, 1984 (52 of 1984);